ವಿಜಯಪುರ ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳು

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕರು

ಲತಾ ವೈ.

ಮಾರ್ಗದರ್ಶಕರು

ಡಾ. ಕಲವೀರ ಮನ್ವಾಚಾರ

ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ಶಾಸನಶಾಸ್ತ್ರ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೬

ವಿಜಯಪುರ ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳು

(೨೦೧೬ನೇ ಸಾಲಿನ ಎಂ.ಫಿಲ್., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧನ ವಿದ್ಯಾರ್ಥಿನಿ
ಲತಾ ವೈ.

ಮಾರ್ಗದರ್ಶಕರು
ಡಾ. ಕಲವೀರ ಮನ್ವಾಚಾರ
ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ೫೮೩೨೭೬

೨೦೧೬

ಮಾರ್ಗದರ್ಶಕರ ದೃಢೀಕರಣ ಪತ್ರ

ವಿಜಯಪುರ ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳು ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು **ಲತಾ ವೈ.** ಅವರು ನನ್ನ ಮಾರ್ಗದರ್ಶನದಲ್ಲಿ ಎಂ.ಫಿಲ್. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ. ಕಲವೀರ ಮನ್ವಾಚಾರ)

ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ದಿನಾಂಕ: ೨೦.02.೧೬

ಸ್ಥಳ: ವಿದ್ಯಾರಣ್ಯ

ಘೋಷಣಾ ಪತ್ರ

ವಿಜಯಪುರ ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳು ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ. ಕಲವೀರ ಮನ್ವಾಚಾರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಸಮಾಜ ವಿಜ್ಞಾನಗಳ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Latha.y.

ದಿನಾಂಕ: 30/07/2016

ಸ್ಥಳ: ವಿದ್ಯಾರಣ್ಯ

(ಲತಾ ವೈ.)
ಸಂಶೋಧನ ವಿದ್ಯಾರ್ಥಿನಿ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನ

ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ಸ್ವರೂಪ

೧.೪. ಅಧ್ಯಯನದ ವಿಧಾನ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನ

ಪ್ರಸ್ತಾವನೆ

ವಿಜಯಪುರ ಜಿಲ್ಲೆಯನ್ನು 'ಕರ್ನಾಟಕದ ಪಂಜಾಬ್' ಎಂದು ಇಲ್ಲಿಯ ಪ್ರಾದೇಶಿಕ ವೈಶಿಷ್ಟ್ಯತೆಗೆ ಸಾಕ್ಷಿಯಾಗಿದೆ. ವಿಜಾಪುರ ಜಿಲ್ಲೆಯ ಶಾಸನಗಳನ್ನು ಅವಲೋಕಿಸಿದಾಗ ಅಲ್ಲಿನ ಇತಿಹಾಸ ಪ್ರಾರಂಭವಾಗುವುದೇ ರಾಷ್ಟ್ರಕೂಟರ ಕಾಲದಿಂದ ಯಾವುದೇ ದೇಶದ ರಾಜ್ಯದ ಮತ್ತು ಪ್ರಾಂತ್ಯದ ಇತಿಹಾಸ ಸೃಷ್ಟಿಗೆ ಆಧಾರಗಳು ಬಹಳ ಮುಖ್ಯ. ಈ ಆಧಾರಗಳು ಇಲ್ಲದೆ ಹೋದರೆ ಇತಿಹಾಸವನ್ನು ರಚಿಸಿವುದು ಕಷ್ಟ ಅದರಲ್ಲಿ ಸಾಹಿತ್ಯಾಧಾರಗಳಿಗಿಂತ ಶಾಸನಧಾರಗಳು ಅತ್ಯಂತ ನಂಬಿಕೆಯುಳ್ಳ ಅಕರಗಳಾಗಿವೆ. ಇವುಗಳು ಮಾನವನ ಇತಿಹಾಸದ ವಿಷಯದಲ್ಲಿ ನಮಗಿರುವ ಜ್ಞಾನವೆಲ್ಲ ಜ್ಞಾತದಿಂದ ಅಜ್ಞಾತಕ್ಕೆ ಹೋಗಿ ಸಂಪಾದಿಸಿದುದು. ಈ ಅಜ್ಞಾತವಾದುದೆಲ್ಲವು ಬಹುಮಟ್ಟಿಗೆ ಎಲ್ಲಾ ದೇಶಗಳಲ್ಲಿಯೂ ಶಾಸನಗಳಿಂದ ತಿಳಿದುಬರುತ್ತದೆ. ಭಾರತೀಯ ಸಂಸ್ಕೃತಿಯನ್ನು ಅಧ್ಯಯನ ಮಾಡುವವರಿಗೆ ಸಂಸ್ಕೃತ ಸಾಹಿತ್ಯದಂತೆಯೆ ಶಾಸನ ಸಾಹಿತ್ಯವೂ ವಿಷಯದ ಗಣಿಯಾಗಿದೆ. ಶಾಸನಗಳು ದೇಶವಾಸಿಗಳ ಜೀವನ ಮತ್ತು ಆಲೋಚನೆಗಳ ಬೇರೆ ಬೇರೆ ದೃಷ್ಟಿಕೋನಗಳ ಮೇಲೆ ಸಾಕಷ್ಟು ಬೆಳಕನ್ನು ಬೀರುತ್ತವೆ. ಇವುಗಳು ನಮ್ಮ ಸಂಸ್ಕೃತಿಯ ಐಕ್ಯತೆಯನ್ನು ಕಾಪಾಡುವಲ್ಲಿ ಪ್ರಧಾನವಾದ ಪಾತ್ರವನ್ನು ವಹಿಸಿವೆ. ಈಗಿನ ವಿಜಾಪುರ ಜಿಲ್ಲೆಯ ಇಂಡಿ, ಸಿಂದಗಿ, ವಿಜಾಪುರ, ಬಸವನಬಾಗೇವಾಡಿ ಮತ್ತು ಮುದ್ದೇಬಿಹಾಳವೆಂಬ ಐದು ತಾಲ್ಲೂಕುಗಳನ್ನು ಒಳಗೊಂಡಿದೆ. ಉತ್ತರಕ್ಕೆ ಭೀಮಾನದಿ, ದಕ್ಷಿಣಕ್ಕೆ ಕೃಷ್ಣಾನದಿ ಮೇರೆಯಾಗಿವೆ. ಇವೆರಡರ ಮಧ್ಯ ಡೋಣಿನದಿ ಹರಿಯುತ್ತದೆ. ಪೂರ್ವಕ್ಕೆ ಯಾದಗಿರಿ, ಪಶ್ಚಿಮಕ್ಕೆ ಗುಲ್ಬರ್ಗ ಜಿಲ್ಲೆ ಹಾಗೂ ಬೆಳಗಾವಿ ಜಿಲ್ಲೆ ಮಹಾರಾಷ್ಟ್ರದ ಗಡಿಗಳನ್ನು ಹೊಂದಿದೆ. ಹಿಂದಿನ ತರ್ದ್ದವಾಡಿನಾಡು ಹೆಚ್ಚುಕಡಿಮೆ ಈಗಿನ ವಿಜಾಪುರ ಜಿಲ್ಲೆಯನ್ನು ಆವರಿಸಿತ್ತು. ಹೀಗಾಗಿ ಹಿಂದಿನ ತರ್ದ್ದವಾಡಿನಾಡಿನ ಗಡಿಗಳೇ ಇಂದಿನ ವಿಜಾಪುರ ಜಿಲ್ಲೆಗೆ ಸರಿಸುಮಾರಾಗಿ ಅನ್ವಯಿಸುತ್ತವೆ. ಹಿಂದಿನ ತರ್ದ್ದವಾಡಿನಾಡಿನ ಪ್ರಮುಖ ಕೇಂದ್ರವಾಗಿದ್ದ ತರ್ದ್ದವಾಡಿಯೂ ಸೇರಿದಂತೆ ಅದರಲ್ಲಿ ಅಂತರ್ಗತವಾಗಿದ್ದ ನಾಡುಗಳು, ಮುಖ್ಯ ಗ್ರಾಮಗಳು ಇಂದು ಚಿಕ್ಕ ಹಳ್ಳಿಗಳಾಗಿವೆ.

ಜಿಲ್ಲೆಯಲ್ಲಿ ಮೂರು ನದಿಗಳು ಹರಿದರೂ ಡೋಣಿ ನದಿಯು ಮಳೆಗಾಲದಲ್ಲಿ ಮಾತ್ರ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಭೀಮಾ ಮತ್ತು ಕೃಷ್ಣಾನದಿಗಳು ದೊಡ್ಡ ನದಿಗಳು. ಈ ನದಿಗಳ ಮುಖ್ಯವಾದ ಅಂಶವೆಂದರೆ ಭೀಮಾನದಿಯ ದಂಡೆಯಲ್ಲಿ ಸಾಂಸ್ಕೃತಿಕ ಗ್ರಾಮಗಳು ಹುಟ್ಟಿಬೆಳೆದಂತೆ ಕೃಷ್ಣಾನದಿದಂಡೆ ಹಾಗೂ ಡೋಣಿನದಿದಂಡೆಯಲ್ಲಿ ಸಾಂಸ್ಕೃತಿಕ ಗ್ರಾಮಗಳು ಬೆಳೆಯದಿರುವುದು, ಇದೇ ಕೃಷ್ಣಾನದಿ ಆಂಧ್ರದಲ್ಲಿ ಸಾಂಸ್ಕೃತಿಕ ಗ್ರಾಮಗಳನ್ನು ಬೆಳೆಸಿದೆ.

ಹೀಗಾಗಿ ಕರ್ನಾಟಕದಲ್ಲಿ ಕಾವೇರಿ, ತುಂಗಾಭದ್ರ, ಘಟಪ್ರಭ, ಭೀಮಾನದಿಗಳಂತೆ ಇದು ಜನರ ಅನುಕೂಲದ ನದಿಯಾಗಿರಲಿಲ್ಲ. ಕಾವ್ಯಗಳಲ್ಲಿ ಇದನ್ನು ಪೆರ್ದೊರ ಕೃಷ್ಣಾವೇಣ್ಣಾ ಎಂದೂ, ಹುಚ್ಚುಹೊಳೆ ಎಂದು ಕರೆಯಲಾಗಿದೆ. ಈ ಕೊನೆಯ ಹೆಸರೆ ಕೃಷ್ಣಾ ಮತ್ತು ಡೋಣಿನದಿಗಳು. ಜನರಿಗೆ, ಜನರ ಬದುಕಿಗೆ ಮಾರಕವಾದುದನ್ನು ತಿಳಿಸುತ್ತವೆ. ಎಲ್ಲೋ ಬಿದ್ದ ಮಳೆ ಮುಂದೆ ಹರಿದು ಪ್ರವಾಹವಾಗಿ ಜನ ಜಾನುವಾರುಗಳನ್ನು ನಾಶಮಾಡುತ್ತಿದ್ದುದರಿಂದ ಇವುಗಳು ದಂಡೆಯಿಂದ ದೂರ ಅಥವಾ ಎತ್ತರದ ಪ್ರದೇಶಗಳಲ್ಲಿ ಗ್ರಾಮಗಳ ನಿರ್ಮಾಣವಾಗಿವೆ.

ಹೀಗಾಗಿ ಮಳೆಗಾಲದಲ್ಲಿ ಅಂಕೆಮೀರಿ ಹುಚ್ಚುಹೊಳೆಗಳಾಗಿ ಹರಿಯುತ್ತಿದ್ದುದರಿಂದ ನಾಗರಿಕತೆಯ ಆರಂಭದ ಕುರುಹುಗಳು ಇಲ್ಲಿ ದೊರೆಯುವುದು ಕಡಿಮೆ, ಭೀಮಾನದಿಯಲ್ಲಿ ನೆರೆಬಂದರೂ ಈ ಎರಡೂ ಹೊಳೆಗಳಷ್ಟು ವಿನಾಶಕಾರಿಯಾಗಿರುತ್ತಿರಲಿಲ್ಲ. ಹೀಗಾಗಿ ಇದರ ದಂಡೆಯಲ್ಲಿ ನಾಗರಿಕತೆಯ ಕುರುಹಾದ ಅಗ್ರಹಾರಗಳು, ದೇವಾಲಯಗಳು ರಚನೆಯಾಗಿವೆ. ಕೃಷ್ಣಾ ಮತ್ತು ಡೋಣಿನದಿಯ ಪಾತ್ರಗಳಲ್ಲಿ ಸಾಂಸ್ಕೃತಿಕ ಮಹತ್ವದ ಗ್ರಾಮಗಳು ಇಲ್ಲವೇ ಇಲ್ಲವೆಂದಲ್ಲ, ಆದರೆ ಅಂತಹ ಗ್ರಾಮಗಳ ಸಂಖ್ಯೆ ಕಡಿಮೆ. ಕೃಷ್ಣವೇಣಿನದಿಯ ದಕ್ಷಿಣದ ಉಪನದಿಗಳಾದ ಘಟಪ್ರಭಾ ಮತ್ತು ಮಲಪ್ರಭಾನದಿಗಳು ಭೀಮಾನದಿಯಂತೆ ಸೌಮ್ಯನದಿಗಳಾದರಿಂದ ಇವುಗಳ ದಂಡೆಯಲ್ಲಿ ಪ್ರಾಚೀನ ನಾಗರಿಕತೆಯ ಕುರುಹುಗಳು ದೊರಕುವುದಲ್ಲದೆ, ಅನೇಕ ನಗರಗಳು ಅಭಿವೃದ್ಧಿಯಾಗಿ ದೇವಾಲಯಗಳು ತನ್ಮೂಲಕ ಶಾಸನಗಳ ರಚನೆಯಾಗಿವೆ.

ಶಾಸನಗಳಿಂದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಸಾಧ್ಯವಾಗಿದೆ. ಆದ್ದರಿಂದ ನನ್ನ ಸಂಶೋಧನ ಪ್ರಬಂಧದ ವಿಷಯ **"ವಿಜಯಪುರ ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳು"** ಆಗಿರುವುದರಿಂದ ಇಲ್ಲಿಯ ಐತಿಹಾಸಿಕ ಹಿನ್ನೆಲೆಗಳನ್ನು ಹಾಗೂ ಜಿಲ್ಲೆಯ ಪೂರ್ವಪರತೆಯನ್ನು ಸಮಗ್ರವಾಗಿ ಪರಿಚಯಿಸಿಕೊಳ್ಳುವುದು ಅತ್ಯವಶ್ಯಕವಾಗಿದೆ. ಆದ್ದರಿಂದ ವಿಜಯಪುರ ಜಿಲ್ಲೆಯ ಇತಿಹಾಸ ಮತ್ತು ಐತಿಹಾಸಿಕ ಪರಂಪರೆಯ ಮುಖ್ಯ ಲಕ್ಷಣದ ಜೊತೆಗೆ ಈ ಜಿಲ್ಲೆಯಲ್ಲಿ ಲಭ್ಯವಾಗಿರುವ ಶಾಸನಗಳಲ್ಲಿನ ಸ್ಥಳಗಳನ್ನು ಚರ್ಚಿಸುವುದರ ಜೊತೆಗೆ ಪ್ರಸ್ತುತ ಅಧ್ಯಯನ ಮಾಡಲಾಗಿದೆ.

ಅಧ್ಯಯನದ ಉದ್ದೇಶ

ಇತ್ತೀಚಿನ ಸಂಶೋಧನೆಗಳು ತಲಸ್ಪರ್ಶಿ ಅಧ್ಯಯನಗಳಾಗಿದ್ದು ನವನವೀನ ಆಯಾಮಗಳನ್ನು ಮೈಗೂಡಿಸಿಕೊಂಡು ಮುನ್ನಡೆಯುತ್ತಿರುವುದು ಸೂಕ್ಷ್ಮ ಅಧ್ಯಯನಗಳಿಗೆ ನಾಂದಿಯಾಗಿದೆ, ಈಗಿನ ಈ ಅಧ್ಯಯನಗಳು ಕೆಳಮಟ್ಟದ ಪುನಾರಚನೆಯಾಗುತ್ತಿವೆ. ಒಂದು ನಾಡಿನ ಇತಿಹಾಸದಲ್ಲಿ ಪ್ರಧಾನವಾದ ಸ್ಥಳನಾಮಗಳಿಗೆ ನೀಡುವ ಮಹತ್ವವನ್ನು ಈ ಅಧ್ಯಯನದ ವಿಸ್ತೃತ ಸ್ವರೂಪದ ಅಧ್ಯಯನಕ್ಕೆ ಪುಷ್ಠಿ ನೀಡಿದಂತಾಗಿದೆ.

ಈ ಹಿನ್ನೆಲೆಯಲ್ಲಿ ವಿಜಯಪುರ ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳನ್ನು ಕುರಿತಂತೆ ಅಧ್ಯಯನವನ್ನು ಕೈಗೊಂಡಿದ್ದು ಈ ಅಧ್ಯಯನದ ಮೂಲಕ ಸ್ಥಳನಾಮಗಳ ಚರಿತ್ರೆ ಇತಿಹಾಸದ ರಚನೆಯಲ್ಲಿ ಪ್ರಾಮುಖ್ಯತೆ ಪಡೆಯಬಹುದು ಎಂಬುದರ ಹಿನ್ನೆಲೆಯಲ್ಲಿ ಸ್ಥಳನಾಮಗಳ ಹುಟ್ಟಿಗೆ ಜನಸಾಮಾನ್ಯರು ಹೇಗೆ ಕಾರಣರಾಗಿ ಕಂಡುಬರುತ್ತರೆ ಸ್ಥಳನಾಮಗಳ ವಿಶಿಷ್ಠತೆ ವಿಶೇಷತೆ ಸ್ಥಳದ ಹೆಸರುನಿಂದ ಬಂದಂತಹ ಪ್ರಮುಖ್ಯತೆ ಒಂದೊಂದು ಸ್ಥಳಕ್ಕೂ ವಿಶಿಷ್ಠ ರೀತಿಯಾದ ಹೆಸರನ್ನು ನೀಡಲು ಕಾರಣವೇನು ಮತ್ತು ಆ ಊರಿನ ವಿಶೇಷವೇನು ಒಂದೊಂದು ಗ್ರಾಮಕ್ಕೂ ತನ್ನದೇ ಆದಂತಹ ಪ್ರಾಮುಖ್ಯತೆಯನ್ನು ಹೊಂದಿರುವುದು ಹೇಗೆ ವಿಶೇಷವಾದ ವ್ಯಕ್ತಿಗಳ ಹೆಸರಿಂದ ಸಸ್ಯಗಳ ಹೆಸರು, ಪ್ರಾಣಿಗಳ ಹೆಸರು, ಇನ್ನೂ ಮುಂತಾದ ಹೆಸರುಗಳಿಂದ ಕೊಂಡಿರುವುದನ್ನು ಕಾಣಬಹುದು.

ಅಧ್ಯಯನದ ವ್ಯಾಪ್ತಿ

ಸಾಮಾನ್ಯ ಅರ್ಥದಲ್ಲಿ ವ್ಯಾಪ್ತಿ ಎಂದರೆ ಎಲ್ಲೆ, ಮೇರೆ, ಹರವು, ಗಡಿ, ವೈಶಾಲ್ಯತೆ ಅಥವಾ ಸೀಮಾರೇಖೆ ಎಂದಾಗುತ್ತದೆ. ಆದರೆ ಯಾವುದೇ ಒಂದು ವಿಷಯದ ವ್ಯಾಪ್ತಿ ಎಂದರೆ. ಆಕ್ಷೇತ್ರದ ವೈಶಾಲ್ಯತೆ ಹಲವು ಅಥವಾ ಅಧ್ಯಾಯನದ ಸೀಮಾರೇಖೆ ಎಂದರ್ಥ ಯಾವುದೇ ಸಂಶೋಧನೆಗೆ ಒಂದು ಚೌಕಟ್ಟು ಅಂದರೆ ವ್ಯಾಪ್ತಿ ಬಹಳ ಮುಖ್ಯ ನಿರ್ದಿಷ್ಟ ಹಾಗೂ ಉದ್ದೇಶ ಪೂರಿತವಾದ ಸಂಶೋಧನ ಯಶಸ್ಸು ಕಾಣಬೇಕೆಂದರೆ ಅದಕ್ಕೆ ಒಂದು ಚೌಕಟ್ಟು ಅಗತ್ಯ ಈ ಚೌಕಟ್ಟಿನ ಕ್ರಮಬದ್ಧತೆಯಿಂದ ಸ್ಪಷ್ಟವಾದ ಇತಿಹಾಸವನ್ನು ರಚಿಸಲು ಸಾಧ್ಯವಾಗುತ್ತದೆ ವ್ಯಾಪ್ತಿಗಳಿಂದ ಅಧ್ಯಯನವು ಗೊಂದಲಮಯವಾಗಿ ಸಂಶೋಧಕನ ಮಿತಿಯನ್ನು ತೀವ್ರಗೊಳಿಸುವುದಲ್ಲದೇ ಸಂಶೋಧಕನನ್ನ ದಾರಿ ತಪ್ಪಿಸುತ್ತದೆ.

ಸ್ಥಳನಾಮಶಾಸ್ತ್ರ ಎಂದು ಕರೆಯಲಾಗುವ ನಾಮಶಾಸ್ತ್ರ ಪ್ರಕಾರದಲ್ಲಿ ಗ್ರಾಮನಾಮಶಾಸ್ತ್ರ ಹಾಗೂ ಸ್ಥಳನಾಮಶಾಸ್ತ್ರ ಎಂಬ ಕವಲುಗಳಿವೆ. ಸ್ಥಳನಾಮ ನಾಮಪ್ರಕಾರದ ಸಮಗ್ರ ರೂಪವಾದರೆ, ಗ್ರಾಮನಾಮ ಎಂಬುದು ಅದರ ಸಂಕ್ಷಿಪ್ತ ವ್ಯಾಪ್ತಿಯ ರೂಪ. ಹಾಗೆಂದು ಇವೆರಡು ಪ್ರತ್ಯೇಕತೆಯಿಂದ ಏಕಕಾಲಕ್ಕೆ ಅಭಿನ್ನವೂ ಭಿನ್ನವೂ ಆಗಿಬಿಡುವ ಸಾಧ್ಯತೆ ಇದೆ. ಅವೆರಡರ ವಿಸ್ತೃತವಾದ

ಅಧ್ಯಯನದ ಮೂಲಕವೆ ನಾಮ ಅಧ್ಯಯನದ ಇಡಿಯಾದ ರೂಪವೊಂದರ ಗ್ರಹಿಕೆಯಾಗಲು ಸಾಧ್ಯವಿದೆ.

ಗ್ರಾಮನಾಮದ ಪರಿಧಿ ಮಾನವ ನಿರ್ಮಿತ ಸಂಸ್ಕೃತಿ ಒಂದರ ನೆಲೆಸುವಿಕೆಗೆ ಮಾತ್ರ ವ್ಯಾಪಿಸಿಕೊಂಡಿರುತ್ತದೆ. ಹಾಗೆ ನೋಡಿದರೆ ಇದು ಸ್ಥಳನಾಮ ಎಂಬ ಸಮಗ್ರತೆಯಲ್ಲಿ ಒಂದಾಗಿಯೇ ಇರುವುದನ್ನು ಗಮನಿಸಬಹುದು. ಭೌಗೋಳಿಕ ಸೃಷ್ಠಿಯ ಬೆಟ್ಟಗುಡ್ಡ, ತೊರೆ-ನದಿ, ಗದ್ದೆ ಮುಂತಾದವು ಅಲ್ಲದೇ ಕೆರೆ, ಕಾಲುವೆ, ಕುಂಟೆ ಎಂಬ ಕೆಲವು ಮಾನವ ನಿರ್ಮಿತ ಸ್ಥಳಗಳು ಸಮಗ್ರತೆಯಲ್ಲಿ ಒಳಗಾಗುತ್ತವೆ. ಈ ಕಾರಣದಿಂದಲೇ ಸ್ಥಳ ಮತ್ತು ಗ್ರಾಮನಾಮಗಳು ಏಕಕಾಲಕ್ಕೆ ಅಭಿನ್ನವಾಗುತ್ತವೆ. ಸ್ಥಳನಾಮಗಳ ಹೆಸರಿನ ಅಡಿಯಲ್ಲಿ ಗ್ರಾಮನಾಮಗಳು ಎಂಬ ಹೆಸರು, ನಿರ್ವಸತಿ, ವಸತಿ, ಸ್ಥಳನಾಮಗಳ ಅಧ್ಯಯನಗಳು ನಡೆದುಕೊಂಡು ಬಂದಿವೆ.

ಈ ಅಧ್ಯಾಯದಲ್ಲಿ ಇವರೆಗೆ ಸ್ಥಳನಾಮ ಅಧ್ಯಯನ ನಡೆದುಬಂದ ದಾರಿಯ ಸಂಕ್ಷಿಪ್ತ ವಿವರಣೆಯನ್ನು ನೀಡಲಾಗುತ್ತದೆ. ಅಂತೆಯೇ ಕನ್ನಡದಲ್ಲಿ ನಾಮಾಧ್ಯಯನ ಹೇಗೆ ಮುಂದುವರೆಯಿತು. ನಡೆದ ಅಧ್ಯಯನಗಳಲ್ಲಿ ಅನುಸರಿಸಲಾದ ಸಂಶೋಧನ ವಿಧಿವಿಧಾನಗಳು, ಕಂಡುಕೊಂಡ ಮಾದರಿಗಳು, ಹಾಗೆಯೇ ಸ್ಥಳನಾಮಶಾಸ್ತ್ರ ಬೆಳೆದಂತೆಲ್ಲ ಅಧ್ಯಯನ ಕ್ರಮದಲ್ಲಾದ ಬದಲಾವಣೆ ಅನುಸರಿಸಿದ ಮಾದರಿಗಳನ್ನು ನೋಡುವ ಪ್ರಯತ್ನವಾಗಿದೆ. ಕನ್ನಡದಲ್ಲಿ ಬಂದಂತಹ ಸ್ಥಳನಾಮ ಅಧ್ಯಯನ, ಕೃತಿಗಳ ವಿಷಯ ಅವಲೋಕನವನ್ನು ಮಾಡಲಾಗಿದೆ. ಅಂತೆಯೇ ಇಂಗ್ಲಿಷ್, ತೆಲುಗು ಭಾಷೆಯ ಕೆಲವು ಕೃತಿಗಳನ್ನು ಸಾಂದರ್ಭಿಕವಾಗಿ ವಿಷಯ ಅವಲೋಕನಕ್ಕೆ ಒಳಪಡಿಸಲಾಗಿದೆ.

ಪ್ರಸ್ತುತ ಅಧ್ಯಯನದ ವ್ಯಾಪ್ತಿಯ ಶಿರ್ಷಿಕೆಯೆನ್ವಯ ವಿಜಯಪುರ ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳಿಗೆ ಮಾತ್ರ ಸೀಮಿತವಾಗಿದ್ದು ಇಂಡಿ, ಬಸವನ ಬಾಗೇವಾಡಿ ವಿಜಯಪುರ, ಮುದ್ದೇಬಿಹಾಳ ಹಾಗೂ ಸಿಂದಗಿ ತಾಲ್ಲೂಕುಗಳ ಸ್ಥಳನಾಮಗಳನ್ನು ಮಾತ್ರ ನನ್ನ ಅಧ್ಯಯನದ ವ್ಯಾಪ್ತಿಗೆ ಬಳಸಿಕೊಂಡಿದ್ದೇನೆ, ಅಂದರೆ ಈ ಐದು ತಾಲ್ಲೂಕಿನಲ್ಲಿ ದೊರೆತ ಶಾಸನೋಕ್ತ ಸ್ಥಳನಾಮಗಳನ್ನು ಕಂಡುಬರುವಂತೆ ವಿಶೇಷವಾದ ಗ್ರಾಮನಾಮಗಳ ಬಗ್ಗೆ ಅಧ್ಯಯನ ಮಾಡಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ದಾಖಲಾತಿ ಮತ್ತು ವಿವರಣೆಗಳನ್ನೊಳಗೊಂಡಂತೆ ವಿಶ್ಲೇಷಣಾತ್ಮಕವಾಗಿರುತ್ತದೆ. ಮುಖ್ಯವಾಗಿ ವಿಜಯಪುರ ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳು ಗ್ರಾಮನಾಮಗಳ ಸ್ಥಳೀಯ ಪ್ರಾದೇಶಿಕ ಮತ್ತು ಸ್ಥಳ ಪುರಾಣ ಮತ್ತು ಸಂಶೋಧನಾತ್ಮಕವಾದ ಅಧ್ಯಯನವಾಗಿರುತ್ತದೆ. ಪ್ರಸ್ತುತ ಅಧ್ಯಯನದ ವಿಷಯವನ್ನು ಅಧ್ಯಯನದ ಅನುಕೂಲಕ್ಕಾಗಿ ಐದು ಅಧ್ಯಯನಗಳಾಗಿ ವಿಭಾಗಿಸಲಾಗಿದ್ದು ಪ್ರತಿಯೊಂದು ಅಧ್ಯಯವು ಉಪಶೀರ್ಷಿಕೆಗಳನ್ನೊಳಗೊಂಡಿದೆ.

ಮೊದಲನೆಯ ಅಧ್ಯಾಯ: ಅಧ್ಯಯನ ಉದ್ದೇಶ, ವ್ಯಾಪ್ತಿ, ಸ್ವರೂಪ, ವಿಧಾನ ಈ ವರೆಗಿನ ಅಧ್ಯಯನ ಸಮೀಕ್ಷೆಯ ವಿಷಯಗಳನ್ನೊಳಗೊಂಡಿದೆ. ಈ ಅಧ್ಯಾಯದ ಅಧ್ಯಯನಕ್ಕೆ ಸಹಾಯಕವಾದ ಆಕರಗಳು ಸೇರಿದಂತೆ ವಿಜಯಪುರ ಜಿಲ್ಲೆಯ ಸ್ಥಳನಾಮಗಳ ಬಗ್ಗೆ ಈ ಹಿಂದೆ ನಡೆದಿರುವ ಅಧ್ಯಯನಗಳು ವಿಧಾನಗಳನ್ನು ಕುರಿತು ಚರ್ಚಿಸಲಾಗಿದೆ. ಈ ವಿವರಗಳು ಪ್ರಸ್ತುತ ಸಂಶೋಧನ ಅಧ್ಯಯನಕ್ಕೆ ಅಗತ್ಯವಾದ ಹಿನ್ನೆಲೆಯನ್ನು ರೂಪಿಸುತ್ತವೆ ಎಂದು ಹೇಳಬಹುದು.

ಎರಡನೆಯ ಅಧ್ಯಾಯ: ಸ್ಥಳನಾಮಗಳ ವಿವೇಚನೆಗೆ ಸಂಬಂಧಿಸಿದಂತೆ ಮಾನವನು ತನ್ನ ಅಲೆಮಾರಿ ಜೀವನವನ್ನು ಕೈಬಿಟ್ಟು, ತನ್ನ ಅವಶ್ಯಕತೆಗಳನ್ನು ಸುವ್ಯವಸ್ಥಿತವಾಗಿ ಒಂದು ಸ್ಥಳದಲ್ಲಿ ಒಬ್ಬ ನಾಗರಿಕ ವ್ಯಕ್ತಿಯಾಗಿ ಹೇಗೆ ರೂಪಗೊಳ್ಳುತ್ತಾನೆ. ಆದಿಮಾನವನು ತಾನು ವಾಸಮಾಡುವ ಸ್ಥಳಕ್ಕೆ ಸಾಂಕೇತಿಕವಾಗಿ ಒಂದು ಹೆಸರನ್ನು ಸೂಚಿಸುವಂತಹ ಕಾರ್ಯ ಮಾಡುತ್ತಾನೆ. ಮಾನವನ ಜೀವನಕ್ರಮ ಮತ್ತು ಸ್ಥಳನಾಮಗಳ ಅರ್ಥ ಮತ್ತು ಇತಿಹಾಸ, ಸ್ಥಳನಾಮಗಳ ಹುಟ್ಟು ಮತ್ತು ಬೆಳವಣಿಗೆ, ಸ್ಥಳನಾಮಗಳ ವರ್ಗೀಕರಣದ ಮಾದರಿಗಳ ರೂಪುರೇಷಗಳನ್ನು ಭಾರತೀಯ ಮತ್ತು ಪಾಶ್ಚಾತ್ಯ ವಿದ್ವಾಂಸರುಗಳ ಹೇಳಿಕೆಗಳ ಮೂಲಕ ವಿವೇಚಿಸಲಾಗಿದೆ.

ಮೂರನೆಯ ಅಧ್ಯಾಯ: ವಿಜಯಪುರ ಜಿಲ್ಲೆಯ ಶಾಸನಗಳಲ್ಲಿ ಸ್ಥಳನಾಮಗಳಿಗೆ ಸಂಬಂಧಿಸಿದಂತೆ ಗ್ರಾಮನಾಮಗಳನ್ನು ಗುರುತಿಸುವುದು ಕೆಲವು ಸ್ಥಳನಾಮಕ್ಕೆ ವಿಶೇಷವಾಗಿ ಶಾಸನಗಳಲ್ಲಿ ಉಲ್ಲೇಖವಾಗಿರುವಂತಹ ಆ ಸ್ಥಳದ ಪೂರ್ವಪರತೆಯನ್ನು ತಿಳಿಸುವ ಮತ್ತು ಶಾಸನದ ವಿವರಣೆಯನ್ನು ಈ ಅಧ್ಯಯದಲ್ಲಿ ಕಂಡುಕೊಳ್ಳುವುದು ಅಧ್ಯಯನದಲ್ಲಿ ನಡೆದಿದೆ.

ನಾಲ್ಕನೆಯ ಅಧ್ಯಾಯ: ವಿಜಯಪುರ ಜಿಲ್ಲೆಯ ಶಾಸನಗಳನ್ನಾಧರಿಸಿ ಈ ಜಿಲ್ಲೆಯ ಸ್ಥಳನಾಮಗಳ ವಿಶ್ಲೇಷಣೆಯನ್ನು ಮಾಡಲಾಗುವುದು. ಈ ಸ್ಥಳಕ್ಕೆ ಬಂದಿರುವ ಹೆಸರಿನ ಮೂಲವನ್ನು ಹುಡುಕುವುದು ಮತ್ತು ಸ್ಥಳದ ಹೆಸರು ಏನನ್ನು ಸೂಚಿಸುತ್ತದೆ ಎನ್ನುವುದನ್ನು ತಿಳಿಯಬಹುದು.

ಐದನೆಯ ಅಧ್ಯಾಯ: ಈ ವಿಜಯಪುರ ಜಿಲ್ಲೆಯ ಸಮಗ್ರ ಅಧ್ಯಾಯನ ಮಾಡಲು ಸಹಾಯಕವಾದ ಆಕರ ಗ್ರಂಥಗಳು ಮತ್ತು ಅಲ್ಲಿಯ ರೋಪುರೇಷೆಗಳನ್ನು ನಕಾಶೆಗಳ ಮೂಲಕ ತಿಳಿಯುವಂತಹ ಪ್ರಯತ್ನ ಮತ್ತು ಸುಂದರವಾದ ನಕಾಶೆಗಳನ್ನು ಒಟ್ಟುಗೂಡಿಸಲಾಗಿದೆ.

ಅಧ್ಯಯನದ ವಿಧಾನ

ಯಾವುದೇ ಒಂದು ಕಾರ್ಯವು ಯಶಸ್ವಿಯಾಗಬೇಕಾದರೆ ಕ್ರಮಬದ್ಧತೆ ಅತೀಮುಖ್ಯ ಅದೇ ರೀತಿ ಸಂಶೋಧನಾ ಕಾರ್ಯಕ್ಕೂ ವ್ಯವಸ್ಥಿತ ಅಧ್ಯಯನಕ್ರಮ ಬಹಳ ಅವಶ್ಯಕವಾದುದು. ಅಂತೆಯೇ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳುವ ಮುನ್ನ ವಿಜಯಪುರ ಜಿಲ್ಲೆಗೆ ಸಂಬಂಧಿಸಿದಂತೆ ಮಾಹಿತಿ ಪಡೆದುಕೊಳ್ಳಲಾಯಿತು. ಹೀಗಾಗಲೇ ಸಂಶೋಧನೆ ಆಗಿರುವ ವಿಷಯಗಳೊಂದಿಗೆ

ಮಾರ್ಗದರ್ಶಕರೊಂದಿಗೆ ಸಲಹೆಯನ್ನು ಪಡೆದುಕೊಳ್ಳಲಾಯಿತು ಮತ್ತು ವಿಷಯವನ್ನು ಆಯ್ಕೆಮಾಡಿಕೊಳ್ಳಲಾಯಿತು ವಿಷಯದ ಆಯ್ಕೆಯ ಅಧಿಕೃತಗೊಂಡ ನಂತರ ವಿಜಯಪುರದ ಸ್ಥಳನಾಮಗಳಿಗೆ ಸಂಬಂದಿಸಿದ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಯಿತು ಮತ್ತು ಇದಕ್ಕೆ ಸಂಬಂಧಿಸಿದಂತೆ ಶಾಸನಗಳನ್ನು ಸಂಗ್ರಹಿಸುವುದರ ಜೊತೆಯಲ್ಲಿ ಬಿಡಿ ಲೇಖನಗಳು ನಿಬಂಧಗಳನ್ನು ಪತ್ರಿಕಾವರದಿಗಳನ್ನು ಸಿದ್ಧ ಪಡಿಸಲಾಯಿತು ನಂತರ ಅಧ್ಯಯನ ಮಾಡಿ ವಿಜಯಪುರದ ಸ್ಥಳನಾಮಗಳ ಶಾಸನ ಮತ್ತು ಇತರ ಆಕರಗಳಿಂದ ದೊರೆತ ಅಂಶಗಳನ್ನು ಕಲಾನುಕ್ರಮವಾಗಿ ದಾಖಲಿಸಿಕೊಳ್ಳಲಾಯಿತು. ತದನಂತರ ವಿಜಯಪುರ ಶಾಸನಗಳ ಕಾಲವನ್ನು ಗುರುತಿಸಿಕೊಂಡು ಮಾಹಿತಿಯನ್ನು ಒಂದೆಡೆ ಸಂಗ್ರಹಿಸಲಾಯಿತು. ಹಾಗೆಯೇ ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಮತ್ತು ಕನ್ನಡ ವಿಶ್ವವಿದ್ಯಾಲಯ ಹಂಪಿ ಗ್ರಂಥಾಲಯಗಳಿಗೆ ಭೇಟಿ ನೀಡಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಾಹಿತ್ಯಕ ದಾಖಲೆಗಳನ್ನು ಪರಿಶೀಲಿಸಿ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ.

* * *

ಅಧ್ಯಾಯ ಎರಡು

ಸ್ಥಳನಾಮಗಳ ವಿವೇಚನೆ

ಸ್ಥಳನಾಮಗಳ ವಿವೇಚನೆ

ಮಾನವನು ತನ್ನ ಅಲೆಮಾರಿ ಜೀವನವನ್ನು ಕೈಬಿಟ್ಟು ಪ್ರಕೃತಿಯಲ್ಲಿ ತನ್ನ ಜೀವನ ಒಗ್ಗಿಸಿಕೊಳ್ಳುವುದು ಸಾಧ್ಯ ಎಂಬುದನ್ನು ಮನಗಂಡನೋ ಆಗ ಊರು-ಹಳ್ಳಿಗಳ ಉಗಮವಾಯಿತು. "ನೆಲದೊಂದಿಗೆ ಹೋರಾಡುವ ಪ್ರಕ್ರಿಯೆಯಲ್ಲಿ ತಾನು ನೆಲೆಗೊಂಡ ಸ್ಥಳದ ಜತೆಗೆ ತನ್ನನ್ನು ತಾನು ತೊಡಗಿಸಿಕೊಂಡ ಸಂಕೇತವಾಗಿ ಆ ಸ್ಥಳಕ್ಕೆ ಆತ ಒಂದು ಹೆಸರಿತ್ತ. ಆ ಸ್ಥಳ ಅವನ ಜೀವನದಲ್ಲಿ ಹಾದುಹೋದ ಕುರುಹಾಗಿ ಒಂದು ಹೆಸರು ತಳೆಯಿತು. ಕ್ರಮೇಣ ಅಲ್ಲಿ ಜನವಸತಿ ಇರಲಿ ಇರದಿರಲಿ ಒಂದು ಜನಾಂಗದ ಸ್ಮೃತಿಯನ್ನು ಹೊತ್ತ ಆ ಗುರುತು ಪಟ್ಟಿಕೆ ಹಾಗೆಯೇ ಬಳಕೆಯಾಗುತ್ತಿತ್ತು. ಹಲವು ಜನಾಂಗಗಳ ಸ್ಮೃತಿಯ ಒಂದು ಕೊಂಡಿ ಎನಿಸಿತು. ಈ ಕೊಂಡಿಯೇ ಸ್ಥಳನಾಮ."[೧] ಸ್ಥಳನಾಮಗಳು ಇಂದು ಚರಿತ್ರೆಯ ಪ್ರಧಾನ ಆಕರಗಳೆನಿಸಿದ ಶಾಸನಗಳು ಅಥವಾ ಅವುಗಳಿಗಿಂತ ಹೆಚ್ಚು ವಿಶ್ವಾಸನೀಯವಾಗಿ ಮತ್ತು ಚಾರಿತ್ರಿಕ ಆಕರಗಳು ಒದಗಿಸುವ ಸಾಕ್ಷ್ಯಾಧಾರಗಳ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚುವ ಸಾಧನಗಳಾಗಿವೆ.[೨]

ಸ್ಥಳನಾಮಗಳು ಮಾನವ ಜನಾಂಗದವರು ರೂಪಿಸಿಕೊಂಡ ಜೀವನ ವಿಧಾನದ ಹಾಗೂ ನಾಗರಿಕತೆಯ ವಿವಿಧ ಹಂತದ ಚಿತ್ರಣಗಳನ್ನು ನೀಡುತ್ತವೆ. ಇವುಗಳು ಇತಿಹಾಸ, ಪುರಾಣ, ಧರ್ಮ, ಸಂಸ್ಕೃತಿ, ಜನರ ಆಚಾರ-ವಿಚಾರ, ಭಾಷೆಯ ಪ್ರಭಾವ, ಭೂಸ್ಥಿತಿ ಮೊದಲಾದ ಅಂಶಗಳನ್ನು ತಿಳಿಸುತ್ತವೆ.[೩] ಸ್ಥಳನಾಮಗಳು ಪುರಾತನ ಕಾಲದಿಂದಲೂ ಹುಟ್ಟಿ ಬೆಳೆದುಬಂದಿದೆ. ಭೌಗೋಳಿಕ-ಜನಾಂಗಿಕ, ಜಾನಪದೀಯ-ಸಾಂಸ್ಕೃತಿಕ ಮುಂತಾದ ನೆಲೆಗಟ್ಟಿನ ಮೇಲೆ ಇವು ಹುಟ್ಟಿಕೊಂಡಿವೆ. ಸ್ಥಳನಾಮಗಳನ್ನು ಅಧ್ಯಯನಕ್ಕೆ ಅಳವಡಿಸುವುದರಿಂದ ನಾಡಿನ ಭೌಗೋಳಿಕ ಸ್ಥಿತಿಗತಿ ಹಾಗೂ ಮಾನವನ ಸಾಂಸ್ಕೃತಿಕ ಬದುಕನ್ನು ಅರಿಯಬಹುದು.[೪]

ಮಾನವ ತನ್ನ ಅಲೆಮಾರಿ ಜೀವನದಿಂದ ಹೊರಬಂದು ಒಂದೆಡೆ ನೆಲೆನಿಂತು ಬದುಕಲು ಪ್ರಾರಂಭಿಸಿದಾಗ ಅವನಲ್ಲಿ ಒಂದು ಸ್ಥಳದ ಪರಿಕಲ್ಪನೆ ಮೂಡಲು ಆರಂಭಿಸಿತು. ಸಂಘ ಸಮುದಾಯ ಜೀವನ ಹಾಗೂ ನಾಗರಿಕ ಜೀವನ ಬೆಳೆದ ಈ ಹಂತವು ಗ್ರಾಮ ಕಲ್ಪನೆಯ ಪೂರ್ವಸ್ಥಿತಿ. ಆದಿಮಾನವ ಮೂಲತಃ ಅಲೆಮಾರಿಯಾಗಿ ಪಶುಪಾಲನೆಯನ್ನು ಕೈಗೊಂಡ ಮೇಲೆ

ಒಂದೊಂದು ಪ್ರದೇಶದಲ್ಲಿ ಅನುಕೂಲಕರ ಸ್ಥಳವನ್ನು ಹರಸುತ್ತಾ ನಿಂತಾಗ ಹುಟ್ಟಿಕೊಂಡ ಇಂಥ 'ಹಟ್ಟಿ'ಗಳು ಸ್ಥಳನಾಮಗಲ್ಲೇ ಅತ್ಯಂತ ಪ್ರಾಚೀನ ಘಟಕಗಳು.[೫] ಮಾನವ ಅಲೆಮಾರಿ ಜೀವನವನ್ನು ಬಿಟ್ಟು ಒಂದೇ ಕಡೆ ಶಾಶ್ವತವಾಗಿ ನೆಲೆನಿಂತಾಗ ಆ ಪ್ರದೇಶವನ್ನು ನೆನಪಿಟ್ಟುಕೊಳ್ಳುವುದಕ್ಕೆ ಪ್ರಕೃತಿ ಅವನ ಸಹಾಯಕ್ಕೆ ಬಂದಂತೆ ತೋರುತ್ತದೆ.

ಎತ್ತರದ ಅಥವಾ ತಗ್ಗಿನ ಎಡೆಯಾಗಿರಬಹುದು. ಕಲ್ಲು, ಮಣ್ಣು, ಮಣ್ಣಿನ ಬಣ್ಣ, ಮರ, ಸಸ್ಯ, ಪಶು–ಪಕ್ಷಿ, ನದಿ–ಹೊಳೆ, ಬೆಟ್ಟ–ಗುಡ್ಡ ಪ್ರಕೃತಿಯ ಈ ಅಂಶಗಳು ಆದಿಮಾನವನ ನೆಲೆಯನ್ನು ನೆನಪಿಟ್ಟುಕೊಳ್ಳಲು, ಗುರುತಿಸಲು ಸಹಾಯ ಮಾಡಿದವು. ಆದ್ದರಿಂದಲೇ ಪ್ರಾಚೀನ ಸ್ಥಳನಾಮಗಳು ನಂತರ ಜನಾಂಗವಾಚಿ, ವ್ಯಕ್ತಿವಾಚಿಗೆ ಬದಲಾಗಲು ಮುಂದಾದವು.[೬] ಈ ಕಾಲಘಟ್ಟದಲ್ಲಿ ಯಾವುದೇ ಒಂದು ಸ್ಥಳಕ್ಕೆ ಹೆಸರಿಡುವ ಸಂದರ್ಭದಲ್ಲಿ ಅನೇಕ ಬಗೆಯ ಬದಲಾವಣೆಗಳಾದವು. ಇಂತಹ ಬದಲಾವಣೆಯ ಸಂದರ್ಭದಲ್ಲಿ ಸಂಸ್ಕೃತಿ ಸಮುದಾಯಗಳ ವಿಕಾಸದ ಹಾದಿಯನ್ನು ಕಂಡುಕೊಳ್ಳಬಹುದು. ಪ್ರತಿಯೊಂದು ಗ್ರಾಮಗಳು ತನ್ನದೇ ಆದ ಸಂಸ್ಕೃತಿಯನ್ನು ಹೊಂದಿವೆ. ಸ್ಥಳನಾಮಗಳು ಸಂಸ್ಕೃತಿ ಅಧ್ಯಯನದ ಪ್ರಮುಖ ಅಂಶಗಳಲ್ಲಿ ಒಂದು ಯಾವುದೇ ಒಂದು ಹೆಸರಿನಲ್ಲಿ ಜೀವನ ಕ್ರಮದ ಚರಿತ್ರೆಯಿರುತ್ತದೆ ಎಂಬುದನ್ನು ಗಮನಿಸಬೇಕು. ಅಂದರೆ ನೇರವಾಗಿ ಜೀವನಕ್ರಮದ ಸಂಗತಿಗಳನ್ನು ಹೇಳುವುದಿಲ್ಲವಾದರೂ ಅದರ ಒಪ್ಪಂದವನ್ನು ಪರೋಕ್ಷ ನೆಲೆಯಲ್ಲಿ ತೆರೆದು ತೋರಿಸುವ ಮೂಲಾಧಾರಗಳಾಗಿ ನಾಮಗಳು ಮಹತ್ವದ ಪಾತ್ರವಹಿಸುತ್ತವೆ. ಅದರಲ್ಲಿಯೇ ಸಂಸ್ಕೃತಿಯ ವೈವಿಧ್ಯತೆಗಳನ್ನು ಪ್ರಾದೇಶಿಕವಾಗಿ ಯಥಾಸ್ಥಿತಿಯಲ್ಲಿ ಹೇಳಲು ಅಧ್ಯಯನಕ್ಕೆ ತೊಡಗಿರುವಾಗ ಸ್ಥಳನಾಮಗಳು ಪ್ರಮುಖ ಪಾತ್ರವಹಿಸುತ್ತವೆ. ನಮಗೆ ಅತ್ಯಂತ ನಿಕಟ ಸಂಬಂಧವನ್ನೊಂದಿದೆ. ಗ್ರಾಮನಾಮ, ಸ್ಥಳನಾಮಗಳಿಂದ ವಿಭಿನ್ನ ಬಗೆಯ ಸಾಂಸ್ಕೃತಿಕ ಚಹರೆಗಳನ್ನು ಗುರುತಿಸಲು ಸಾಧ್ಯ. ಕಾರಣ ಪ್ರಾಮಾಣಿಕ ಸಾಂಸ್ಕೃತಿಕ ಪ್ರಜ್ಞೆಯುಳ್ಳ ವ್ಯಕ್ತಿಗಳು ಹಾಗೂ ಸಮಾಜ ಸ್ಥಳನಾಮಗಳನ್ನು ಪ್ರಮುಖ ಆಕರಗಳೆಂದು ಭಾವಿಸಿದಲ್ಲಿ ವಾಸ್ತವತೆಯ ತಳಹದಿಯಿಂದ ಸಂಸ್ಕೃತಿ ಅಧ್ಯಯನಕ್ಕೆ ತೊಡಗಲು ಸಾಧ್ಯವಾಗುತ್ತದೆ. ಆದುದರಿಂದ ಯಾವುದೇ ಪ್ರದೇಶದ ಸಾಂಸ್ಕೃತಿಕ ಅಧ್ಯಯನದಲ್ಲಿ ಸ್ಥಳನಾಮಗಳ ವಸ್ತುನಿಷ್ಠ ಅಧ್ಯಯನ ಬಹುಮುಖ್ಯವಾದದು.

ಸ್ಥಳನಾಮಗಳ ಅರ್ಥ ಮತ್ತು ಇತಿಹಾಸ

ಸ್ಥಳನಾಮಗಳ ಅರ್ಥ:

ಆಂಗ್ಲ ಭಾಷೆಯಲ್ಲಿ ಸ್ಥಳನಾಮಶಾಸ್ತ್ರಕ್ಕೆ Toponomy ಎನ್ನುವುದಿದೆ. ಇದು ಮೂಲತಃ ಗ್ರೀಕ್ Topostnomos ಎಂಬೆರಡು ಸಂಯುಕ್ತ ಪದಗಳಿಂದ ಬಂದಿದೆ. Topos ಎಂದರೆ Place ಸ್ಥಳವಾದರೆ, nomos ಅಂದರೆ 'A study of' ಹಾಗಾದರೆ Toponomy

(Toponymy)[೭] ಎಂಬುದು ಸ್ಥಳದ ಕ್ಷೇತ್ರ ಅಧ್ಯಯನ ಎಂದಾಯಿತು. ಇತ್ತೀಚೆಗೆ ಅದೊಂದು ವಿಜ್ಞಾನದ ಶಾಖೆಯಾಗಿ ಸುವ್ಯವಸ್ಥಿತ ಶಾಸ್ತ್ರವಾಗಿ ಬೆಳೆದುಬಂದಿದೆ. ಆದ್ದರಿಂದ ಅದನ್ನು a science of, place names ಸ್ಥಳಗಳನ್ನು-ಸ್ಥಳನಾಮಗಳನ್ನು ಕುರಿತು ಅಧ್ಯಯನ ಮಾಡುವ ವಿಜ್ಞಾನ ಎಂದೇ ವ್ಯಾಖ್ಯಾನಿಸಬಹುದು.

ಸ್ಥಳನಾಮಶಾಸ್ತ್ರದ ಬೆಳವಣಿಗೆ ಈಚಿನದು. ನಮ್ಮ ದೇಶದ ಮಟಕ್ಕುಂತೂ ಇದು ತೀರಾ ಹೊಸತಾದುದೆನ್ನಬಹುದು. ಸ್ಥಳನಾಮಗಳಿಗೆ ಒಂದು ಮಹತ್ವದ ಅರ್ಥ ಇದೆಯೆಂದೂ, ಆ ಅರ್ಥವನ್ನು ಆ ಸ್ಥಳದ ಹಳೆಯ ನಾಮರೂಪವನ್ನು ಪರಿಶೀಲಿಸುವುದರ ಮೂಲಕ ಖಚಿತಪಡಿಸಿಕೊಳ್ಳಬಹುದೆಂದೂ ಮೊತ್ತಮೊದಲು ತೋರಿಸಿಕೊಟ್ಟ ಕೀರ್ತಿ Gottfried wilhem Leibniz (೧೭೬೮) ಎಂಬ ವಿದ್ವಾಂಸರಿಗೆ ಸಲ್ಲುತ್ತದೆ. ಆದ್ದರಿಂದ ಇವನನ್ನು ಸ್ಥಳನಾಮಶಾಸ್ತ್ರದ ಪಿತಾಮಹ ಎಂದು ಸಂಭಾವಿಸಲಾಗಿದೆ.

ಸ್ಥಳನಾಮಾರ್ಥ ವಿವರಣೆಯ ಆರಂಭದ ಯತ್ನಗಳು ಕ್ರಮಬದ್ಧವಾಗಿರಲಿಲ್ಲವಾಗಿ ಅವೈಜ್ಞಾನಿಕವಾದವು. ಸುಮಾರು ೧೮೪೦ ರ ನಂತರ ಐರೋಪ್ಯ ರಾಷ್ಟ್ರಗಳಲ್ಲಿ ಸಂಯೋಜಿತ ಸ್ಥಳನಾಮ ಅಧ್ಯಯನ ಮೊದಲಿತೆನ್ನಬಹುದು. ಭಾಷಾ ಚರಿತ್ರೆಯ ಚಳುವಳಿಗೆ ಕೂಡಾ ಇದಕ್ಕೆ ಸಹಕಾರಿಯಾಯಿತು. ಈ ಅವಧಿಯ ಚೊಚ್ಚಲ ಕೊಡುಗೆಗಳ ಪೈಕಿ ಫಾಯರ್ ಸ್ಟೆಮ್ಯೊನನ Altdeutches Nemen buch ಮತ್ತು ಐಸಾಕ್ ಟೇಲರನ Words and places ಉಲ್ಲೇಖನೀಯವಾದುದು.

ಕ್ರಿ.ಶ.೧೮೭೧-೧೮೮೪ರ ಈ ಅವಧಿಯನ್ನು 'ಎಗ್ಲಿ' ಎಂಬ ವಿದ್ವಾಂಸ ಸ್ಥಳನಾಮಶಾಸ್ತ್ರದ ಗತಿಶೀಲ ಬೆಳವಣಿಗೆಯ ಕಾಲ ಎಂದು ಕರೆದಿದ್ದಾನೆ. ಈ ವೇಳೆಗಾಗಲೇ ಸ್ಥಳನಾಮ ಶೋಧನೆಗೆ ಭದ್ರ ತಳಪಾಯ ಹಾಕಲಾಗಿತ್ತು. ಅದರ ಪ್ರಯೋಜನದ ಅರಿವು ಮೂಡಿತ್ತು. ಅಧ್ಯಯನದ ವಿಧಾನಗಳು ಸುಧಾರಿಸಿತ್ತು. ಹೆಸರುಗಳ ರಚನೆ ಮತ್ತು ಸನ್ನಿವೇಶ (Context) ಗಳ ಮಹತ್ವವನ್ನು ಕಂಡುಕೊಂಡಿತ್ತು. ಅಲ್ಲದೆ ಕೆಲವು ಮೂಲತತ್ವಗಳನ್ನು ಅಂಗೀಕರಿಸಲಾಗಿತ್ತು. ಈ ಕಾಲದ ಅತ್ಯಂತ ಮೇಧಾವಿಯಾದ ವಿದ್ವಾಂಸ ಜೆ.ಜೆ.ಎಗ್ಲಿ ಅವನನ್ನು 'ಇಂಗ್ಲಿಷ್ ಸ್ಥಳನಾಮಗಳಲ್ಲಿ ಅತಿ ಶ್ರೇಷ್ಠ ಪಂಡಿತ' ಎಂದು ಮಾನ್ಯಮಾಡಿದ್ದರು.[೮]

ಸ್ಥಳನಾಮದ ಇತಿಹಾಸ

ಒಂದು ಸ್ಥಳದ ಹೆಸರಿನ ಅಧ್ಯಯನ ಮಾಡುವ ವ್ಯಕ್ತಿ ಆ ಸ್ಥಳದ ಸನ್ನಿವೇಶ, ಭೌಗೋಳಿಕ ಪರಿಸರ ಮತ್ತು ಪ್ರಾಕೃತಿಕ ದರ್ಶನವನ್ನು ಮನಗಾಣಲೇಬೇಕು. ಆ ಸ್ಥಳದ ಮೂಲವನ್ನು ತಿಳಿಯಲು ಆತನು ಯತ್ನಿಸಬೇಕು. ಒಂದು ನಿರ್ದಿಷ್ಟ ಕಾಲದಲ್ಲಿ ತಲೆಯೆತ್ತಿದ ಸ್ಥಳನಾಮಗಳ

ಹೆಸರಿನಲ್ಲಿ ಆ ಸ್ಥಳದ ಭೂವಿಶೇಷ ಅಡಕವಾಗಿದ್ದು ಇನ್ನೊಂದು ಸ್ಥಳದ ಹೆಸರನ್ನು ಪ್ರತ್ಯೇಕಿಸುವ ಅವಕಾಶ ಮಾಡಿಕೊಡುವಂತಾಗುತ್ತದೆ. ಈ ಪ್ರಧಾನ ಅಂಶವೇ ಸ್ಥಳನಾಮಗಳ ಹುಟ್ಟಿಗೆ ಕಾರಣವಾಗಿದೆ.

ಸ್ಥಳನಾಮಗಳು ತಮ್ಮದೇ ಆದ ವಿಶಿಷ್ಟ ರೀತಿಯ ಹೆಸರುಗಳಿಂದ ಕೂಡಿರುತ್ತವೆ. ಕೆಲವು ಸ್ಥಳನಾಮಗಳ ಹೆಸರನ್ನು ಕೇಳುತ್ತಿದ್ದಂತೆಯೇ ಅವು ಸ್ಫೂರ್ತಿಯ ಬುಗ್ಗೆಗಳಾಗಿ ಹೊರಹೊಮ್ಮುತ್ತವೆ. ಅಂಥ ಸ್ಥಳನಾಮಗಳು ಕೇವಲ ವ್ಯಕ್ತಿಗಷ್ಟೇ ಸೀಮಿತವಲ್ಲ. ಹಳ್ಳಿ, ನಗರ, ನದಿ, ಊರು, ಬೆಟ್ಟ-ಗುಡ್ಡ, ಸರೋವರ, ಬಯಲು, ಕಣಿವೆ, ಕಂದರ, ಪರ್ವತ ಇತ್ಯಾದಿಗಳಿಗೂ ಸ್ಥಳನಾಮಗಳು ಹಲವು ರೀತಿಯಾಗಿ ವಿಸ್ತರಿಸಿದೆ. ಯಾವುದೇ ಊರಿಗೆ ಇಟ್ಟ ಹೆಸರು ಬೇರೆಯಾದರೂ ಐತಿಹಾಸಿಕ ಹಾಗೂ ಪೌರಾಣಿಕ ಹಿನ್ನೆಲೆಯಿಂದ ನಿರ್ದಿಷ್ಟವಾದ ಹೆಸರು ಬಂದಿರುತ್ತದೆ.

ಒಂದು ಕಡೆ ನೆಲೆ ನಿಲ್ಲುವ ನೆಲ ಭದ್ರವಾಗಿ ಬೇರೂರುವ ಊರು. ವ್ಯವಸಾಯಕ್ಕೆ ಸಂಬಂಧಿಸಿದ ಗದ್ದೆ, ತೋಟ, ಕೆರೆ-ಕಟ್ಟೆ, ಕ್ಷೇತ್ರ, ಏರಿ, ಆಸರೆಗಾಗಿ ನಿರ್ಮಿಸಿಕೊಂಡ ಮನೆ, ಹಳ್ಳಿ, ಗ್ರಾಮ, ಪೇಟೆ, ಪತ್ತನ ಮುಂತಾದವುಗಳು ಮಾನವನ ಜೀವನ ವಿಕಾಸದ ಚಾರಿತ್ರಿಕ ಹಂತಗಳನ್ನು ಹಾದುಹೋದ ಕುರುಹುಗಳು ಸ್ಥಳನಾಮ ಉಗಮದಿಂದಲೇ ತಿಳಿಯುತ್ತೇವೆ.

ಈ ಭೂಮಿಯ ಮೇಲೆ ಮನುಕುಲದ ಸೃಷ್ಟಿಯಾದ ಮೇಲೆ ಆತನ ಜೀವನಕ್ಕೆ ಒಂದು ನಿಶ್ಚಿತ ನೆಲೆ ಕಂಡುಕೊಳ್ಳಬೇಕಾಯಿತು. ಆ ನೆಲೆಯೇ ಕಾಡು-ಮೇಡು, ಹಳ್ಳ, ಹೊಳೆ, ನದಿತಟಗಳಾದವು. ಕೃಷಿ ನಿರತನಾದ ಮಾನವ ಅನಂತರದಲ್ಲಿ ಅನಾಗರಿಕತೆಯ ಜೀವನದಿಂದ ನಾಗರಿಕತೆಯ ಹೊಸ್ತಿಲಲ್ಲಿ ಸಾಗತೊಡಗಿದ. ತನ್ನ ಜೀವನವನ್ನು ವ್ಯವಸ್ಥಿತವಾಗಿ ನಡೆಸಲು ವಿವಿಧ ವೃತ್ತಿಯನ್ನು ಕೈಗೊಂಡನು. ಕಮ್ಮಾರ, ಕುಂಬಾರ ಬಡಗಿ, ಗಾಣಿಗ, ಪರಿವಾರ, ಪೂಜಾರಿ, ಈಡಿಗ, ಮಡಿವಾಳ, ಸೋನಗಾರ, ಹಾವಾಡಿಗ, ಕಂಚುಗಾರ, ಬಿಲ್ಲಾರ ಮುಂತಾದವರಿಗೆ ಅವರವರ ವೃತ್ತಿಗಳೇ ಪ್ರಮುಖವಾದವು.[1] ಹೀಗೆ ಪ್ರಾಮುಖ್ಯತೆ ಪಡೆದುಕೊಂಡ ವಿವಿಧ ವೃತ್ತಿಯ ಜನರು ಸತ್ತ ನಂತರವೂ ಹಾಗೇ ಉಳಿದುಕೊಂಡು ಬಂದವು. ವೇದಕಾಲದ ಸುಮಾರಿಗೆ ಜಗತ್ತಿನ ಬಹುಪಾಲು ಜನರು ಕೃಷಿಕರಾಗಿದ್ದರೂ ಅವರ ವಾಸಸ್ಥಳ ಕಾಡೇ ಆಗಿದ್ದಿತು. ಆಗಿನ್ನೂ ಜನವಸತಿಯ ಪ್ರದೇಶಗಳು ಕಂಡುಬಂದಿರಲಿಲ್ಲವೆಂದೇ ಹೇಳಬಹುದು. ಏಕೆಂದರೆ ಬದುಕು ಸಾಗಿಸುವುದೇ ಅವರ ಪ್ರಮುಖ ಉದ್ದೇಶವಲ್ಲದೇ ಆಹಾರ ಅನ್ವೇಷಣೆ ಮೂಲಭೂತ ಪ್ರವೃತ್ತಿಯಾಗಿತ್ತು. ನದಿಯ ಸಮೀಪದಲ್ಲಿ ನೆಲೆ. ಮೀನು ಹಿಡಿವ ಜನರು ವಾಸಿಸುವ ನದಿತಟಗಳೇ 'ಬೆಸ್ತರ' ಕೇರಿಯಾದವು. ಅಂಥ ಜನರು ಹೊಳೆ, ಸಮುದ್ರ, ಸಾಗರಗಳ ಅಜುಬಾಜಿನಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸತೊಡಗಿದರು.

ಜನಪದರು ಹಟ್ಟಿಗಳನ್ನು ಕಟ್ಟಿಕೊಂಡು ಊರುಗಳಲ್ಲಿ ನೆಲೆಸಿ ಅಲೆಮಾರಿತನಕ್ಕೆ ವಿರಾಮ ಹಾಕಿರಬೇಕು. ಅಂದ ಮೇಲೆ ಸಾಮಾಜಿಕ ಕಲ್ಪನೆಗೆ, ರಾಜಕೀಯ ಸಂಸ್ಥೆಗಳ ಉಗಮಕ್ಕೆ,

ಇತಿಹಾಸದ ವಿಕಾಸಕ್ಕೆ ಮೇಲಾಗಿ ಸಂಸ್ಕೃತಿ ನಾಗರೀಕತೆಗಳ ಪ್ರಾಧುರ್ಭಾವಕ್ಕೆ ಹಟ್ಟಿ, ಪಾಡು ಊರುಗಳೇ ಮೂಲ. ಊರುಗಳ ಬೆಳವಣಿಗೆಯೊಡನೆ ಭಾಷೆಯ ವಿಕಾಸಗೊಳ್ಳುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ಜನರ ಏಳುಬೀಳುಗಳು ಇತಿಹಾಸದ ಸ್ಮೃತಿಗಳು, ವಿಚಾರ, ಸಂಸರ್ಗ ಭಾವನಾ ಸಂಘರ್ಷಗಳು ಅವುಗಳಲ್ಲಿ ಪ್ರತಿಫಲನಗೊಳ್ಳುತ್ತವೆ. ಹೀಗಾಗಿ ಸ್ಥಳನಾಮಗಳ ಇತಿಹಾಸವೇ ನಾಗರೀಕತೆಯ ಇತಿಹಾಸವಾಗುತ್ತದೆ.[೧೦]

ರಾಮಾಯಣ–ಮಹಾಭಾರತದಲ್ಲಿ ಬರುವ ರಾಮ, ಸೀತೆ, ಲಕ್ಷ್ಮಣ, ಕುಂತಿ, ಭೀಮ, ಅರ್ಜುನ, ಧರ್ಮರಾಯ, ಶಕುನಿ ಮುಂತಾದ ವ್ಯಕ್ತಿಗಳ ಹೆಸರುಗಳು ಪ್ರಚಾರದಲ್ಲಿವೆ.

ಉದಾ: ಕನ್ನಂಬಾಡಿ ಕಟ್ಟೆ > ಕೃಷ್ಣರಾಜ ಸಾಗರವಾದರೆ

ಅರಿಕುಠಾರ > ಚಾಮರಾಜನಗರವಾಗಿದೆ.

ಆದಿಮಾನವನು ವನ್ಯಜೀವಿಯಂತೆ ಉದರ ಪೋಷಣೆ, ದೇಹರಕ್ಷಣೆಗೆಲ್ಲ ನಿಸರ್ಗವನ್ನವಲಂಬಿಸಿದ್ದನು. ಅವನ ಜೀವನ ವ್ಯಾಪಾರ ಏಕಕ್ಷೇತ್ರಕ್ಕೆ ಸೀಮಿತವಾಗಿರಲಿಲ್ಲ. ಹಳ್ಳಕೊಳ್ಳಗಳು ಒಣಗಿದಂತೆಲ್ಲ, ಅವರು ಬೇರೆ ಬೇರೆ ಕಡೆಗೆ ಹೋಗುತ್ತಿದ್ದರು. ಇದು ನಮ್ಮ ನಾಡು, ಅದು ನಮ್ಮ ನಾಡು ಎಂಬುದಾಗಿ ಎಲ್ಲೆಯನ್ನು ಕಟ್ಟಿಕೊಂಡಿರಲಿಲ್ಲ. ಜಗತ್ತು ಭಗವಂತನದು, ಅದರ ಅನುಭೋಗ ಅವನ ಮಕ್ಕಳಿಗೆಲ್ಲ ಸಲ್ಲತಕ್ಕದೆಂಬ ಭಾವನೆಯು ಅವರಲ್ಲಿ ರಕ್ತಗತವಾಗಿತ್ತು.

ಕೃಷಿಯನ್ನು ಮುಖ್ಯ ಕಸುಬನ್ನಾಗಿ ಅವಲಂಬಿಸಿದ ಮನುಷ್ಯನು ಕಾಲಕ್ರಮೇಣ ಒಂದು ಕಡೆ ನೆಲೆ ನಿಂತು ತನ್ನ ವಾಸ್ತವ್ಯವನ್ನು ಹೂಡಿದನು. ಆಗ ಒಂದನ್ನು ಇನ್ನೊಂದರಿಂದ ಬೇರ್ಪಡಿಸಲು ಒಬ್ಬರಿಂದ ಮತ್ತೊಬ್ಬರನ್ನು ವಿಭಿನ್ನ ಎಂದು ಗುರುತಿಸಲು ಅವರ ದೇಹದ ಆಕಾರ, ಗಾತ್ರ, ಬಣ್ಣಗಳಿಗೆ ಅನುಗುಣವಾಗಿ ವ್ಯಕ್ತಿನಾಮಗಳನ್ನು ಮತ್ತು ಸ್ಥಳದ ಭೌಗೋಳಿಕತೆ ತಮ್ಮ ಆರಾಧ್ಯ ದೈವವನ್ನು ಗುರುತಿಸಿ ಅದರ ವಾಸ್ತವ್ಯದ ನೆಲೆಯನ್ನು ಗಟ್ಟಿಗೊಳಿಸಿಕೊಳ್ಳಲು ಒಂದು ನಿರ್ದಿಷ್ಟ (Specific) ಹೆಸರುಗಳನ್ನು ಇಟ್ಟುಕೊಂಡನು.

೨.೨ ಸ್ಥಳನಾಮಗಳ ಹುಟ್ಟು ಮತ್ತು ಬೆಳವಣಿಗೆ

ಸ್ಥಳನಾಮಗಳ ಹುಟ್ಟು:

ಭೂಮಿಯ ಮೇಲೆ ಮಾನವ ಜೀವಿ ಗೋಚರವಾದದ್ದು ಸುಮಾರು ಹತ್ತು ಲಕ್ಷ ವರುಷಗಳ ಹಿಂದೆ. ಪ್ರಕೃತಿಯು ಸೃಷ್ಟಿಸಿದ ಲಕ್ಷೋಪ ಲಕ್ಷ ಜೀವಕೋಟಿಯಲ್ಲಿ ಮಾನವ ಜೀವಿಯೂ ಒಂದಾಗಿತ್ತು. ಆಗ ಮಾನವಜೀವಿಗೂ ಉಳಿದ ಜೀವರಾಶಿಗೂ ಯಾವ ವ್ಯತ್ಯಾಸವೂ ಇರಲಿಲ್ಲ. ಇಬ್ಬರದೂ ಹೋರಾಟಮಯ ಜೀವನ ಹೊಟ್ಟೆಗಾಗಿ ಹೋರಾಟ, ಜೀವನ ಉಳಿವಿಗಾಗಿ ಹೋರಾಟ, ಆದಿಮಾನವನ ಅಂದಿನ ಹೋರಾಟಮಯ ಜೀವನವನ್ನು ಇಂದು ನಾವು

ಕಲ್ಪಿಸಿಕೊಳ್ಳಲೂ ಸಾಧ್ಯವಾಗದು. ಅನ್ನಕ್ಕಾಗಿ ಜೀವಕ್ಕಾಗಿ ಪ್ರತಿನಿತ್ಯ ಪ್ರತಿಕ್ಷಣ ಹೋರಾಡುವುದು ಅವನ ನಿತ್ಯ ಬದುಕಿನಲ್ಲಿ ಹಾಸು ಹೊಕ್ಕಾಗಿದ್ದವು. ಕಾಲ ಪುರುಷ ಯಾರ ಅಧೀನ ಯಾರ ಹೋರಾಟ ಹೇಗಾದರೂ ಇರಲಿ ದಿನದಿನದ ಸೂರ್ಯೋದಯ, ಸೂರ್ಯಾಸ್ತಗಳಲ್ಲಿ ಎಷ್ಟೋ ಸಾವಿರ ವರ್ಷಗಳು ಕರಗಿ ಹೋದದ್ದು ಯಾರ ಗಮನಕ್ಕೂ ಬಾರದೇ ಹೋಯಿತು.

ನಮ್ಮ ಆದಿಮಾನವ ಹೇಗಿದ್ದವ ಹೇಗಾದ! ಹೊಸ ಶಿಲಾಯುಗ ಮಾನವ ಜೀವಿಯ ಇತಿಹಾಸದಲ್ಲಿ ಸುವರ್ಣ ಅಧ್ಯಾಯಕ್ಕೆ ನಾಂದಿ ಹಾಡಿತು. ಈ ಯುಗದಲ್ಲಿ ನಾಗರೀಕತೆಯನ್ನು ಹಂತ ಹಂತವಾಗಿ ಮೈಗೂಢಿಸಿಕೊಳ್ಳುವುದರೊಂದಿಗೆ ಅವನ ಜೀವನ ಕ್ರಮದಲ್ಲಿ ಮಹತ್ತರ ಬದಲಾವಣೆಗಳಾದವು. ಬೇಟೆಗಾಗಿ ಒರಟು ಕಲ್ಲುಗಳನ್ನು ಬಳಸುತ್ತಿದ್ದವ ನಯಗೊಳಿಸಿದ ಹಂತ ಶಿಲಾಯುಧಗಳನ್ನು ಬಳಸತೊಡಗಿದ. ಹಸಿ-ಹಸಿ ಗಡ್ಡೆ, ಮಾಂಸಗಳನ್ನು ಭಕ್ಷಿಸುತ್ತಿದ್ದವ ಕಂಡುಹಿಡಿದ ಬೆಂಕಿಯಿಂದ ಬೇಯಿಸಿ ತಿನ್ನ ತೊಡಗಿದ. ಸನಿಹದಲ್ಲೇ ಸುಳಿದಾಡುತ್ತಿದ್ದ ಅಪಾಯಕಾರಿಯಲ್ಲದ ಪ್ರಾಣಿಗಳನ್ನು ಜೀವಂತವಾಗಿ ಹಿಡಿದು ಸಾಕುವ, ಪಳಗಿಸುವ ವಂಶಾಭಿವೃದ್ಧಿ ಮಾಡುವ ವಿಧಾನಗಳನ್ನು ಕರಗತ ಮಾಡಿಕೊಂಡ. ಬೀಜ ನೆಟ್ಟು ಸಸಿಗಳ ಸಂತಾನ ಬೆಳೆಸುವ ಕಲೆಯನ್ನು ರೂಢಿಸಿಕೊಂಡ. ಒಟ್ಟಿನಲ್ಲಿ ಪ್ರಕೃತಿಯಲ್ಲಿರುವ ಸಮಸ್ತ ವಸ್ತುಗಳನ್ನು ತನ್ನ ಉಪಯೋಗಕ್ಕೆ ಬಳಸಿಕೊಳ್ಳಲು ಯತ್ನಿಸತೊಡಗಿದ.

ಎತ್ತರದ ಎಡೆಯಾಗಿರಬಹುದು, ತಗ್ಗಿನ ಎಡೆಯಾಗಿರಬಹುದು, ಮಣ್ಣಿರಬಹುದು, ಮಣ್ಣಿನ ಬಣ್ಣವಿರಬಹುದು, ಕಲ್ಲಿರಬಹುದು, ಕಲ್ಲಿನ ಗವಿ ಇರಬಹುದು ಮರ, ಸಸ್ಯ, ಬಳ್ಳಿ, ಹೂ, ಪಶು, ಪಕ್ಷಿ, ನದಿ, ಹೊಳೆ, ಬೆಟ್ಟ-ಗುಡ್ಡ ಹೀಗೆ ಪ್ರಕೃತಿಯ ಈ ಅಂಶಗಳು ಆದಿಮಾನವ ತನ್ನ ನೆಲೆಯನ್ನು ಗುರುತಿಸಲು ಸಹಾಯ ಮಾಡಿದವು. ಹಾಗಾಗಿಯೇ ಪ್ರಾಚೀನತೆಯ ಸ್ಥಳನಾಮಗಳು ಬಹುತೇಕ ಪ್ರಕೃತಿ ವಾಚಕಗಳಾಗಿವೆ.

The beginning of wisdom is to all things by their names ಎಂಬ ಚೀನಾದ ಗಾದೆ ಮಾತೊಂದಿದೆ. ಅಂದರೆ ಬುದ್ಧಿಮತ್ತೆಯ ಆರಂಭ ವಸ್ತುಗಳಿಗೆ ಹೆಸರಿಡುವ ಪ್ರಕ್ರಿಯೆಯಿಂದ ಎಂಬುದು ಅದರ ಅರ್ಥ. ಹೌದು ಒಂದೊಂದು ವಸ್ತುವಿಗೂ ಒಂದೊಂದು ಹೆಸರಿಡುವ ಪ್ರಕ್ರಿಯೆ ಸಾಮಾನ್ಯವಾದುದೇನಲ್ಲ. ವಸ್ತುಗಳಿಗಿಟ್ಟ ಹೆಸರುಗಳ ಪುನರಾವರ್ತಿಸಿದಂತೆ ಒಂದೊಂದು ಭಿನ್ನವಾಗುವಂತೆ ನೋಡಿಕೊಳ್ಳುವ ಪ್ರಕ್ರಿಯೆ ಬುದ್ಧಿಮತ್ತೆಯ ವಿಕಸನವಲ್ಲದೆ ಬೇರೇನು? ಆದಿಮಾನವ ಒಂದೊಂದು ವಸ್ತುವಿಗೂ ಒಂದೊಂದು ಹೆಸರನ್ನಿಟ್ಟಂತೆ. ತಾನು ನೆಲೆನಿಂತ ತಾಣಕ್ಕೂ ಒಂದು ಹೆಸರಿಟ್ಟ. ಹಾಗಾಯಿತು ನೆಲೆಗಳಿಗೊಂದು ನಾಮಕರಣ. ಆಗಿನ ಆದಿಮಾನವ ತನ್ನ ನೆಲೆಗೆ ಅಂದು ಇರಿಸಿದ ಹೆಸರನ್ನೇ ನಾವಿಂದು ಸ್ಥಳನಾಮ ಎನ್ನುತ್ತೇವೆ.

"ಮನುಷ್ಯ ಕಂಡದ್ದು, ಕಣ್ಣಿಟ್ಟದ್ದು, ಕಲ್ಪಿಸಿದ್ದು ಕಥೆಯಾಯಿತು. ಹೆಸರಿಗೆ ಮೂಲವಾಯಿತು. ಆ ಹೆಸರು ಬದುಕಿನ ಅವಿಭಾಜ್ಯ ಅಂಗವಾಯಿತು. ಹೆಸರಿನಲ್ಲೇನಿದೆ ಎಂಬ ರೂಢಿಯ ಮಾತಿದೆ. ಹೆಸರಿನ ಮೂಲವನ್ನು ಕೆದಕಲು ಪ್ರಾರಂಭಿಸಿದರೆ ಹೆಸರಿನಲ್ಲಿ ಏನಿಲ್ಲ ಎಂಬ ಮರುಪ್ರಶ್ನೆ ಉದ್ಭವಿಸುತ್ತದೆ. ಹೆಸರಿನಲ್ಲಿ ಏನೇನೋ ಇದೆ. ಏನೆಲ್ಲ ಇದೆ. ಪ್ರಾಚೀನ ಕಾಲದಲ್ಲಿ ಸಾಮೂಹಿಕವಾಗಿ ಕಟ್ಟಿಕೊಂಡಿರುವ ಸ್ಥಳನಾಮಗಳು ಕೇವಲ ಹೆಸರುಗಳಾಗಿ ಉಳಿದಿಲ್ಲ. ಮಾನವನ ಸಂಸ್ಕೃತಿಯ ಕುರುಹುಗಳಾಗಿವೆ.

ಸ್ಥಳನಾಮಗಳು ಉದ್ದೇಶಪೂರ್ವಕವಾಗಿರಲಿ ಅಥವಾ ಅನುದ್ದೇಶ ಪೂರ್ವಕವಾಗಿರಲಿ ಎರಡು ರೀತಿಯ ಬದಲಾವಣೆಗೆ ಒಳಗಾಗುತ್ತವೆ. ಒಂದು ಶಬ್ದಾರ್ಥಗಳಲ್ಲಿ ಆಗುವ ಬದಲಾವಣೆ (Semitic changes) ಮತ್ತೊಂದು ಶಾಬ್ದಿಕ ರೂಪಗಳಲ್ಲಿ ಆಗುವ ಬದಲಾವಣೆ (Morphological changes) ಹಾಗಾಗಿಯೇ ಎಷ್ಟೋ ಸ್ಥಳನಾಮಗಳು ಒಗಟಿನಂತೆ ಜಿಗುಟಾಗಿವೆ. ಬಿಡಿಸಲಾಗದ ಕಗ್ಗಂಟಾಗಿವೆ. ಸ್ಥಳನಾಮಗಳ ಒಗಟನ್ನು ಬಿಡಿಸುವ ಸಲುವಾಗಿ ಹುಟ್ಟಿಕೊಂಡ ಜ್ಞಾನ ಶಾಖೆಯೇ ನಾಮವಿಜ್ಞಾನ ಸ್ಥಳನಾಮಗಳ ಅಧ್ಯಯನ ಕೇವಲ ಭಾಷೆಗೆ ಸಂಬಂಧಿಸಿರದೆ ಅದೊಂದು ಸಾಂಸ್ಕೃತಿಕ ಅಧ್ಯಯನವೂ ಆಗಿರುವುದರಿಂದ ಇಂದು 'ನಾಮ' ಎಂಬ ಶಬ್ದ ವ್ಯಾಕರಣ ಮತ್ತು ಅರ್ಥಕೋಶಗಳ ವ್ಯಾಪ್ತಿಯನ್ನು ಮೀರಿ ಬಹುದೊಡ್ಡ ಶಿಸ್ತಾಗಿ ಬೆಳೆದಿದೆ.

ಸ್ಥಳನಾಮ ಹುಟ್ಟಿನ ಬಗ್ಗೆ ವಿದ್ವಾಂಸರ ಅಭಿಪ್ರಾಯ

ಶಿಷ್ಟ ಸಂಪ್ರದಾಯದ ಸಾಹಿತ್ಯ ವಿಜ್ಞಾನಗಳು ರೂಪಿಸುವ ಮುನ್ನವೇ ಜನಪದರು ಹಟ್ಟಿಗಳನ್ನು ಕಟ್ಟಿಕೊಂಡ ಊರುಗಳಲ್ಲಿ ನೆಲೆಸಿ ಅಲೆಮಾರಿತನಕ್ಕೆ ವಿರಾಮ ಹಾಕಿರಬೇಕು. ಅಂದ ಮೇಲೆ ಸಾಮಾಜಿಕ ಕಲ್ಪನೆಗೆ ರಾಜಕೀಯ ಸಂಸ್ಥೆಗಳ ಉಗಮಕ್ಕೆ ಪ್ರಾದುರ್ಭಾವಕ್ಕೆ ಹಟ್ಟಿ, ಪಾಡಿ, ಊರುಗಳೇ ಮೂಲ. ಅವುಗಳಲ್ಲಿ ಕೆಲವಾದರೂ ಪ್ರಾಗಿತಿಹಾಸಿಕ ಕಾಲಕ್ಕೆ ಸೇರಿದವೆಂದು ಹೇಳಬೇಕಾಗುತ್ತದೆ. ಊರುಗಳ ಬೆಳವಣಿಗೆಯೊಡನೆ ಭಾಷೆಗೂ ವಿಕಾಸಗೊಳ್ಳುತ್ತಿತ್ತೆಂಬುದರಲ್ಲಿ ಸಂದೇಹವೇ ಇಲ್ಲ. ಜ್ಞಾನ, ವಿಜ್ಞಾನ ವಿಚಾರಗಳ ಪ್ರಚಾರದೊಡನೆ ಅಂತೆಯೇ ಭಿನ್ನ ಭಿನ್ನ ಜನಾಂಗಗಳ ಸಂಪರ್ಕದೊಡನೆ ಸೌಕರ್ಯ ವಿಚಾರಗಳಿಗೆ ಪಕ್ವವಾಗಿ ಕಸಿಗೊಂಡು ಸಮೃದ್ಧಿಯಾಗಿ ಬೆಳೆಯುತ್ತವೆ. ಕಾಲವಾಹಿನಿಯೊಡನೆ ಊರುಗಳ ಹೆಸರುಗಳು ಸಹ ರೂಪುಗೊಳ್ಳುತ್ತವೆ."[೧೧]

ಸ್ಥಳನಾಮಗಳ ಹುಟ್ಟಿನ ಹಿನ್ನೆಲೆಯನ್ನು ಸ್ಥೂಲವಾಗಿ ಈ ಕೆಳಗಿನಂತೆ ಹೇಳಬಹುದು.

೧) **ಪ್ರಾಕೃತಿಕ ಕಾರಣಗಳು:** ಸ್ಥಳದ ಸುತ್ತಲಿನ ಪರಿಸರದ ವಿಶೇಷಗಳನ್ನು ಗಮನಿಸಿ ಬೇರೊಂದು ಸ್ಥಳಕ್ಕಿಂತ ಭಿನ್ನವಾದ ಅಂಶಗಳನ್ನು ಗುರುತಿಸಿ ಅಂತಹ ಸ್ಥಳಗಳಿಗೆ ಹೆಸರು ಕೊಟ್ಟಿರುವುದನ್ನು ನೋಡಬಹುದು. ತಗ್ಗಿನಲ್ಲಿರುವ ಹಳ್ಳಿ ತೆಗ್ಗಿಹಳ್ಳಿ, ಗುಡ್ಡದ ಬಳಿ ಇರುವ ಊರು

ಗುಡ್ಡದಹಳ್ಳಿ, ಹೊಳೆಯ ಪಕ್ಕದಲ್ಲಿರುವ ಹಟ್ಟಿ ಹೊಳೆಹಟ್ಟಿ, ಭದ್ರಾನದಿ ದಂಡೆಯಲ್ಲಿರುವ ಊರು ಭದ್ರಾವತಿ.

೨) **ಪುರಾಣ ಐತಿಹ್ಯಾತ್ಮಕ ಕಾರಣಗಳು**: ಪುರಾಣಗಳು ನಮ್ಮ ಸಂಸ್ಕೃತಿಯ ಎಲ್ಲ ಮುಖಗಳ ಮೇಲೂ ತಮ್ಮ ಛಾಪು ಮೂಡಿಸಿದೆ. ಉದಾ: ನಾಯಿ–ನಾರಾಯಣನಾಗಿ, ಕಾಗೆ ಶನಿರಾಯನ ವಾಹನವಾಗುತ್ತದೆ. ಅಳಿಲು ರಾಮನ ಭಂಟನಾಗುತ್ತದೆ. ಹೀಗೆ ಎಲ್ಲ ವಿಷಯಗಳಲ್ಲೂ ಪುರಾಣ ನುಸುಳಿದೆ. ಹಾಗಾಗಿ ರಾಮನಹಳ್ಳಿ, ಹನುಮನಹಳ್ಳಿ, ಶಿವಪುರ, ಮಲ್ಲಿಕಾರ್ಜುನಪುರ ಜನ್ಮವೆತ್ತುತ್ತವೆ. ಅದರಂತೆಕಂತೆಗಳ ಐತಿಹ್ಯಾತ್ಮಕ ಹೆಸರುಗಳು ದೇಶದ್ಯಾಂತ ಕಂಡುಬರುತ್ತವೆ.

೩) **ವ್ಯಕ್ತಿಗತ ಕಾರಣಗಳು**: ವ್ಯಕ್ತಿಯ ವಿಶಿಷ್ಟತೆ, ವಿಚಿತ್ರತೆಯ ಗುಣಗಳು ಸಹ ಸ್ಥಳನಾಮಗಳ ಹುಟ್ಟಿಗೆ ಕಾರಣವಾಗುತ್ತವೆ. ಇದಕ್ಕೆ ಉದಾ: ಮೈಸೂರು ರಾಜರ ಹೆಸರುಗಳು. ಅಮೆರಿಕಾದ ಮೊದಲ ಅಧ್ಯಕ್ಷ ಜಾರ್ಜ್‌ವಾಷಿಂಗ್ಟನ್, ರಷ್ಯಾದ ಕ್ರಾಂತಿಕಾರ ಲೆನಿನ್‌ಗ್ರ್ಯಾಡ್ ಮುಂತಾದವರು ಹೆಸರುಗಳು ಸಾಕ್ಷಿಯಾಗಿವೆ. ಸಾಮಾನ್ಯ ವ್ಯಕ್ತಿಯೊಬ್ಬನು ಸಾಧಿಸಿದ ಒಳಿತು, ಕೆಡಕುಗಳಿಗೆ ಸಂಬಂಧಿಸಿದ ಘಟನೆಗಳಿಂದ ಸ್ಥಳನಾಮಗಳು ಹುಟ್ಟುತ್ತವೆ. ಉದಾ: ಕೋಣನ ಕುಂಟ–ಎಲ್‌ಟಿಟಿ ಈ ನಗರವಾಗುತ್ತದೆ.

೪) **ಕಸುಬಿನ ಕಾರಣಗಳು**: ಮನುಷ್ಯ ಅಲೆಮಾರಿತನ ತೊರೆದು ಒಂದೆಡೆ ನೆಲೆನಿಂತ ಬೇಸಾಯ ಪಶುಪಾಲನಾದಿ ಕೆಲಸಗಳಿಗೆ ತೊಡಗಿದಂತೆ ಬೇಸಾಯದ ಉಪಕರಣಗಳನ್ನು ಸಿದ್ಧಪಡಿಸುವ ಕಸುಬುದಾರರ ಅಗತ್ಯವುಂಟಾಯಿತು. ಬೆಳೆ ಬೆಳೆಯುವ ರೈತರು ಬೇಸಾಯವನ್ನೇ ಕಸುಬಾಗಿಸಿಕೊಂಡಂತೆ ಕಮ್ಮಾರ, ಬಡಗಿ ಮೊದಲಾದವರು ತಮ್ಮ ಜೀವನ ನಿರ್ವಹಣೆಗೆ ಆಯಾಯ ಕಸುಬುಗಳನ್ನೇ ಅವಲಂಬಿಸಿದವರು. ಇಂತಹ ಕಸುಬುದಾರರೇ ಮುಖ್ಯವಾಗಿದ್ದ ತಾಣಗಳು ಆ ಕಸುಬಿನ ಅಂಕಿತವನ್ನೊಳಗೊಂಡ ಸ್ಥಳನಾಮಗಳನ್ನು ಹೊಂದಿದವು. ಅವುಗಳೇ ಕಮ್ಮಾರನಕಟ್ಟೆ, ಕೊರಚರಿರುವ ಸ್ಥಳ ಕೂರಚೂರಾಗಿದೆ. ಕಂಚಗಾರರಿಂದ ಕಂಚುಗಾರನ ಹಳ್ಳಿಯಾಗಿದೆ.

೫) **ಜನಾಂಗೀಯ ಕಾರಣಗಳು**: ಒಂದು ಕಸುಬಿನಗಂಟಿಕೊಂಡ ಒಂದೇ ಆಚಾರ–ವಿಚಾರಕ್ಕಂಟಿದ ಅಥವಾ ಒಂದೇ ಜಾತಿಯ ಜನ ಒಂದೆಡೆ ವಾಸವಾಗಿರುವ ಸ್ಥಳಗಳಿಗೆ ಅವರವರ ಜಾತಿ, ಜನಾಂಗದ ಹೆಸರುಗಳೇ ಅವರವರ ಸ್ಥಳಗಳಿಗೆ ಬಂದವು.

ಉದಾ: ಬೇಡರಹಳ್ಳಿ, ಜೋಗಿಹಳ್ಳಿ, ಗೊಲ್ಲರಹಳ್ಳಿ ಇತ್ಯಾದಿ ಸ್ಥಳನಾಮಗಳ ಹುಟ್ಟು ಮತ್ತು ಪ್ರಸರಣ ವೈವಿಧ್ಯತೆಯಿಂದ ಕೂಡಿರುತ್ತದೆ. ಭೌಗೋಳಿಕ ಮತ್ತು ಪ್ರಾಕೃತಿಕ ಅಂಶಗಳೇ ಪ್ರಧಾನವಾಗಿ ಕಂಡುಬರುವ ಸ್ಥಳನಾಮಗಳು.

ವಾಸ್ತವ ಸತ್ಯದ ಪದರುಗಳನ್ನು ನೇರವಾಗಿ ಬಿಡಿಸಿ ಹೇಳುತ್ತವೆ. ಆದರೆ ಜನಪದೀಯ ಅಂಶಗಳಿಂದ ಉಗಮವಾದ ಸ್ಥಳನಾಮಗಳ ಸೃಷ್ಟಿ, ವ್ಯಷ್ಟಿ ಸೃಷ್ಟಿಯಾಗಿರದೇ ಸಮಷ್ಟಿ ಸೃಷ್ಟಿಯಾಗಿರುತ್ತದೆ. ಅಲ್ಲದೆ ಜನರಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ, ಕರ್ಣಾ-ಕರ್ಣಿಯಾಗಿ ಹರಿದುಬಂದು ಒಂದು ನಿಶ್ಚಿತರೂಪ ಪಡೆದುಕೊಳ್ಳುತ್ತದೆ. ಅವುಗಳ ಹಿನ್ನೆಲೆಯೇ ಐತಿಹ್ಯ, ಪುರಾಣ ಮತ್ತು ಜನಪದ ನಿರುಕ್ತಿಗಳಾಗಿರುತ್ತವೆ. ಒಬ್ಬ ಪ್ರಸಿದ್ಧವ್ಯಕ್ತಿ, ದೇವತೆಗಳು, ಚಾರಿತ್ರಿಕ ಘಟನೆಗಳು, ಪ್ರಕೃತಿಯ ಭೌತಿಕ ಹರವು ಮತ್ತು ವಿಸ್ತಾರ ಪಂಡಿತರ ಬೌದ್ಧಿಕ ಮಟ್ಟ, ರಾಜಕಾರಣಿಗಳ ಉತ್ತಮ ಸೇವೆ, ಕಾರ್ಖಾನೆಗಳ ಬೆಳವಣಿಗೆ ಆರ್ಥಿಕ ಅಭಿವೃದ್ಧಿ ಸಾಮಾಜಿಕಕ್ರಾಂತಿ ಮುಂತಾದ ಅಂಶಗಳಿಂದ ಸ್ಥಳನಾಮಗಳು ಜನ್ಮತಳೆಯುತ್ತವೆ. ಸಾಹಿತ್ಯ, ಸಂಗೀತ, ಕಲೆ, ನೃತ್ಯ, ವಿಜ್ಞಾನ ಮತ್ತು ತಂತ್ರಜ್ಞಾನ ಖಗೋಳಶಾಸ್ತ್ರಜ್ಞರ ಹೆಸರಿನಲ್ಲಿ ಬೀದಿ, ವೃತ್ತ, ಚೌಕ, ಮೊಹಲ್ಲಗಳ ಹೆಸರುಗಳು ಅಂಕಿತವಾಗಿ ರೂಪ ಪಡೆಯುತ್ತವೆ.

ಸ್ಥಳನಾಮ ಬೆಳವಣಿಗೆ

ಇತಿಹಾಸವನ್ನು ಅರಿಯದವ ಇತಿಹಾಸವನ್ನು ಸೃಷ್ಟಿಸಲಾರ ಎಂಬ ಮಾತೊಂದಿದೆ. ಅಂದರೆ ಯಾವುದೇ ಕ್ಷೇತ್ರದ ಅಭ್ಯಾಸಿಯಾದವನು ಆ ಕ್ಷೇತ್ರದಲ್ಲಾಗಿರುವ ಕೃಷಿಯನ್ನು ಅರಿಯುವ ತವಕ ಹೊಂದಿರುವುದು ತೀರ ಸಹಜ. ಹೇಗೆ ಎಲ್ಲ ಕ್ಷೇತ್ರಕ್ಕೂ ಈ ಮಾತು ಅನ್ವಯಿಸುತ್ತದೋ ಹಾಗೆಯೇ ಸ್ಥಳನಾಮ ಅಭ್ಯಾಸಿಗೂ ಅನ್ವಯಿಸುತ್ತದೆ. ಮಾನವಿಕ ಶಾಸ್ತ್ರಗಳಿಗೆ ತನ್ನದೇ ಆದ ಇತಿಹಾಸವಿರುವಂತೆ ಸ್ಥಳನಾಮ ಅಧ್ಯಯನಕ್ಕೂ ತನ್ನದೇ ಆದ ಇತಿಹಾಸವಿದೆ. ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯರ ಸ್ಥಳನಾಮ ಅಧ್ಯಯನ ನಡೆದು ಬಂದ ದಾರಿಯ ಸ್ಥೂಲ ಚಿತ್ರಣವನ್ನು ನೀಡುವುದು ಈ ಅಧ್ಯಾಯದ ಆಶಯವಾಗಿದೆ.

ಸ್ಥಳನಾಮಗಳ ಅಧ್ಯಯನ ಅರ್ಥಗರ್ಭಿತವೆಂತಲೂ ಅವುಗಳ ಮೂಲ ರೂಪದಿಂದ ಅರ್ಥನಿರ್ಣಯ ಸಾಧ್ಯವೆಂದೂ ಜಗತ್ತಿಗೆ ಮೊದಲ ಬಾರಿಗೆ ತೋರಿಸಿಕೊಟ್ಟ ಕೀರ್ತಿ ಜರ್ಮನಿಯ ಗಾಟ್ ಫ್ರೀಡ್‌ವಿಲ್ ಹೆಲ್ಮ್ ಲಿಬ್ನಿಜ್ (೧೭೬೮) ಎಂಬುವವನಿಗೆ ಸಲ್ಲುತ್ತದೆ. ಅವನ ಆಸಕ್ತಿ, ಉದ್ದೇಶ, ಶ್ರಮಗಳ ಪರಿಣಾಮವಾಗಿಯೇ ಲಿಬ್ನಿಜ್ ಇಂದು ಸ್ಥಳನಾಮ ಶಾಸ್ತ್ರದ ಪಿತಾಮಹನೆಂದು ಗುರುತಿಸಲ್ಪಟ್ಟಿದ್ದಾನೆ. ಗೌರವಿಸಲ್ಪಟ್ಟಿದ್ದಾನೆ. ಅವನು ಹಾಕಿದ ಹೆಜ್ಜೆಯ ಜಾಡನ್ನು ಹಿಡಿದು ಗಣನೀಯ ಯಶಸ್ಸನ್ನು ಸಾಧಿಸಿದ ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ವಿದ್ವಾಂಸರಿದ್ದಾರೆ. ಸ್ಥಳನಾಮಶಾಸ್ತ್ರ ಉಳಿದೆಲ್ಲ ಅಧ್ಯಯನಗಳಂತೆಯೇ ಗಂಭೀರವಾದದ್ದು, ಗಮನಾರ್ಹವಾದದ್ದು ಎಂದು ಮಾನ್ಯತೆ ಪಡೆಯುವಂತಹದ್ದು. ಈ ಎಲ್ಲ ವಿದ್ವಾಂಸರ ಪರಿಶ್ರಮದಿಂದ ಪಾಶ್ಚಿಮಾತ್ಯರಲ್ಲಿ ಈ ಅಧ್ಯಯನ ಪ್ರಾರಂಭವಾದುದು ಸುಮಾರು ಎರಡು ನೂರು ವರ್ಷಗಳ ಹಿಂದೆ. ಅವರಿಗೆ ಸ್ಥಳನಾಮಗಳ ಮಹತ್ವ, ಅಧ್ಯಯನದ ಅಗತ್ಯತೆ, ಅವು ಹುದುಗಿಸಿಕೊಂಡಿರುವ ಸಾಂಸ್ಕೃತಿಕ ಸಂಗತಿಗಳ

ಅರಿವಿದ್ದುದರಿಂದಲೇ ಈ ಬಗೆಯ ಕೃಷಿಗೆ ತೊಡಗಿರುವರು. ಈ ಅಧ್ಯಯನಕ್ಕೊಂದು ಶಾಸ್ತ್ರೀಯ ವೈಜ್ಞಾನಿಕ ಚೌಕಟ್ಟು ದೊರಕಿದ್ದು ಮಾತ್ರ ಸುಮಾರು ನೂರು ವರ್ಷಗಳ ಹಿಂದೆ. ಇಂಗ್ಲೆಂಡಿನಲ್ಲಿ ಸ್ಕೀಟ್, ಜರ್ಮನಿಯಲ್ಲಿ ಫಾರ್‌ಸ್ಟೀಯನ್, ಫ್ರಾನ್ಸಿನಲ್ಲಿ ಲಾಂಗ್ನನ್, ನಾರ್ವೆಯಲ್ಲಿ ರೈ, ಸ್ವೀಡನಿನಲ್ಲಿ ಸೋರಿನ್, ಅಮೇರಿಕದಲ್ಲಿ ಜಾನ್ ಹೆಕ್‌ವೆಲ್ಡರ್ ಮತ್ತು ಹೆನ್ರಿ, ಆರ್.ಸ್ಕೂಲ್ ರಾಪ್ಟ್ರ ಎಂಬುವವರು ಈ ಕ್ಷೇತ್ರದಲ್ಲಿ ಅನೇಕ ವಿಕ್ರಮಗಳನ್ನು ಸ್ಥಾಪಿಸಿದ ಪ್ರಮುಖರು.[೧೨]

ಇಂಗ್ಲೆಂಡ್ ಮತ್ತು ಅಮೇರಿಕಾದಲ್ಲಿ ಸ್ಥಳನಾಮಶಾಸ್ತ್ರ ಅಧ್ಯಯನಕ್ಕೆ ದೊರೆತ ಆಯಾಮಗಳು ಅತ್ಯಂತ ಗಮನಾರ್ಹವಾದದ್ದು ಮತ್ತು ವಿಸ್ಮಯವಾದದ್ದು. ೧೯೨೧ ರಲ್ಲಿ ಇಂಗ್ಲೆಂಡಿನಲ್ಲಿ ಸ್ಥಾಪಿತವಾದ 'ಆಂಗ್ಲ ಸ್ಥಳನಾಮ ಸಂಶೋಧನಾ ಮಂಡಳಿ' ಸ್ಥಳನಾಮ ವಿಜ್ಞಾನದ ಸ್ವರೂಪ ಕೊಡುವ ಕಾರಣಕ್ಕಾಗಿ ಹಲವು ಶಿಸ್ತಿನ ವಿದ್ವಾಂಸರ ನೆರವನ್ನು ಮಂಡಳಿ ಪಡೆಯಿತು. ಪುರಾತತ್ವ ಶಾಸ್ತ್ರಜ್ಞರ, ಭಾಷಾ ವಿಜ್ಞಾನಿಗಳ, ಇತಿಹಾಸಕಾರರ ಹೀಗೆ ವಿವಿಧ ಶಿಸ್ತಿನ ವಿದ್ವಾಂಸರು ಸಹಕರಿಸಿ ಈ ಬಗೆಯ ಅಧ್ಯಯನ ಒಂದು ಶಿಸ್ತಿನಿಂದ ಆಗದು ಅದಕ್ಕೆ ಬದಲಾಗಿ ಇದು ಹಲವು ಶಿಸ್ತಿನ ಅಂತಸ್ಸಂಯೋಜಿತ ಅಧ್ಯಯನವೆಂದು ಜಗತ್ತಿಗೆ ಮನವರಿಕೆ ಮಾಡಿಕೊಟ್ಟರು. ಸಾಂಸ್ಕೃತಿಕ ಚರಿತ್ರೆಯ ರಚನೆಗೆ ಈ ಬಗೆಯ ಅಧ್ಯಯನವೇ ಸೂಕ್ತವೆಂಬ ನಿರ್ಧಾರಕ್ಕೆ ಬಂದರು.[೧೩] ಆಂಗ್ಲ ಸ್ಥಳನಾಮ ಸಂಸ್ಥೆಯು ಇಂಗ್ಲೆಂಡಿನ ಸ್ಥಳನಾಮಗಳ ಬಗೆಗೆ ನಲವತ್ತಾರು ಸಂಪುಟಗಳನ್ನು ಪ್ರಕಟಿಸಿದೆ. ಸ್ಥಳನಾಮಗಳ ನಿಷ್ಪತ್ತಿಗೆ ಭಾಷಾ ವಿಜ್ಞಾನದ ತತ್ವಗಳು ಮತ್ತು ಐತಿಹಾಸಿಕ ವಿಧಾನಗಳನ್ನು ಬಳಸಿಕೊಂಡು ಇ.ಎಕ್ವಾಲ್ ಎಂಬುವವರು The concise ox ford dictionary of English place names ಎಂಬ ನಿಘಂಟನ್ನು ಸಿದ್ಧಪಡಿಸಿದರು. ಈ ನಿಘಂಟು ಎಲ್ಲಾ ವಿದ್ವಾಂಸರಿಗೆ ಒಂದು ಆಕರ ನಿಘಂಟುವಾಗಿ ಪರಿಣಮಿಸಿದೆ. ಇಂಗ್ಲೆಂಡಿನಲ್ಲಿ ಸ್ಥಳನಾಮಗಳ ಅಧ್ಯಯನಕ್ಕಾಗಿ ಸಂಘಗಳು, ಅಧ್ಯಯನ ಕೇಂದ್ರಗಳು ಸ್ಥಾಪಿತಗೊಂಡಿವೆ ಎಂಬ ಮಾತೇ ಆ ದೇಶದಲ್ಲಿ ಈ ಅಧ್ಯಯನಕ್ಕೆ ಮೀಸಲಿಟ್ಟಿರುವ ಮಹತ್ವ ಮತ್ತು ಪ್ರಾಶಸ್ತ್ಯವನ್ನು ಹೇಳುತ್ತದೆ.

೧೯೩೮ರಲ್ಲಿ ಅಮೇರಿಕಾದ ಸ್ಥಳನಾಮಗಳ ಪರಿವೀಕ್ಷಣೆಗೆಂದು ಹ್ಯಾರಿಮೋರ್ಗನ್ ಆಯರ್ಸ್ ಎಂಬುವವರು ಅಮೇರಿಕಾ ಸ್ಥಳನಾಮ ಸಂಸ್ಥೆಯ ಕಲ್ಪನೆಯನ್ನು ಹುಟ್ಟು ಹಾಕಿದರೂ ದ್ವಿತೀಯ ಮಹಾಯುದ್ಧದ ಪರಿಣಾಮವಾಗಿ ಸಾಧ್ಯವಾಗದೆ ೧೯೫೦ರಲ್ಲಿ ಅಸ್ತಿತ್ವಕ್ಕೆ ಬಂದಿತು. ಸ್ಥಾಪನೆಗೊಂಡ ಮರು ವರ್ಷದಿಂದಲೇ Names ಎಂಬ ತ್ರೈಮಾಸಿಕವನ್ನು ಪ್ರಕಟಿಸಲಾರಂಭಿಸಲಾಯಿತು. ಈ ಸಂಸ್ಥೆಯ ಧ್ಯೇಯೋದ್ದೇಶಗಳು ಯಾವುದೇ ದೇಶದ ಸ್ಥಳನಾಮ ಸಂಸ್ಥೆಗೆ ಆದರ್ಶ ಪ್ರಾಯವಾಗಿವೆ.[೧೪]

೧) ಮನುಕುಲದ ಸಕಲ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ನಾಮಗಳ ಪ್ರಾಮುಖ್ಯತೆಯನ್ನು ಅಮೇರಿಕನ್ನರ ಗಮನಕ್ಕೆ ತರುವುದಲ್ಲದೆ ಅವರಲ್ಲಿ ಈ ಬಗ್ಗೆ ಆಸಕ್ತಿಯನ್ನು ಉಂಟು ಮಾಡುವುದು.

೨) ನಾಮಗಳ ನಿಷ್ಪತ್ತಿ ಉಚ್ಚಾರಣಾ ಕ್ರಮ, ತಿದ್ದುಪಡಿಗಳ ಬಗೆಗೆ ಸರಕಾರಿ ಮತ್ತು ಸಾರ್ವಜನಿಕ ಸಂಸ್ಥೆಗಳಿಗೆ ಸಲಹೆ ನೀಡುವುದು.

೩) ಎಲ್ಲ ಬಗೆಯ ಹೆಸರುಗಳ ಮೂಲ ರೂಪ, ವಿಕಾಸ, ನಿಷ್ಪತ್ತಿ, ಅರ್ಥ ಪ್ರಯೋಗಗಳನ್ನು ಕುರಿತಾದ ಸಂಶೋಧನೆ ನಡೆಸಿ ಫಲಿತಾಂಶಗಳನ್ನು ಪ್ರಕಟಿಸುವುದು.

೪) ಸ್ಥಳನಾಮಗಳಿಗಾಗಿ ನಿಯತಕಾಲಿಕೆಗಳನ್ನು, ಗ್ರಂಥಗಳನ್ನು ಪ್ರಕಟಿಸುವುದಲ್ಲದೆ ಅಂತಹ ಪ್ರಕಟಣೆಗೆ ಸಹಾಯ ಮಾಡುವುದು. ಎಲ್ಲ ಹೆಸರುಗಳ ನಿಘಂಟುಗಳನ್ನು ಹೊರತರುವುದು.

ಈ ಸಂಸ್ಥೆಯ ಎಲ್ಲ ಸ್ಥಳನಾಮಗಳ ಸರ್ವೇಕ್ಷಣೆ ನಡೆಸಿ, ವೈವಿಧ್ಯವೂ, ಉಪಯುಕ್ತವೂ, ಅಪಾರವೂ ಆದ ಸಾಮಗ್ರಿಯನ್ನು ಸಂಗ್ರಹಿಸಿ ರಾಷ್ಟ್ರೀಯ ಸ್ಥಳನಾಮ ಕೇಂದ್ರದಲ್ಲಿ ಸಂರಕ್ಷಿಸಿ ಇಟ್ಟರೆ ಸ್ಥಳನಾಮಗಳ ಆಧುನಿಕ ರೂಪ ಉಚ್ಚಾರಣಾ ಕ್ರಮ ಮತ್ತು ವಿಶ್ಲೇಷಣೆಗೆ ಕಂಪ್ಯೂಟರ್ ಮುಂತಾದ ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸಿಕೊಳ್ಳುತ್ತಿದೆ. ಸ್ಥಳನಾಮ ಅಧ್ಯಯನಕ್ಕೊಂದು ವಿಶ್ವವ್ಯಾಪ್ತಿ ಕಲ್ಪಿಸಲು ಅಮೇರಿಕಾದ ನಾಮಸಂಸ್ಥೆ ಇದುವರೆಗೂ ಹದಿನೈದು ಅಂತರಾಷ್ಟ್ರೀಯ ಸಮ್ಮೇಳನಗಳನ್ನು (೧೯೯೯) ನಡೆಸಿದೆ. ಹೀಗೆ ಅಮೇರಿಕಾದಂತಹ ರಾಷ್ಟ್ರ ಸ್ಥಳನಾಮಗಳ ಅಧ್ಯಯನವನ್ನು ಪೂರ್ಣ ವಿಜ್ಞಾನದ ಮಟ್ಟಕ್ಕೆ ಕೊಂಡೊಯ್ದು ಉಳಿದೆಲ್ಲ ದೇಶಗಳಿಗೆ ಮಾದರಿಯಾಗಿದೆ.

ಸ್ಥಳನಾಮಗಳ ಅಧ್ಯಯನಕ್ಕೆ ಸಂಘ-ಸಂಸ್ಥೆಗಳು ಮುಂದಾದಂತೆ ವ್ಯಕ್ತಿಗತವಾಗಿ ದುಡಿದ ವಿದ್ವಾಂಸರೂ ಗಮನಾರ್ಹ ಪ್ರಮಾಣದಲ್ಲಿದ್ದಾರೆ. ಜಾನ್ ಹೆಕ್‌ವೆಲ್ಡರ್ ಮತ್ತು ಹೆನ್ರಿ ಆರ್.ಸ್ಕೂಲ್ ರಾಫ್ಟ ಎಂಬುವವರು ಅಮೇರಿಕಾದ ಆದಿವಾಸಿಗಳ ಸ್ಥಳನಾಮಗಳನ್ನು ಕುರಿತಾದ ವಿಶ್ಲೇಷಣೆ ನಡೆಸಿದರು. ಲಿಲಿಯಾನ್ ಲಿಂಡರ್ ಫಿಟ್ಜ್ ಪ್ಯಾಟ್ರಿಕ್ ಎನ್ನುವವರು ಆಯ್ಕೆ ಮಾಡಿಕೊಂಡದ್ದು ನೆಬ್ರಾಸ್ಕಾ ಸ್ಥಳನಾಮಗಳನ್ನು. ಆಯೋವಾ ಸ್ಥಳನಾಮಗಳನ್ನು ಕುರಿತು ಅಲೆನ್ ವಾಕರ್‌ರೀಡ್ ಹಾಗೂ ರಾಬರ್ಟ್ ಎಲ್.ರಾಮ್ಸ ಅವರು ಮಿಸ್ಸೋರಿ ಪ್ರದೇಶದ ಸ್ಥಳನಾಮಗಳನ್ನು ಆಯ್ಕೆ ಮಾಡಿಕೊಂಡು ತಮ್ಮ ಸಂಶೋಧನಾ ನಿಬಂಧವನ್ನು ರಚಿಸಿದರು. ಜಾರ್ಜ್ ಆರ್.ಸ್ಟೀವರ್ಟ್ ಅಮೇರಿಕಾ ಸ್ಥಳನಾಮ ನಿಘಂಟುವಿನ ರಚನೆಗೆ ಮುಂದಾದರೆ, ಎಡ್ವರ್ಡ್ ಸಿ ಎಹ್ರಾನ್ ಸ್ಫೋರ್ಗರ್ ಜೆ.ಟಿ. ಲಿಂಕ್, ಒರ್ಡ್ ಗ್ರಾಂಗರ್, ಇ ವ್ಯಾಲೆಸ್, ಮ್ಯಾಕ್ ಮೆಲನ್ ಮುಂತಾದ ವಿದ್ವಾಂಸರು ಈ ಕ್ಷೇತ್ರದಲ್ಲಿ ದುಡಿದ ಪರಿಣಾಮವಾಗಿ ಈ ಕ್ಷೇತ್ರ ಸಮೃದ್ಧವಾಯಿತು.

ಕಾಲ ಯಾವುದನ್ನೂ ಒಂದೇ ಸ್ಥಿತಿಯಲ್ಲಿಡಲು ಬಯಸುವುದಿಲ್ಲ. ಬದಲಾವಣೆಗೆ ಒಳಪಡಿಸುವುದೆಂದರೆ ಕಾಲ ಪುರುಷನಿಗೆ ಬಹು ಪ್ರಿಯವಾದುದು. ಬದಲಾವಣೆಗೆ ಒಳಪಡುವ ಸರದಿ ಸ್ಥಳನಾಮ ಅಧ್ಯಯನದ್ದಾಯಿತು. ಸ್ಥಳನಾಮಗಳ ಮಹತ್ವವನ್ನು ಅರಿತ ನಾಡಿನ ವಿವಿಧ ಭಾಗಗಳಲ್ಲಿನ ವಿದ್ವಾಂಸರು ತಮ್ಮ ತಮ್ಮ ಪ್ರಾಂತ್ಯದ ಸ್ಥಳನಾಮಗಳ ಅಧ್ಯಯನಕ್ಕೆ ಸ್ವಲ್ಪ ವಿಳಂಬವಾದರೂ

ಮುಂದಾದರು. ಈ ಬಗೆಯ ಅಧ್ಯಯನಕ್ಕೆ ಭದ್ರ ಬುನಾದಿಯನ್ನು ನಿರ್ಮಿಸಿಕೊಟ್ಟ ಕೀರ್ತಿ ಪೂನಾದ ದಕ್ಕನ್ ಕಾಲೇಜಿನ ಪುರಾತತ್ವ ಇಲಾಖೆಯ ಅಧ್ಯಕ್ಷರೂ, ವಿದ್ವಾಂಸರೂ ಆದ ಹೆಚ್.ಡಿ.ಸಂಕಾಲಿಯಾ ಅವರದು. ತವು ಅಧ್ಯಯನ ಮಾಡಿದ್ದಲ್ಲದೆ ಆಸಕ್ತರಿಗೆ ಮಾರ್ಗದರ್ಶನ ಮಾಡಿದರು. ಮೂಲತಃ ಸಂಕಾಲಿಯಾ ಅವರು ಪುರಾತತ್ವ ಶಾಸ್ತ್ರಜ್ಞರಾದುದರಿಂದಲೇ ಏನೋ ಅವರ ಅಧ್ಯಯನದ ಒಲವು ಸಾಂಸ್ಕೃತಿಕ ಸಂಗತಿಗಳನ್ನು ಬಯಲಿಗೆಳೆಯುವಲ್ಲಿ ಕೇಂದ್ರೀಕೃತವಾಗಿತ್ತು. ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಸ್ಥಳನಾಮಗಳನ್ನು ಅಧ್ಯಯನ ಮಾಡಲು ಪ್ರಾರಂಭಿಸಿದವರಲ್ಲಿ ಅತಿ ಪ್ರಮುಖರಾದರೆಂದರೆ ಅಂತರಾಷ್ಟ್ರೀಯ ಖ್ಯಾತಿಯ ಬಂಗಾಳದ ಸುನೀತಕುಮಾರ ಚಟರ್ಜಿಯವರು. ಅವರ ಪರಂಪರೆಯನ್ನೇ ಮುಂದುವರೆಸಿದ ಆರ್.ಪಿ.ಸೇತು ಪಿಳ್ಳೆಯವರು ತಮಿಳು ಸ್ಥಳನಾಮಗಳನ್ನು ಅಧ್ಯಯನಕ್ಕೊಳಪಡಿಸಿ ಗ್ರಂಥವನ್ನು ರಚಿಸಿದರು. ಕೆ.ಪಿ.ಪದ್ಮನಾಭ ಮೆನನ್ ಕೇರಳದ ಮಲಬಾರ್ ಸ್ಥಳನಾಮಗಳ ಬಗೆಗೆ ಕೇತು ವಿಶ್ವನಾಥರೆಡ್ಡಿ ತೆಲುಗಿನ ಸ್ಥಳನಾಮಗಳ ಬಗೆಗೆ ಜನರ ಗಮನವನ್ನು ಸೆಳೆಯುವಲ್ಲಿ ಯಶಸ್ವಿಯಾದರು.

ಸ್ಥಳನಾಮ ಅಧ್ಯಯನದ ಮಹತ್ವವನ್ನು ನಾಡಿನ ವಿವಿಧ ಪ್ರಾಂತ್ಯಗಳಲ್ಲಿ ಹರಡಿದ ದುಡಿದ ಹಲವಾರು ವಿದ್ವಾಂಸರಿದ್ದಾರೆ. ಅವರಲ್ಲಿ ಕೆಲವು ವಿದ್ವಾಂಸರ ಹೆಸರುಗಳನ್ನಾದರೂ ದಾಖಲಿಸಲೇಬೇಕಾದ ಶ್ರಮ ಪಾಂಡಿತ್ಯ ಅವರ ಬೆನ್ನಿಗಿದೆ. ಅವರುಗಳೆಂದರೆ ಅಪ್ಪಯ್ಯದೀಕ್ಷಿತ್, ಎಚ್.ಬಾಲಲೋಚನ ಬಿ.ಸಿ., ಸಂಕಾಲಿಯಾ, ರಾಮಕೋಮಲ್‌ಸೇನ್, ಸಿ.ನಾರಾಯಣರಾವ್, ರಾಮಚಂದ್ರ ಚೆಟ್ಟಿಯಾರ್, ಕೆ.ಅಚ್ಯುತಮೆನನ್, ಕೆ.ಬಿ.ಹೋಲ್ಕಾರ್, ಆರ್.ಪಿ.ಸೇತುಪಿಳ್ಳೆ, ನಾಚಿಮುತ್ತು, ಎಸ್.ಜ್ಞಾನ್ ಮತ್ತು ಕೆ.ಸರಸ್ವತಿ ಮುಂತಾದವರು ಪ್ರಮುಖರು.

ಸ್ಥಳನಾಮಗಳನ್ನು ಕುರಿತಾದ ಪುಸ್ತಕ ಪ್ರಕಟಣೆಗಳು ಬೆರಳೆಣಿಕೆಯಷ್ಟಿದ್ದು, ಈ ಕ್ಷೇತ್ರದಲ್ಲಾಗಬೇಕಿರುವ ಕೆಲಸದ ಅಗಾಧತೆಯನ್ನು ಸ್ಪಷ್ಟಪಡಿಸುತ್ತದೆ. ಶಂಭಾ ಜೋಶಿ, ಸೇಡಿಯಾಪು ಕೃಷ್ಣಭಟ್ಟ, ಎಂ.ಚಿದಾನಂದಮೂರ್ತಿ, ಕೆಮ್ತೂರ್ ರಘುಪತಿಭಟ್ಟ, ಕಲಬುರ್ಗಿ, ಎಂ.ಎಂ.ವಿ.ಗೋಪಾಲಕೃಷ್ಣ, ಆರ್ಕೆ ಮಣಿಪಾಲ, ದೇಜಗೌ, ವಿ.ವಿಶ್ವನಾಥ, ಹೆಚ್.ಎಂ.ಮಹೇಶ್ವರಯ್ಯ, ಸಿ.ಎಂ.ವಿಶ್ವನಾಥಯ್ಯ ಇವರುಗಳು ಸ್ಥಳನಾಮಗಳನ್ನು ಕುರಿತು ಕೃತಿ ರಚಿಸಿದ ವಿದ್ವಾಂಸರುಗಳಾಗಿದ್ದಾರೆ.

ಸ್ಥಳನಾಮಗಳ ಅಧ್ಯಯನವನ್ನು ಕರ್ನಾಟಕದಾದ್ಯಂತ ಕೈಗೊಳ್ಳಬೇಕೆಂಬ ಕರೆ ಎಲ್ಲ ವಿದ್ವಾಂಸರದ್ದಾಗಿದೆ. ಏಕೆಂದರೆ ಈ ಕ್ಷೇತ್ರ ಅಧ್ಯಯನಾಸಕ್ತರನ್ನು ಕೈಬೀಸಿ ಕರೆಯುತ್ತಿದೆ. ಸಾಂಸ್ಕೃತಿಕ ಮಹತ್ವವನ್ನರಿಯದ ಜನ ಮನಬಂದಂತೆ ಊರ ಹೆಸರುಗಳನ್ನು ತಿರುಚುತ್ತಿರುವ ಕೆಲಸ ಈಗಾಗಲೇ ಆರಂಭವಾಗಿದೆ. ಆಧುನೀಕರಣಗೊಳಿಸುವ ಭರದಲ್ಲಿ ಕೆ.ಜಿ.ಕೊಪ್ಪಲು, ಬಿ.ಕೆ.ಹೊಸೂರ, ಹೆಚ್.ಡಿ.ಕೋಟೆ, ಜಿ.ಆರ್.ಹಳ್ಳಿ ಎಂದು ಕರೆಯುವ ಮೂಲಕ ಮೂಲಾರ್ಥವೇ ಮರೆಯಾಗುವಂತೆ ಮಾಡುತ್ತಿದ್ದಾರೆ. ಆ ಮೂಲಕ ಇತಿಹಾಸಕ್ಕೆ ಅಪಚಾರ ನಮ್ಮ ಪೂರ್ವಿಕರಿಗೆ ಅವಮಾನವಾಗುತ್ತದೆ.

ಈ ಪ್ರವೃತ್ತಿಗೊಂದು ಕಡಿವಾಣವನ್ನು ಹಾಕದಿದ್ದರೆ ಮುಂದೊಂದು ದಿನ ರೈಲ್ವೆ ಇಲಾಖೆಯವರು ಸ್ಥಳನಾಮಗಳನ್ನು BRR–ಬೀರೂರು, BDVT–ಭದ್ರಾವತಿ, SMG–ಶಿವಮೊಗ್ಗ, ASK–ಅರಸೀಕೆರೆ, HBL–ಹುಬ್ಬಳ್ಳಿ ಎಂದು ಕರೆಯುತ್ತಿರುವಂತೆ ಜನರೂ ಕರೆಯಲೂ ಮುಂದಾದರೆ ಗತಿ ಏನು? ಎಂಬ ಭಯ ಆವರಿಸುತ್ತದೆ. ಈ ಪಾಪದ ಕೆಲಸವನ್ನು ತಡೆಗಟ್ಟಬೇಕಾದರೆ ಕರ್ನಾಟಕದ ಎಲ್ಲಾ ಜಿಲ್ಲೆಗಳ ಸ್ಥಳನಾಮಗಳನ್ನು ಅಧ್ಯಯನಕ್ಕೆ ಒಳಪಡಿಸಿ ಅವುಗಳ ಕೋಶವೊಂದನ್ನು ಸಿದ್ಧಪಡಿಸಿ ಪ್ರತಿಯೊಂದು ಸ್ಥಳನಾಮದ ಪ್ರಾಚೀನತೆ, ನಿಷ್ಪತ್ತಿ, ಅರ್ಥ, ಉಚ್ಚಾರಣಾ ಕ್ರಮಗಳನ್ನು ಸರಕಾರಿ ಮತ್ತು ಸಾರ್ವಜನಿಕ ಸಂಸ್ಥೆಗಳಿಗೆ ಒದಗಿಸುವದೊಂದೇ ಇದಕ್ಕಿರುವ ಏಕೈಕ ಮಾರ್ಗವಾಗಿದೆ. ಈ ಆಶಯ ಕೇವಲ ಕನಸಾಗದೆ ನನಸಾದೀತು ಎಂಬುದು ನನ್ನ ನಂಬಿಕೆ. ಏಕೆಂದರೆ ಕತ್ತಲಿನ ದಾರಿಯನ್ನು ಬೇಕಾದರೆ ಕ್ರಮಿಸಬಹುದು. ಆದರೆ ಕನಸುಗಳಿಲ್ಲದ ದಾರಿಯನ್ನು ಕ್ರಮಿಸುವುದಾದರೂ ಹೇಗೆ ಪಾಶ್ಚಾತ್ಯರಲ್ಲಿ ಸಾಧ್ಯವಾದದ್ದು ನಮಗೇಕೆ ಅಸಾಧ್ಯವಾಗಬೇಕು.

ಸ್ಥಳನಾಮಗಳ ಮೂಲ ನೆಲೆ

ಪ್ರಕೃತಿ, ಭೌಗೋಳಿಕ ಪರಿಸರ, ಸಂಸ್ಕೃತಿ, ಐತಿಹಾಸಿಕತೆ, ಪೌರಾಣಿಕ, ಕವಿಗಳು, ರಾಜಕೀಯ ವ್ಯಕ್ತಿಗಳು, ಪ್ರಸಿದ್ಧ ಸಮಾಜ ಸುಧಾರಕರು, ಜಾನಪದ, ಐತಿಹ್ಯಗಳು, ಜನಾಂಗ, ವೃತ್ತಿ, ವ್ಯಕ್ತಿನಾಮಗಳು, ರಾಜ–ರಾಣಿಯರು, ಮಾಂಡಳಿಕರು, ದೈವತ್ವದ ಪರಿಕಲ್ಪನೆ, ವ್ಯಕ್ತಿಯ ಬಣ್ಣ, ಆಕಾರ, ಗಾತ್ರ, ಇವೆಲ್ಲ ಅಂಶಗಳ ಆಧಾರದ ಮೇಲೆ ಸ್ಥಳನಾಮಗಳು ಬೆಳವಣಿಗೆಯನ್ನು ಹೊಂದಿದವು.

ಪ್ರಕೃತಿ:

ಮರ, ಗಿಡ, ಬಳ್ಳಿ, ಸಸ್ಯಗಳು, ತರಕಾರಿಗಳು, ಪೊದೆ, ದಟ್ಟವಾದ ಅರಣ್ಯ ಇವುಗಳ ಆಧಾರದ ಮೇಲೆ ಸ್ಥಳನಾಮಗಳು ರೂಪಿತವಾಗಿರುತ್ತವೆ. ಆಯಾ ಪ್ರದೇಶದಲ್ಲಿ ವಿಫುಲವಾಗಿ ಸಿಗುವಂತಹ ಯಾವುದೇ ಒಂದು ವಸ್ತುವಾಗಿರಲಿ ಅಲ್ಲಿ ಹೆಸರುವಾಸಿಯಾಗಿದ್ದರೆ, ಆ ಪ್ರದೇಶಕ್ಕೆ ಅದರ ಹೆಸರನ್ನೇ ಸೂಚಿಸುವುದು ಕಂಡುಬರುತ್ತದೆ.

ಉದಾ: ಮಾವು–ಮಾವಿನಹಳ್ಳಿ, ಮಾವಿನತೋಪು
ನೇರಳೆ–ನೇರಲಕೆರೆ, ನೇರಲಗುಂದಿ

ಭೌಗೋಳಿಕ ಪರಿಸರ:

ಭೂಮಿಯ ಮೇಲೆ ನಮಗೆ ಭೌಗೋಳಿಕ ಪರಿಸರ, ಪ್ರಕೃತಿ ಎನ್ನುವುದು ಒಂದು ವರದಾನವಾಗಿ ಪರಿಣಮಿಸಿದೆ. ಪ್ರಕೃತಿಯ ಸೌಂದರ್ಯವನ್ನು ಭೌಗೋಳಿಕ ಪರಿಸರವನ್ನು

ನರಮನುಷ್ಯನಿಂದ ಸೃಷ್ಟಿಸಲು ಅಸಾಧ್ಯ. ಅಂತಹ ಸೃಷ್ಟಿಯ ಅಗೋಚರವಾದ ಈ ಭೂಮಿಯ ಮೇಲೆ ಮನುಷ್ಯ ವಾಸಮಾಡಲಿಕ್ಕೆ ಅವನಿಗೆ ಯೋಗ್ಯವಾದ ಪ್ರದೇಶವನ್ನು ಆಯ್ದುಕೊಂಡು ಅಲ್ಲಿ ವಾಸಮಾಡುತ್ತಾನೆ. ಅಂದರೆ ಅಲ್ಲಿ ಇರುವಂತಹ ಬೆಟ್ಟ-ಗುಡ್ಡ, ನದಿ-ಕಣಿವೆ, ಸಾಗರ-ಸಮುದ್ರ ಇವುಗಳು ಇರುವಂತಹ ಪ್ರದೇಶದಲ್ಲಿ ತಾನು ನೆಲೆನಿಂತು ಆ ಪ್ರದೇಶಕ್ಕೆ ಹೊಂದಿಕೊಳ್ಳುವಂತಹ ಹೆಸರನ್ನು ಕರೆದುಕೊಂಡನು.

ಉದಾ: ಬಂಡೆ-ಬಂಟೆಹಟ್ಟಿ, ಬಂಡೆತಿಮ್ಮಲಾಪುರ

ಸಾಗರ-ಭರಮಸಾಗರ

ಸಂಸ್ಕೃತಿ:

ಭಾರತ ದೇಶವು ಸಂಸ್ಕೃತಿಗೆ ಹೆಸರಾಗಿರುವಂತಹ ದೇಶ. ಆದುದರಿಂದ ಇಲ್ಲಿನ ಜನಪದರು ಅವರ ಸಂಸ್ಕೃತಿ ಆಚಾರ-ವಿಚಾರಗಳನ್ನು ಬಿಟ್ಟುಬಿಡಲಾರರು. ಅದನ್ನು ಅವರು ದೈವತ್ವದ ಪರಿಕಲ್ಪನೆಯ ರೂಪದಲ್ಲಿ ನಂಬಿಕೊಂಡು ಬಂದವರು. ಅವರ ಹೆಸರುಗಳಲ್ಲಿಯೂ ಕೂಡ ಸಂಸ್ಕೃತಿಯನ್ನು ಹುಡುಕಬಹುದು.

ಐತಿಹಾಸಿಕ:

ಅನೇಕ ರಾಜಮನೆತನಗಳು ಕರ್ನಾಟಕದಲ್ಲಿ ಆಳ್ವಿಕೆ ನಡೆಸಿರುವುದರಿಂದ ಸ್ಥಳನಾಮದ ಹೆಸರನ್ನೆ ಇಟ್ಟುಕೊಂಡು ಅನೇಕ ರಾಜಮನೆತನಗಳು ಆಳ್ವಿಕೆಯನ್ನು ನಡೆಸಿರುವವು.

ಉದಾ: ದೋರಸಮುದ್ರ-ದೋರಸಮುದ್ರದ ಹೊಯ್ಸಳರು

ತಲಕಾಡು-ತಲಕಾಡಿನ ಗಂಗರು

ಪೌರಾಣಿಕ:

ಪೌರಾಣಿಕ ಮಹಾಕಾವ್ಯಗಳಲ್ಲಿ ಬರುವಂತಹ ವ್ಯಕ್ತಿಗಳ ಹೆಸರಿನ ಮುಖಾಂತರ ಸ್ಥಳನಾಮಗಳು ಉಗಮವಾಗಿವೆ.

ಉದಾ: ರಾಮ – ರಾಮಪುರ, ರಾಮಜೋಗಿಹಳ್ಳಿ

ಜಟಾಯು – ಜಟಿಂಗರಾಮೇಶ್ವರ

ರಾಜಕೀಯ ವ್ಯಕ್ತಿಗಳು:

ರಾಜಕೀಯವ್ಯಕ್ತಿಗಳ ಹೆಸರಿನಲ್ಲಿ ಅನೇಕ ಬಡಾವಣೆಗಳು, ಕಾಲೋನಿಗಳು, ಸಣ್ಣ ಸಣ್ಣ ಹಳ್ಳಿಗಳು ಉಗಮವಾಗಿವೆ.

ಉದಾ: ಹೋಚಿಬೋರಯ್ಯ-ಹೋಚಿಬೋರಯ್ಯ ಬಡಾವಣೆ

ಪ್ರಸಿದ್ಧ ಸಮಾಜ ಸುಧಾರಕರು:

ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಇವರುಗಳ ಹೆಸರಿನಲ್ಲಿ ಅನೇಕ ಊರು, ಹಳ್ಳಿ, ಕಾಲೋನಿ, ನಗರಗಳು ಸ್ಥಾಪನೆಯಾಗಿವೆ.

ಉದಾ: ಬಸವ-ಬಸವಾಪಟ್ಟಣ

ಗಾಂಧಿ - ಗಾಂಧಿನಗರ

ಜಾನಪದ ಐತಿಹ್ಯಗಳು:

ನಮ್ಮ ಸಮಾಜದಲ್ಲಿ ಮೌಖಿಕ ಪರಂಪರೆಗೆ ಬಹು ಸುದೀರ್ಘವಾದ ಇತಿಹಾಸವಿದೆ. ಜನಪದರು ಹಿಂದಿನಿಂದಲೂ ನಂಬಿಕೊಂಡು ಬಂದಿರುವಂತಹ ನಂಬಿಕೆಗಳಿಂದಲೇ ಕೆಲವೊಂದು ಸ್ಥಳಗಳಿಗೆ ಜನಪದರು ಕಂಡುಕೊಂಡು ಪುಣ್ಯಪುರುಷರ ಹೆಸರುಗಳನ್ನು ಇಡಲಾಗಿದೆ. ಉದಾ: ಜಟಿಂಗರಾಮೇಶ್ವರ, ರಾಮಗಿರಿ

ಜನಾಂಗ:

ಬುಡಕಟ್ಟುಗಳು (ನಾಯಕ, ಗೊಲ್ಲ, ಕುರುಬ) ಜನರು ತಮ್ಮದೆ ಆದ ಸಂಪ್ರದಾಯ ಆಚಾರ-ವಿಚಾರಗಳಿಂದ ಬದುಕುತ್ತಿರುತ್ತಾರೆ. ಅವರು ತಮ್ಮ ಹಟ್ಟಿಯ ಸುತ್ತಲೂ ಭದ್ರವಾಗಿ ಬೇಲಿಯನ್ನು, ಕಲ್ಲು ಕಟ್ಟಡವನ್ನು ಕಟ್ಟಿಕೊಂಡು ವಿಶಿಷ್ಟ ಜೀವನ ಶೈಲಿಯೊಂದಿಗೆ ಬದುಕುತ್ತಿರುತ್ತಾರೆ. ಹಟ್ಟಿ, ವಾಡಿಗಳು ಆಯಾ ಜನಾಂಗಕ್ಕೆ ಅಷ್ಟೇ ಸೀಮಿತವಾಗಿರುತ್ತಿದ್ದವು.

ಉದಾ: ನಾಯಕ-ನಾಯಕನಹಟ್ಟಿ,

ಕುರುಬ-ಕುರುಬರಹಟ್ಟಿ

ಗೊಲ್ಲ-ಗೊಲ್ಲರಹಟ್ಟಿ

ವೃತ್ತಿ:

ಸಮಾಜದಲ್ಲಿ ಕಂಡುಬರುವಂತಹ ಹಲವಾರು ವೃತ್ತಿಯ ಜನರು ತಮ್ಮದೇ ಆದಂತಹ ವೃತ್ತಿಯನ್ನು ಮಾಡಿಕೊಂಡು ಹೋಗುವರು. ಆ ವೃತ್ತಿಯ ಮುಖಾಂತರ ಆ ಊರಿನ ಸ್ಥಳನಾಮವನ್ನು ಗುರುತಿಸುವುದು.

ಉದಾ: ಕುಂಬಾರ - ಕುಂಬಾರನಹಳ್ಳಿ

ಶೆಟ್ಟಿ - ಶೆಟ್ಟಿಹಳ್ಳಿ

ವ್ಯಕ್ತಿನಾಮಗಳು:

ಒಂದು ಊರಿನಲ್ಲಿ ಕಂಡುಬರುವಂತಹ ಪ್ರಸಿದ್ಧ ವ್ಯಕ್ತಿ, ಹಟ್ಟಿ, ಆಡಿಯ ನಾಯಕರುಗಳ ಹೆಸರನ್ನು ಆ ಊರಿಗೆ ಇಡಲಾಗುತ್ತದೆ. ವ್ಯಕ್ತಿನಾಮಗಳು ಕೂಡಸ್ಥಳನಾಮಗಳಾಗಿ ಉಳಿದುಕೊಂಡು ಬಂದಿವೆ.

ಉದಾ: ಕಾಕ–ಕಾಕನೂರು

ಮಾಚ–ಮಾಚಗಾವುಂಡನಹಳ್ಳಿ

ಮಾದ–ಮಾದನಾಯಕನಹಳ್ಳಿ

ರಾಜ–ರಾಣಿಯರು:

ರಾಜರು ಆಳ್ವಿಕೆ ಮಾಡುವಂತಹ ಸಂದರ್ಭದಲ್ಲಿ ಆ ಸಂಸ್ಥಾನದ ವ್ಯಾಪ್ತಿಗೆ ಬರುವಂತಹ ಭೂಮಿಯನ್ನು ಯಾರಿಗಾದರೂ ಉಂಬಳಿಯಾಗಿ ಅಥವಾ ದಾನ–ದತ್ತಿಯಾಗಿ ಕೊಟ್ಟಂತಹ ಭೂಮಿಯನ್ನು, ಸ್ಥಳವನ್ನು ಅಲ್ಲಿ ಊರು ನಿರ್ಮಾಣ ಮಾಡಿದರೆ ಆ ಊರಿಗೆ ದಾನಕೊಟ್ಟಂತಹ ರಾಜ–ರಾಣಿಯರ ಹೆಸರನ್ನು ಇಡಲಾಗುತ್ತದೆ.

ಉದಾ: ಮದಕರಿನಾಯಕ–ಮದಕರಿನಾಯಕನಕೋಟೆ

ಚೆನ್ನವ್ವನಾಗತಿ–ಚೆನ್ನವ್ವನಾಗತಿಹಳ್ಳಿ

ಮಾಂಡಲೀಕರು:

ರಾಜರ ಆಜ್ಞೆಯ ಮೇರೆಗೆ ಮಾಂಡಲೀಕರು ಚಿಕ್ಕಪುಟ್ಟ ಸಂಸ್ಥಾನವನ್ನು ನೋಡಿಕೊಳ್ಳುತ್ತಿದ್ದರು. ಅವರು ನೋಡಿಕೊಳ್ಳುತ್ತಿದ್ದಂತಹ ಆ ಪ್ರದೇಶಕ್ಕೆ ಅವರ ಹೆಸರೇ ಸ್ಥಳನಾಮವಾಗಿ ಮುಂದುವರೆದಿದೆ.

ಉದಾ: ಚಿಕ್ಕಗಾವುಂಡ–ಚಿಕ್ಕಗೊಂಡನಹಳ್ಳಿ

ಮಾಚಗಾವುಂಡ–ಮಾಚಗಾವುಂಡನಹಳ್ಳಿ

ದೈವತ್ವದ ಪರಿಕಲ್ಪನೆ:

ನಮ್ಮ ಜನರು ದೇವರು–ಧರ್ಮದ ವಿಚಾರದಲ್ಲಿ ಬಹಳ ನಂಬಿಕೆಯುಳ್ಳವರು. ಅವರು ತಾವು ನಂಬಿಕೊಂಡು ಬಂದಿರುವ ದೈವದ ಹೆಸರಿನಲ್ಲಿ ಊರುಗಳನ್ನು ಕಟ್ಟಿಕೊಂಡು ಆ ಊರಿಗೆ ಅದೇ ಹೆಸರನ್ನು ಇಡುತ್ತಿದ್ದರು.

ಉದಾ: ಮಾರಮ್ಮ–ಮಾರಮ್ಮನಹಳ್ಳಿ

ಹನುಮಂತ–ಹನುಮಂತನಹಳ್ಳಿ

ಇಲ್ಲಿಯವರೆಗೆ ನಮ್ಮೂರ ಹೆಸರು ಹೇಗಾದರೂ ಇರಲಿ. ಅದು ಹಾಗೆಯೇ ಇರಲಿ ಎಂಬ ನಿರ್ಧಾರಕ್ಕೆ ಜನತೆ ಬರುವುದಾದರೆ ಮೂಲ ಹೆಸರುಗಳನ್ನು ಬದಲಿಸುವ ಪ್ರಯತ್ನಗಳ ವಿರುದ್ಧ ದನಿ ಎತ್ತುವಂತಾದರೆ ಸ್ಥಳನಾಮಗಳಲ್ಲಿನ ಸಾಂಸ್ಕೃತಿಕ ಸಂಗತಿಗಳು ಸುಭದ್ರವಾಗಿ ಉಳಿದಿರುತ್ತವೆ.

೨.೩. ಸ್ಥಳನಾಮಗಳ ವರ್ಗೀಕರಣ

ಸ್ಥಳನಾಮಗಳು ಸಾಮಾನ್ಯವಾಗಿ ಕೂಡುನುಡಿಗಳೇ ಹೊರತು ಅಖಂಡ ಶಬ್ದಗಳಲ್ಲ ಎಂಬುದನ್ನು ಈ ಹಿಂದೆಯೇ ಸ್ಪಷ್ಟಪಡಿಸಲಾಗಿದೆ. ಅವುಗಳ ಮೊದಲನೆಯ ಘಟಕ ಸ್ಥಳದ ವೈಶಿಷ್ಟ್ಯವನ್ನು ಹಿಡಿದಿರಿಸಿಕೊಂಡಿರುವುದರಿಂದ ಅದನ್ನು ನಿರ್ದಿಷ್ಟ (Specific) ಎಂದೂ, ಎರಡನೆಯ ಘಟಕ ನೆಲೆ ನಿರ್ದೇಶಕವಾಗಿರುವುದರಿಂದ ಅದನ್ನು ವಾರ್ಗಿಕ (Generic) ಎಂದೂ ಕರೆಯುತ್ತೇವೆ. ಅಂದರೆ ವಾರ್ಗಿಕವು ಹೆಸರಿನ ಸಾಮಾನ್ಯ ವರ್ಗವನ್ನು ಪ್ರತಿನಿಧಿಸುತ್ತದೆ. ಸ್ಥಳನಾಮಗಳಲ್ಲಿ ಕಾಣಬರುವ ನಿರ್ದಿಷ್ಟವನ್ನು ಪಟ್ಟಿ ಮಾಡುವುದು ಕಠಿಣವೆಂದೂ, ಆದರೆ ವಾರ್ಗಿಕಗಳು ಸೀಮಿತವಾಗಿರುವುದರಿಂದ ಅವುಗಳನ್ನು ಪಟ್ಟಿ ಮಾಡುವುದು ಸುಲಭವೆಂದೂ ವಿದ್ವಾಂಸರು ಭಾವಿಸುತ್ತಾರೆ.

ಕನ್ನಡ ಸ್ಥಳನಾಮಗಳಲ್ಲಿ ಕಾಣಬರುವ ನಿರ್ದಿಷ್ಟಗಳನ್ನು ಪಟ್ಟಿ ಮಾಡುವುದು ಕಷ್ಟ, ಆದರೆ ಅವುಗಳನ್ನು ಕೆಲವು ಗುಂಪುಗಳಾಗಿ ವಿಂಗಡಿಸಬಹುದು. ಸಸ್ಯಗಳು, ಬೆಟ್ಟ-ಗುಡ್ಡ, ಮರಗಳು, ಮನುಷ್ಯರ ಹೆಸರುಗಳೂ, ಹೂಗಳು ಇತ್ಯಾದಿ. ಹಾಗಾಗಿ ಮುಂದಿನ ಸಾಲುಗಳಲ್ಲಿ ವಿಜಯಪುರ ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳಲ್ಲಿ ಬಳಕೆಯಾಗಿರುವ ವಾರ್ಗಿಕಗಳನ್ನು ಒಂದೊಂದಾಗಿ ಪರಿಶೀಲನಗೆ ಒಳಪಡಿಸಲಾಗಿದೆ.[೨೫]

ಹಳ್ಳಿ: ದಕ್ಷಿಣ ಭಾರತದಾದ್ಯಂತ ಬಳಕೆಯಲ್ಲಿರುವ ಈ ವಾರ್ಗಿಕ ದ್ರಾವಿಡ ಮೂಲದ್ದು. ಪಂಚದ್ರಾವಿಡ ಭಾಷೆಗಳಲ್ಲಿ ಬಳಕೆಯಾಗಿರುವ ಈ ವಾರ್ಗಿಕದ ಮೂಲ ಪಳ್ಳಿ. ಇದಕ್ಕೆ ಸಣ್ಣ ಊರು, ಗುಡಿಸಲು ಎಂಬರ್ಥಗಳಿರುವುದಲ್ಲದೆ ಬೌದ್ಧ, ಜೈನ ದೇವಾಲಯದ ಸ್ಥಳ ಎಂಬರ್ಥಗಳಿವೆ.

ಕತಕನ್ನಳ್ಳಿ, ಹಳ್ಳಿ, ಪಳ್ಳಿಗಳ. ಮೂಲ 'ಪಡು'ವಿನಲ್ಲಿದೆ ಎಂದು ಹೇಳುತ್ತಾರೆ. ಕೆಳಗೆ ಬೀಳು, ಕೆಳಗೆ ಹೋಗು ಎಂಬರ್ಥವನ್ನು ಕೊಡುತ್ತಾರೆ. ಪಳ್ಳ ಎಂಬುದಕ್ಕೆ ತಗ್ಗು, ಆಳ, ತೊರೆ ಎಂಬರ್ಥಗಳಿರುವುದರಿಂದ ನೀರಿನಾಶ್ರಯದ ತಗ್ಗಿನ ನೆಲೆಯೇ 'ಹಳ್ಳಿ' ಎಂದು ಭಾವಿಸಲು ಅವಕಾಶವಿದೆ.

ಹಾಳ: ದ್ರಾವಿಡ ಮೂಲದ ವಾರ್ಗಿಕ ಇದಾಗಿದ್ದು, ತಮಿಳು, ಮಲಯಾಳಂನಲ್ಲಿ ಪಾಳ ಎಂದೂ, ತುಳುವಿನಲ್ಲಿ ಪಾಳು ಎಂದೂ ಕನ್ನಡದಲ್ಲಿ ಹಾಳ್, ಹಾಳು ಎಂದೂ ಬಳಕೆಯಾಗಿದೆ. ಪಾಳ್, ಹಾಳ್ ಮುಂತಾದ ರೂಪಗಳ ಮೂಲ 'ಪಡು'ವಿನಲ್ಲಿದೆ. ಕನ್ನಡದಲ್ಲಿ ಈ ಶಬ್ದಗಳಲ್ಲಿ

ಹಾಳು ಬಿದ್ದ ಭೂಮಿ, ಸಾಗುವಳಿ ಮಾಡದ ಭೂಮಿ, ಒಣಗಿದ ಭೂಮಿ ಎಂಬರ್ಥಗಳಿವೆ. ಪೊಳಲು ಎಂದರೆ ಪಟ್ಟಣ ಎಂದರ್ಥ. ಪ>ಹ ಆಗಿ ಹೊಳಲು ಆಗಿ ಸೌಲಭ್ಯಾಕಾಂಕ್ಷೆಯಿಂದಾಗಿ ಹಾಳ್, ಹಾಳ ಆಗಿರುವ ಸಾಧ್ಯತೆಗಳನ್ನು ಅಲ್ಲಗೆಳೆಯಲಾಗದು.

'ಹಾಳು' ಎಂಬ ಗ್ರಾಮನಾಮ ಕ್ರಿ.ಶ.೬೧೨ ರ ಅರಿಯದ ವಸತಿ ದ್ವೀಪಗಳ ಹೆಸರಾಗಿದೆ.[೧೬]

ಊರು: ಈ ವಾರ್ಗಿಕ ಅಚ್ಚ ದ್ರಾವಿಡ ಮೂಲದ್ದು. ಹಾಗಾಗಿ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಮತ್ತು ಇತರ ದ್ರಾವಿಡ ಭಾಷೆಗಳಾದ ಕೊಂಡ, ತೋಡ, ಕೊಡವ, ಕೊಲಾಮಿ, ನಾಯರ ಭಾಷೆಗಳಲ್ಲೂ ಇದು ವ್ಯಾಪಕವಾಗಿ ಬಳಕೆಯಾಗಿರುವುದನ್ನು ದ್ರಾವಿಡ ಭಾಷೆಯ ಉತ್ಪತ್ತಿಕೋಶವನ್ನು ದೃಢಪಡಿಸುತ್ತದೆ. ಈ ವಾರ್ಗಿಕ ದಕ್ಷಿಣ ಭಾರತವನ್ನು ಮೀರಿ ಹೊರ ದೇಶದವರೆಗೂ ವ್ಯಾಪಿಸಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.

'ಊರ್' ಎಂಬ ವಾರ್ಗಿಕ ದ್ರಾವಿಡ ಮೂಲದ ಇರ್ ಅಥವಾ ಉರ್ ಧಾತುವಿನಿಂದ ಬಂದಿದ್ದು. ನೆಲಸುವಿಕೆ, ಇರುವಿಗೆ ಎಂಬರ್ಥವನ್ನು ಕೊಡುತ್ತದೆ. ಊರು ಎಂಬ ಪದ ಅಥವಾ ಅದರ ವಿಭಿನ್ನ ಸಾದಿತರೂಪಗಳು ಜಲಸಂಬಂಧಿಯಾಗಿರುವುದಕ್ಕೆ ದೃಷ್ಟಾಂತಗಳಿರುವುದನ್ನು ಡಾ.ರಘುಪತಿಭಟ್ಟ ಕೆಮ್ಮೂರ್ ದೃಢಪಡಿಸುತ್ತಾರೆ. ಊರುಗಳಿಂದ ಕೊನೆಗೊಳ್ಳುವ ಸ್ಥಳನಾಮಗಳು ಸಾಮಾನ್ಯವಾಗಿ ಚಿಕ್ಕವು. ಈ ವಾರ್ಗಿಕ ನಿರ್ದಿಷ್ಟದೊಡನೆ ಸೇರುವಾಗ ಸಾದೃಶ್ಯೀಕರಣಗೊಳ್ಳುತ್ತದೆ (Assimilation).

ಪುರ: ಪುರದಿಂದ ಕೊನೆಗೊಳ್ಳುವ ಸ್ಥಳನಾಮಗಳು ಊರಿಗಿಂತ ಗಾತ್ರದಲ್ಲಿ ದೊಡ್ಡವೆಂದು ಭಾವಿಸಲು ಅವಕಾಶವಿದೆ. ಅನ್ಯದೇಶೀಯ (ಸಂಸ್ಕೃತ) ವಾರ್ಗಿಕವಾದರೂ ಇದರಿಂದ ಕೊನೆಗೊಳ್ಳುವ ಸ್ಥಳನಾಮಗಳು ತಮಿಳುನಾಡು, ಆಂಧ್ರ ಮತ್ತು ಕರ್ನಾಟಕಗಳಲ್ಲಿ ವ್ಯಾಪಕವಾಗಿ ಬಳಕೆಯಾಗಿದೆ.

ಪುರವೇ ವರ, ವಾರ ಎಂಬ ರೂಪಾಂತರ ಹೊಂದುವುದನ್ನು ಎಂ.ಚಿದಾನಂದ ಮೂರ್ತಿ ಹೀಗೆ ತೋರಿಸಿದ್ದಾರೆ.[೧೭]

ಪುರ
ಪುರ — ವುರ ವರ–ವಾರ
ವರ/ ಹುರ–ಊರು

ಆದರೆ ಎಂ.ಎಂ.ಕಲಬುರ್ಗಿಯವರು ವರ–ವಾರ ಎಂಬವು ಆಹಾರ (ದೇಶ, ಸ್ಥಳ) ಎಂಬ ಆಕೃತಿಮಾದ ಎರಡು ಉಪ ಆಕೃತಿಮಾಗಳೆ ಎನ್ನುತ್ತಾರೆ.[೧೮]

ಕೇರಿ–ಹೇರಿ–ಗೇರಿ:

ದ್ರಾವಿಡದ ವಾರ್ಗಿಕಗಳಲ್ಲಿ ಇದೂ ಒಂದಾಗಿದ್ದು ಎಲ್ಲಾ ದ್ರಾವಿಡ ಭಾಷೆಗಳಲ್ಲೂ ಬಳಕೆಯಲ್ಲಿದೆ. ತಮಿಳು, ಮಲಯಾಳಂಗಳಲ್ಲಿ ಚೇರಿ ಎಂದೂ, ಕನ್ನಡ, ತುಳುಗಳಲ್ಲಿ ಕೇರಿ ಎಂದೂ, ತೆಲುಗಿನಲ್ಲಿ ಗೇರಿ ಎಂದೂ ಬಳಕೆಯಾಗುತ್ತಿದೆ.

ಈ ವಾರ್ಗಿಕವು ಊರು, ಊರಿನ ಭಾಗ ಎಂಬರ್ಥವನ್ನು ಕೊಡುತ್ತದೆ. ಕೇರಿಯು ಜನಮೂಲವನ್ನು ಸೂಚಿಸುವ ಕೆರೆ ಎಂಬುದುರ ಮುಕ್ತ ಆಕೃತಿಮಾ (Free morpheme) ಎಂದು ಆರ್.ಸಿ.ಹಿರೇಮಠ್ ಹೇಳುತ್ತಾರೆ.[೧೯]

ವಾಡೆ: ಕರ್ನಾಟಕ, ಮಹಾರಾಷ್ಟ್ರದಲ್ಲಿ ವಾಡ, ವಾಡಿ, ವಡ ಎಂಬೀ ಬಗೆಯ ಶಬ್ದ ಸಂಕೇತವುಳ್ಳ ಹಲವು ಎಡೆಗಳು ಕಾವೇರಿಯಿಂದ ನರ್ಮದಾವರೆಗೆ ಎಲ್ಲೆಲ್ಲಿಯೂ ದೊರೆಯುತ್ತವೆ. 'ವಾಡಿ' ಸಂಸ್ಕೃತ ಜನ್ಯವಾದದ್ದು. 'ವಟ' ಉದ್ದು, ವೃಕ್ಷ ಅಥವಾ ವೃತ್ತಾಕಾರದ ಬೇಲಿಯ ಅಸ್ತಿತ್ವದಿಂದ 'ವಾಡಿ' ಎಂಬ ಹೆಸರು ಬಂದಿತೆಂದು ತಜ್ಞರ ಅಭಿಪ್ರಾಯವಾಗಿದೆ. ವಾಡ, ವಾಡಿಗಳೆಂದರೆ ಗೋವುಗಳ ಹುಟ್ಟು ಎಂದರ್ಥ. ದನಗಳನ್ನು ಪಂಜರಪೊಲ್ (ಪಂಜರಪೋಳ)ದಲ್ಲಿ ಇರಿಸುವುದು. ಮೈಸೂರು ನಗರದಲ್ಲಿ ಇಂದಿಗೂ ಚಾಲ್ತಿಯಲ್ಲಿದೆ. ಹಾಗಾಗಿ ವಾಡ–ವಾಡಿಗಳ ಅರ್ಥ ನಿಷ್ಪತ್ತಿಯ ಹಿನ್ನೆಲೆಯಲ್ಲಿ ದನಗಳ ಕೊಟ್ಟಿಗೆ ಎಂಬ ಶಂಭಾಜೋಶಿಯವರ ವ್ಯಾಖ್ಯಾನವನ್ನು ಒಪ್ಪಬಹುದು.

ವಾಡಿ<ಪಾಡಿ ಎಂಬುದು ದನಗಳ ಕೊಟ್ಟಿಗೆ ಎಂಬುದಕ್ಕಿಂತ ಮಾನವ ನಿರ್ಮಿತ ನಾಲ್ಕು ಗೋಡೆಗಳಿಂದ ಕೂಡಿದ 'ಮನೆ' ಎಂದು ಅರ್ಥ ಬರುತ್ತದೆ. ಅದಕ್ಕೆ ನಿಘಂಟುಗಳು ಒತ್ತು ನೀಡುತ್ತವೆ.

ಬೆಟ್ಟ: ಕರ್ನಾಟಕದ ಗಡಿಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುವಂತಹ ಬೃಹದಾಕಾರದ ಸೂರ್ಯನ ನೆರಳು ಭೂಮಿಗೆ ಬೀಳದೇ ಇರುವ ರೀತಿ, ನೆಲದ ಮೇಲೆ ಹಾಸಿಗೆಯ ಚಪ್ಪರವಾಸಿದಂತೆ ದೊಡ್ಡ–ದೊಡ್ಡದಾದ ಗಿರಿಕಂದರಗಳು, ಪರ್ವತ ಶ್ರೇಣಿಗಳು ಶಿಖರದ ರೀತಿಯಲ್ಲಿ ಹಾಸುಹೊಕ್ಕಾಗಿರುವುದನ್ನು ಕಾಣಬಹುದು. ಇಂತಹ ಬೆಟ್ಟ–ಗುಡ್ಡಗಳಲ್ಲಿ ವಾಸಮಾಡುವ ಜನರು ತಮ್ಮದೇ ಒಂದು ನಿರ್ದಿಷ್ಟವಾದ ಸ್ಥಳವನ್ನು ನಿಗದಿಪಡಿಸಿಕೊಂಡು ಅದಕ್ಕೆ ಒಂದು ಸುಂದರವಾದ ನಾಮಾಂಕಿತವನ್ನಿಟ್ಟು ಬದುಕಿನ ದಿನನಿತ್ಯದ ಕಾರ್ಯಗಳಿಗೆ ಒಂದು ನಿರ್ದಿಷ್ಟವಾದ ಸ್ಥಳ ಸ್ಥಾಪಿತವಾಗುತ್ತದೆ. ಭೌಗೋಳಿಕ ಲಕ್ಷಣವನ್ನು ಸೂಚಿಸುವ ಪದ ಬೆಟ್ಟ, ದಿನ್ನೆ, ಎತ್ತರ ಪ್ರದೇಶ ಎಂಬರ್ಥವಿದೆ. ತೆಲುಗಿನ 'ಕೊಂಡ' ಪದಕ್ಕೆ ಸಮಾನವಾದುದು. ಗಿರಿ–ಕಂದರಗಳಲ್ಲಿ ವಾಸ ಮಾಡುವುದು ತುಂಬ ಸುಲಭದ ಕಾರ್ಯವಲ್ಲ. ಇದನ್ನು ಜನಸಾಮಾನ್ಯರು ಮಾಡುವುದು ಕಷ್ಟಕರವಾದದ್ದು ಮತ್ತು ದುಸ್ತರವಾದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ.

ಹೀಗೆ ಬೆಟ್ಟ ಒಂದೊಂದು ರೀತಿಯಲ್ಲಿ ಅರ್ಥ ಕಲ್ಪಿಸಿಕೊಂಡ ವಿವರಣೆಯೆನ್ನಬಹುದು. ಬೆಟ್ಟ-ಗಿರಿ-ಪರ್ವತ ಕಷ್ಟ ಸಾಧ್ಯವಾದದು. ದುಸ್ತರವಾದದು ಎನ್ನಬಹುದು. ವಿಜಯಪುರ ಜಿಲ್ಲೆಯಲ್ಲಿ ಶಾಸನೋಕ್ತ ಸ್ಥಳನಾಮಗಳಲ್ಲಿ ಅಧಿಕವಾಗಿ ಬಳಕೆಯಾಗಿರುವ ವಾರ್ಗಿಕಗಳೆಂದರೆ ಹಳ್ಳಿ, ಹಾಳ, ಊರು, ಪುರ, ಕೇರಿ, ಗೇರಿ, ವಾಡೆ, ಬೆಟ್ಟ ಆಗಿವೆ ಮತ್ತು ಬೆಟ್ಟ-ಗುಡ್ಡ ಉಳಿದ ವಾರ್ಗಿಕಗಳು ಮಿತಿ ಪ್ರಮಾಣದಲ್ಲಿ ಬಳಕೆಯಾಗಿವೆ. ಅನ್ಯದೇಶೀಯ ವಾರ್ಗಿಕಗಳಾದ ಪುರ ಬಳಕೆಯಾಗಿದ್ದರೂ ಕನ್ನಡ ವಾರ್ಗಿಕಗಳೊಡನೆ ಹೋಲಿಸಿದರೆ ಅವುಗಳ ಬಳಕೆ ನಗಣ್ಯ ಎನಿಸುತ್ತದೆ. ಈ ವಾರ್ಗಿಕಗಳಾದರೋ ಪುನರ್ ನಾಮಕರಣಗೊಳಿಸಿದ ಸಂದರ್ಭದಲ್ಲಿ ಬಂದವುಗಳಾಗಿರುವುದರಿಂದ ಮೂಲದಲ್ಲಿ ದೇಶೀಯ ವಾರ್ಗಿಕಗಳನ್ನೇ ಹೊಂದಿದ್ದವು ಎಂಬ ಊಹೆ ಸತ್ಯಕ್ಕೆ ಸಮೀಪವಾದ ಊಹೆಯಾಗುತ್ತದೆ.

ಸ್ಥಳನಾಮಗಳ ವರ್ಗೀಕರಣದ ಮಾದರಿಗಳು

ಈವರೆಗೆ ಸ್ಥಳನಾಮ ಅಧ್ಯಯನಕಾರರು ವರ್ಗೀಕರಣದ ಮಾದರಿಗಳನ್ನು ವಿವಿಧ ರೀತಿಯಲ್ಲಿ ಪಟ್ಟಿ ಮಾಡಿದ್ದಾರೆ. ಅಂತಹ ಅಧ್ಯಯನಕಾರರಲ್ಲಿ ಪಾಶ್ಚಾತ್ಯ ವಿದ್ವಾಂಸರೂ ಇದ್ದಾರೆ. ಕೆಲವು ಮಾದರಿಗಳನ್ನು ನೋಡುವ ಮೂಲಕ ಪ್ರಸ್ತುತ ಪ್ರಾದೇಶಿಕ ವರ್ಗೀಕರಣ ಮುಂದುವರೆಯುತ್ತದೆ.

೧. **ಲ್ಯಾಂಬರ್ಟ್ ಮತ್ತು ಮೇರಿಯೊ ಪೈ:** 'ಅಮೇರಿಕನ್ ಪ್ಲೇಸ್ ನೇಮ್ಸ್' ಎಂಬ ಗ್ರಂಥದಲ್ಲಿ ಸ್ಥಳನಾಮಗಳನ್ನು ಹತ್ತು ವಿಧವಾಗಿ ವರ್ಗೀಕರಿಸಿದ್ದಾರೆ.

೧) Descriptive names
೨) Association names
೩) Possessive names
೪) Incident names
೫) Commendatory names
೬) Coined names
೭) Transfer and shift names
೮) Commemorative names
೯) Folk etymology
೧೦) Mistake names

೨. **ಜೆ.ಜೆ.ಯುಗ್ಲಿ:**

೧) Natural names

೨) Cultural names ಎಂದು ಸಂಕ್ಷಿಪ್ತವಾಗಿ ವರ್ಗೀಕರಿಸುತ್ತಾರೆ.

೩. **ಕೆ.ಪಿ.ಪದ್ಮನಾಭ ಮೆನನ್:** ಇವರು 'Some place names of malbar' (೧೯೩೨) ಎಂಬ ಲೇಖನದಲ್ಲಿ ಸ್ಥಳನಾಮಗಳನ್ನು ಹತ್ತು ವಿಧವಾಗಿ ವಿಂಗಡಿಸಿದ್ದಾರೆ.

೧) Topographical condition
೨) Artificial condition
೩) Native soil products
೪) Temple
೫) Ancient military holds
೬) Culture and religious
೭) Incidental
೮) Trade culture
೯) Profession of the people
೧೦) Accidental phenomena

೪. ಪಿ.ನಾರಾಯಣರಾವ್: ಅವರ 'A study of places names in Ananthapuram district' (೧೯೩೫) ಕೃತಿಯಲ್ಲಿ

೧) Direction
೨) Rocks
೩) Big and small
೪) Old and new
೫) Hill and spring
೬) Cold and hot
೭) Channels
೮) Forts
೯) Home sheds
೧೦) Heavenly bodies
೧೧) Animal and birds
೧೨) Part of human body
೧೩) Food
೧೪) Profession
೧೫) Family
೧೬) Dynasty

೫. ರಾಮಚಂದ್ರ ಚೆಟ್ಟಿಯಾರ್: ಅವರ 'Place names of Selam district' ಎಂಬ ಲೇಖನದಲ್ಲಿ ಆರು ವಿಧವಾಗಿ ವಿಂಗಡಿಸಿದ್ದಾರೆ.

೬. ಹಿರಾಲಾಲ್: 'Indian Antiquary' (೧೯೩೦) ರಲ್ಲಿ ಹೀಗೆ ವಿಂಗಡಿಸಿದ್ದಾರೆ.

೧) ಮರಗಳ ಬೆಳವಣಿಗೆಗಿಂತ ಮುಂಚಿತವಾಗಿ ಇಟ್ಟ ಹೆಸರುಗಳು
೨) ಪ್ರಾಣಿ–ಪಕ್ಷಿಗಳಿಂದ ಬಂದ ಹೆಸರುಗಳು
೩) ದೇವತೆಗಳಿಂದ ಬಂದ ಹೆಸರುಗಳು

೭. ಎಸ್.ಎಸ್.ರಾಮಚಂದ್ರ ಮೂರ್ತಿ: ಅವರು

೧) ಭೌತಿಕ ಮತ್ತು ಭೌಗೋಳಿಕ ಲಕ್ಷಣಗಳಿರುವಂತವು
೨) ಸಸ್ಯಲೋಕದ ಹೆಸರುಗಳು
೩) ಪ್ರಾಣಿ ಜಗತ್ತಿನ ಹೆಸರುಗಳು

೪) ಧಾರ್ಮಿಕ ಸಂಗತಿಗಳು

೫) ಜನಾಂಗಿಕ ಅಂಶಗಳು

೬) ಚಾರಿತ್ರಿಕ

೭) ವ್ಯಾಪಾರ, ವಾಣಿಜ್ಯ

೮) ಪ್ರಸಿದ್ಧ ವರ್ಗಗಳ ನಾಮದಿಂದ ಬಂದಂತಹವು

೯) ಸಂಕೀರ್ಣ

೮. **ಎಸ್.ಕೆ.ಚಟರ್ಜಿ:** ಅವರ ವರ್ಗೀಕರಣ ಹೀಗಿದೆ.

೧) ಬುಡಕಟ್ಟು ಅಥವಾ ಜಾತಿಯ ಹೆಸರಿನಿಂದ

೨) ನೈಸರ್ಗಿಕ ಲಕ್ಷಣಗಳು

೩) ಧಾರ್ಮಿಕ ಸಂಗತಿಗಳು

೪) ವ್ಯಕ್ತಿ ಅಥವಾ ಘಟನೆ

೫) ಹಳೆಯ ಹೆಸರುಗಳಿಂದ

೯. **ಎಚ್.ಡಿ.ಸಂಕಾಲಿಯಾ:** ಅವರ ವರ್ಗೀಕರಣ

೧) ವ್ಯಕ್ತಿಯಾಧಾರಿತ

೨) ಘಟನೆ ಆಧಾರಿತ

೩) ಸಂಪ್ರದಾಯ ಮತ್ತು ಮೌಢ್ಯಗಳಿಂದ

೪) ಭೌಗೋಳಿಕ ಲಕ್ಷಣಗಳಿಂದ

೫) ಹೂ, ಹಣ್ಣು, ಮರ, ಬೆಳೆಗಳಿಂದ

೬) ಪ್ರಾಣಿ–ಪಕ್ಷಿಗಳಿಂದ

೭) ಹಳೆಯ ಹೆಸರುಗಳಿಂದ

೧೦. **ಶಂಭಾ ಜೋಶಿ:** ಅವರು 'ಎಡೆಗಳೂ ಹೇಳುವ ಕಂನಾಡ ಕತೆ' ಎಂಬ ಕೃತಿಯಲ್ಲಿ

೧) ಪ್ರಾಣಿಗಳಿಂದ ಬಂದವು

೨) ಗಿಡಗಂಟೆಗಳಿಂದ ಬಂದ ಹೆಸರು

೩) ದೇಹದ ಅಂಗಾಂಗಗಳಿಂದ

೪) ಬಳಗದವರಿಂದ

೧೨) ನೆಲದಿಂದ

೧೩) ಬೇಸಾಯದಿಂದ

೧೪) ಕಾಲದಿಂದ

೧೫) ಮಳೆ, ಮಿಂಚು

೫) ಮನೆಗಳಿಂದ
೬) ದಿನಸುಗಳಿಂದ
೭) ಬಣ್ಣಗಳಿಂದ
೮) ಹರಳುಗಳಿಂದ
೯) ಬಂಗಾರದಿಂದ
೧೦) ಅಂಕೆಗಳಿಂದ
೧೧) ಗ್ರಹಾದಿಗಳಿಂದ
೧೬) ಕಾಲದಿಂದ
೧೭) ಚಿಕ್ಕ, ದೊಡ್ಡ
೧೮) ಕೂಡಿಕೆಯಿಂದ
೧೯) ದೇವಪ್ರಾದಿಗಳಿಂದ
೨೦) ಜನಗಳಿಂದ
೨೧) ವ್ಯವಸಾಯ ಉದ್ಯೋಗಾಧಿಕಾರಿಗಳಿಂದ
೨೨) ವ್ಯಕ್ತಿಗಳಿಂದ
ಅ.ಪುರಾತನ ಋಷಿ
ಆ.ರಾಜಕೀಯ, ಸಾಮಾಜಿಕ
ಇ.ಧಾರ್ಮಿಕ

೧೧. **ದೇ.ಜವರೇಗೌಡ:** ಅವರು ಹೀಗೆ ವರ್ಗೀಕರಿಸಿದ್ದಾರೆ

೧) ವಸತಿ ಸೂಚಿಸುವ ಘಟಕಗಳು
೨) ಬೆಟ್ಟ, ಗುಡ್ಡ, ಕಲ್ಲು ಸೂಚಕಗಳು
೩) ಜಲಸೂಚಕ ಘಟಕಗಳು
೪) ಭೌಗೋಳಿಕ ಲಕ್ಷಣ ಹೇಳುವಂತವು
೫) ಜಾತಿ, ಕುಲಧರ್ಮ ಸೂಚಕ
೬) ವ್ಯಾಪಾರ ಕೇಂದ್ರವನ್ನು ಹೇಳುವಂತವು
೭) ಸೈನಿಕರಿಗೆ ಸಂಬಂಧಿಸಿದಂತವು
೮) ಸಸ್ಯವಾಚಿ
೯) ಪ್ರಾಣಿವಾಚಿ
೧೦) ಸಂಕೀರ್ಣ ಘಟಕಗಳು

೧೨. **ಎಂ.ಎಂ.ಕಲ್ಬುರ್ಗಿ:** ಅವರ 'ನಾಮ ವಿಜ್ಞಾನ'ದಲ್ಲಿ

೧) ನಿಸರ್ಗವಾಚಿ
೨) ನಿರ್ಮಾಣವಾಚಿ
೩) ಜನಾಂಗವಾಚಿ
೪) ವ್ಯಕ್ತಿವಾಚಿ
೫) ಆದರ್ಶವಾಚಿ

ಹೀಗೆ ಅನೇಕ ಮಂದಿ ವಿದ್ವಾಂಸರು ಸ್ಥಳನಾಮಗಳ ವರ್ಗೀಕರಣ ಮಾದರಿಗಳನ್ನು ನೀಡಿದ್ದಾರೆ. ಪಾಶ್ಚಾತ್ಯ ವಿದ್ವಾಂಸರು ನೀಡಿದ ವರ್ಗೀಕರಣದ ಮಾದರಿಯ ನಮ್ಮ ದೇಶಕ್ಕೆ ಹೊಂದಬಹುದು. ಹೊಂದದಿರಬಹುದು. ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ, ವೈವಿಧ್ಯತೆಯಿರುವುದರಿಂದ ಇಂತಹ ವರ್ಗೀಕರಣ ನಮಗೆ ಅಗತ್ಯವೆಂದು ತೋರಲಾರದು. ಅನೇಕರು ನೀಡಿದ ವರ್ಗೀಕರಣ ಅವೈಜ್ಞಾನಿಕವಾಗಿಯೂ ಇದೆ.

ದೇಸಿಯ ವಿದ್ವಾಂಸರು ನೀಡಿದ ವರ್ಗೀಕರಣದಲ್ಲಿಯೂ ಅನೇಕ ಭಿನ್ನ ರೀತಿಯ ಮಾದರಿಗಳೂ ಕಂಡುಬರುತ್ತವೆ. ಇವುಗಳಲ್ಲಿ ಕೆಲವು ಅಸಮರ್ಪಕವೂ, ಅವೈಜ್ಞಾನಿಕವೂ, ಅತಿವ್ಯಾಪ್ತಿಯೂ, ಸಂಕ್ಷಿಪ್ತವೂ ಆಗಿ ಕಂಡುಬರುತ್ತದೆ. ದೇಸಿಯ ನೆಲದಲ್ಲಿಯೂ ವಿವಿಧ ರೀತಿಯಲ್ಲಿ ಪ್ರಾದೇಶಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳು ಇರುವುದರಿಂದ ಇಂತಹ ವರ್ಗೀಕರಣ ಆಯಾ ಪ್ರಾದೇಶಿಕ ಪರಿಸರಕ್ಕೆ ಸರಿಹೊಂದುತ್ತವೆ. ಭಾರತದಲ್ಲಿ ಏಕೆ ಒಂದೇ ಭಾಷೆಯನ್ನೊಳಗೊಂಡ ಕರ್ನಾಟಕದಲ್ಲಿಯೂ ಇಂತಹ ಭಿನ್ನತೆಯನ್ನು ಕಾಣಬಹುದು. ಮಂಗಳೂರು (ದಕ್ಷಿಣ ಕರ್ನಾಟಕದ) ಭಾಗದ ಭೌಗೋಳಿಕ ಹಾಗೂ ಸಾಂಸ್ಕೃತಿಕ ಪರಿಸರ ಉಳಿದ ಕರ್ನಾಟಕದ ಭಾಗಕ್ಕಿಂತ ಭಿನ್ನವಾಗಿರುವುದರಿಂದ ಅಲ್ಲಿನ ವರ್ಗೀಕರಣದ ಮಾದರಿಯು ಸರ್ವಮಾನ್ಯವಾಗಲಾರದು.

ಈ ದೃಷ್ಟಿಯಿಂದ ಯಾವೊಂದು ಪ್ರದೇಶದ ವರ್ಗೀಕರಣವು ಅದೇ ಪ್ರದೇಶಕ್ಕೆ ಹೊಂದುತ್ತದೆ. ಇದಕ್ಕೆ ಒಂದು ಸಾಮಾನ್ಯ ನಿಯಮ (Common role) ಹೇಳಲಾಗುವುದಿಲ್ಲ. ಪಾಶ್ಚಾತ್ಯರ ವರ್ಗೀಕರಣವಂತೂ ಇದರಿಂದ ತುಂಬಾ ದೂರ ಉಳಿಯುತ್ತವೆ. ದ್ವಿಭಾಷಿಕ ವಲಯದಲ್ಲಿ ಇಂತಹ ಮಾದರಿಯ ವಿಶೇಷವಾಗಿ ತೋರುತ್ತದೆ. ಮಾದರಿಗಾಗಿ ಮೇಲಿನ ವರ್ಗೀಕರಣದ ವಿವಿಧ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಭೌಗೋಳಿಕ, ಸಾಂಸ್ಕೃತಿಕ, ಭಾಷಿಕ ಪರಿಸರದಿಂದ ನಿರ್ಮಾಣಗೊಂಡ ಸ್ಥಳನಾಮಗಳನ್ನು ಈ ರೀತಿ ವರ್ಗೀಕರಿಸಲಾಗಿದೆ.

ಅಡಿಟಿಪ್ಪಣಿಗಳು

೧. ಎಂ.ವಿಶ್ವನಾಥಯ್ಯ, ಕಡೂರು ತಾಲೂಕಿನ ಸ್ಥಳನಾಮಗಳು, ಪು.

೨. ಅದೇ ಪು.೧೨೧-೧೨೮

೩. ಕೆಮ್ತೂರು ರಘಪತಿಭಟ್ಟ, ತುಳುನಾಡಿನ ಸ್ಥಳನಾಮಗಳು, ಪು.೧

೪. ವಿಶ್ವನಾಥ, ಸ್ಥಳನಾಮಗಳು, ಪು.೧೧-೧೨

೫. ಅದೇ ಪು.೧೫-೧೭

೬. ಹೊಸದುರ್ಗ. ತಾಲ್ಲೂಕು ಪರಿಸರದ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿ.ಎಚ್.ಡಿ. ಅಪ್ರಕಟಿತ ಮಹಾಪ್ರಬಂಧ

೭. ಅದೇ ಪು.೬೭-೬೮.

ಅಧ್ಯಾಯ ಮೂರು

ವಿಜಯಪುರ ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳು

ಅಧ್ಯಾಯ ಮೂರು

ವಿಜಯಪುರ ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳು

ವಿಜಯಪುರ ಜಿಲ್ಲೆಯು ಭಾರತೀಯ ಸಂಸ್ಕೃತಿಗೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದ ಕೀರ್ತಿ ಕರ್ನಾಟಕದ್ದು. ಅನೇಕ ಪುಣ್ಯ ಪುರುಷರಿಗೆ, ಮೇಧಾವಿಗಳಿಗೆ, ಕವಿಗಳಿಗೆ, ವಿದ್ವಾಂಸರಿಗೆ ಜನ್ಮ ನೀಡಿ ಹೆಸರಾದಂತೆ ಐತಿಹಾಸಿಕ, ಸಾಂಸ್ಕೃತಿಕ ಕಟ್ಟಡಗಳಿಗೆ ಅರಸು ಮನೆತನಗಳಿಗೆ ಮತ್ತು ಕಲೆ, ಸಾಹಿತ್ಯ, ವಾಸ್ತುಶಿಲ್ಪಗಳಿಗೆ ತನ್ನ ಮಡಿಲಲ್ಲಿ ಆಶ್ರಯ ನೀಡಿದೆ. ಇಂತಹ ಕರ್ನಾಟಕದಲ್ಲಿ ಪ್ರತಿಯೋರ್ವನ ಗಮನ ಸೆಳೆಯಬಲ್ಲ ವಿಜಯಪುರ ಜಿಲ್ಲೆಯ ಭೌಗೋಳಿಕ ಪ್ರದೇಶದ ಬಹುಭಾಗವು ೧೨ನೇ ಶತಮಾನದಲ್ಲಿ 'ತರ್ದವಾಡಿ ನಾಡು' ಎಂದು ಕರೆಸಿಕೊಂಡಿದೆ. ಈ ವಿಜಯಪುರ ಜಿಲ್ಲೆಯ ಇಂದಿನ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿಯೇ ಪ್ರಮುಖ ಜಿಲ್ಲೆಯಾಗಿದೆ. ಏಕೆಂದರೆ ರನ್ನ ನಾಗಚಂದ್ರರಂತಹ ಕವಿವರ್ಯರಿಗೆ ಧಾರ್ಮಿಕ ಜ್ಯೋತಿ ಎನಿಸಿಕೊಂಡಿರುವ ಭಕ್ತಿ ಭಂಡಾರಿ ಬಸವಣ್ಣನಂತವರಿಗೆ ಜನ್ಮ ನೀಡಿದ ಪುಣ್ಯ ನೆಲ.

ಪಂಚನದಿಗಳ ನಾಡು. ಬಿಳಿಜೋಳ, ಗೋಧಿ, ಕುಸುಬಿ, ಹತ್ತಿಗಳ ಪೆರ್ನಾಡು. ವಿಭಿನ್ನ ಸಂಸ್ಕೃತಿಗಳ ಬೀಡು ಎಂದೆಲ್ಲಾ ಖ್ಯಾತಿ ಪಡೆದಿರುವ ವಿಜಾಪುರ ಜಿಲ್ಲೆಯ ಅಮೀನಗಡದ ಕರದಂಟು, ಮಹಾಲಿಂಗಪುರದ ಬೆಲ್ಲ ಮತ್ತು ಜಮಖಾನೆ, ಇಳಕಲ್ಲಿನ ಸೀರೆ ಮತ್ತು ಪಿಂಕ್ ಗ್ರಾನೈಟ್, ಗುಳೇದಗುಡ್ಡದ ಖಣ, ಕಮತಗಿಯ ರೇಷ್ಮೆ ಪಟಗಾ, ಕೆರೂರಿನ ಕೌದಿ, ಕುಂದರಗಿಯ ಉಣ್ಣೆ ಕಂಬಳಿ ಮುಂತಾದವುಗಳಿಂದಲೂ ಪ್ರಸಿದ್ಧವಾಗಿದೆ.

ಇಂದು ಜಿಲ್ಲಾ ಕೇಂದ್ರವಾಗಿರುವ ವಿಜಾಪುರವು ಚಾರಿತ್ರಿಕವಾಗಿ ಬಾದಾಮಿ ಚಾಳುಕ್ಯರಷ್ಟು ಪ್ರಾಚೀನವಾಗಿದ್ದು, ಕ್ರಿ.ಶ.೧೧-೧೨ನೆಯ ಶತಮಾನದ ಶಾಸನಗಳಲ್ಲಿ ವಿಜಯಾಪುರ ರಾಜಧಾನಿ ವಿಜಯಪುರ, ರಾಯರಾಜಧಾನಿ, ವಿಜಯಾಪುರ ಎಂದೆಲ್ಲಾ ಉಲ್ಲೇಖಿತಗೊಂಡಿದ್ದು, ಕಲ್ಯಾಣದ ಚಾಳುಕ್ಯ ಹಾಗೂ ಸೇವುಣರ ಕಾಲದಲ್ಲಿ ಪ್ರಾದೇಶಿಕ ರಾಜಧಾನಿಯಾಗಿತ್ತು. ಆದಿಲ್‌ಷಾಹಿ ಸಾಮ್ರಾಜ್ಯದ ರಾಜಧಾನಿಯಾಗಿ, ದಖನ್ನಿನ ರಾಣಿ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದ್ದ ಇದಕ್ಕೆ ಆಗ ವಿದ್ಯಾಪುರ, ಬಿದ್ಯಾಪುರ, ಮುಹಮ್ಮದೀಪುರ ಎಂಬ ಹೆಸರುಗಳಿದ್ದು, ಪರ್ಷಿಯನ್ ಗ್ರಂಥಗಳಲ್ಲಿ

'ದರೂಲ್-ಜಾಫರ್' ಎಂದು ಕರೆಯಲಾಗಿದೆ. ಹೀಗೆ ವಿಜಾಪುರದ ಹೆಸರನ್ನು ಬದಲಿಸುವ ಯತ್ನಗಳು ನಡೆದವಾದರೂ ಅಂತಿಮವಾಗಿ ಪ್ರಾಚೀನ ಹೆಸರಾದ ವಿಜಾಪುರವೇ ಇಂದಿಗೂ ಉಳಿದುಬಂದಿದೆ.

ವಿಜಯಪುರದ ಹೆಸರಿನ ಮೂಲ

ವಿಜಾಪುರದ ಇತಿಹಾಸವು ಒಂದು ಪ್ರಾಚೀನವಾದುದು. ಜಿಲ್ಲೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳು ರಾಮಾಯಣ ಕಾಲದ ದಂಡಕಾರಣ್ಯದ ಒಂದು ಭಾಗವಾಗಿತ್ತೆಂದೂ ಹೇಳುತ್ತಾರೆ. ಆದರೆ ಈ ಭಾಗದ ಐತಿಹಾಸಿಕ ದಾಖಲೆಗಳು ಎರಡನೆಯ ಶತಮಾನದ ಈಜಿಪ್ಟಿನ ಖ್ಯಾತ ಭೂಗೋಳಶಾಸ್ತ್ರಜ್ಞ ಟಾಲೆಮಿಯ ಉಲ್ಲೇಖನಗಳಲ್ಲಿ ದೊರೆಯುತ್ತವೆ. ಜಿಲ್ಲೆಯ ಸಿಂದಗಿ ತಾಲೂಕಿನ ದೇವೂರಿನಲ್ಲಿ ದೊರೆತಿರುವ ಎರಡನೇ ಜಯಸಿಂಹನ ೧೦೨೯ ರ ಶಾಸನದಲ್ಲಿ (ಎಸ್.ಪಿ.ಪಿ. ಸಂಪುಟ-೩೦, ಸಂ.೨೩) ವಿಜಾಪುರವನ್ನು ವಿಜಯಾಪುರವೆಂದು ಉಲ್ಲೇಖಿಸಲಾಗಿದೆ. ಇದರ ತರುವಾಯ ವಿವಿಧ ಶಾಸನಗಳಲ್ಲಿ ರಾಜಧಾನಿ ವಿಜಯಾಪುರ ಎಂಬ ಉಲ್ಲೇಖವು ಕಂಡುಬರುತ್ತದೆ. ಒಂದು ಹೇಳಿಕೆಯಂತೆ ಬಾದಾಮಿ ಚಾಲುಕ್ಯರ ಮಾಂಡಲೀಕನೊಬ್ಬ ವಿಜಾಪುರ ಪಟ್ಟಣವನ್ನು ಕಟ್ಟಿಸಿದನೆಂದು ಹಾಗೂ ಇನ್ನೊಂದು ಹೇಳಿಕೆಯಂತೆ ವಿಜ್ಜನಹಳ್ಳಿಯ ಮಾಂಡಲೀಕನೊಬ್ಬ ವಿಜಾಪುರ ಪಟ್ಟಣವನ್ನು ಕಟ್ಟಿಸಿದನೆಂದು ಹಾಗೂ ಇನ್ನೊಂದು ಹೇಳಿಕೆಯಂತೆ ವಿಜ್ಜನಹಳ್ಳಿಯ ಮಾಂಡಲೀಕನೊಬ್ಬನ ರಾಜಧಾನಿಯಾದಾಗ ವಿಜ್ಜಪುರವಾಗಿ ಅದೇ ವಿದ್ಯಾಪುರವಾಗಿರಬಹುದು. ಗಜಕನಹಳ್ಳಿ, ಬಿಜಕನಹಳ್ಳಿ, ಚಂದನಕೇರಿ, ಕ್ಯಾದಗಿ, ಕಾತರಕೇರಿ, ಕುರುಬನಹಟ್ಟಿ ಮತ್ತು ಕುಜನಕುಟ್ಟ ಎಂಬ ಏಳು ಹಳ್ಳಿಗಳು ಸೇರಿ ವಿಜ್ಜನಹಳ್ಳಿಯಾಯಿತೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಅದೇ ಬಿಜ್ಜನಹಳ್ಳಿ ಸಂಸ್ಕೃತೀಕರಣಗೊಂಡು ವಿದ್ಯಾಪುರವಾಗಿ ವಿಜಯಪುರವಾಯಿತೆಂದು ಮುಂದೆ ವಿಜಾಪುರ ಅಥವಾ ವಿಜಯಪುರ ಎಂದು ರೂಢಿಯಾಗಿರಬೇಕು. ಶಾಸನಗಳಲ್ಲಿ ವಿಜಯಪುರ ಹಾಗೂ ಬಿಜ್ಜನಹಳ್ಳಿ ಪ್ರತ್ಯೇಕವಾಗಿ ಬರುವುದರಿಂದ ಇವೆರಡೂ ಊರುಗಳು ಬೇರೆಯಾಗಿ ಇರುವ ಸಾಧ್ಯತೆಯೂ ಇದೆ. ವಿಜಾಪುರ ಎಂಬ ಹೆಸರು ಪ್ರಾಚೀನವಾದುದರಿಂದ ವಿಜಯಪುರ ಮತ್ತು ಬಿಜ್ಜನಹಳ್ಳಿ ಎರಡೂ ಒಂದೇ ಎಂಬ ವಾದವು ಮೇಲೆ ಉಲ್ಲೇಖಿಸಿದ ಶಾಸನದ ಹಿನ್ನೆಲೆಯಲ್ಲಿ ದುರ್ಬಲಗೊಳ್ಳುತ್ತದೆ.

ಆದಿಲ್‌ಷಾಹಿ ಅರಸರ ಆಳ್ವಿಕೆಯ ಕಾಲದಲ್ಲಿ ಎರಡನೆಯ ಇಬ್ರಾಹಿಂ ರಾಜನು ವಿಜಾಪುರದ ಹೆಸರನ್ನು ಬದ್ಯಾಪುರವೆಂದು ಹಾಗೂ ಸುಲ್ತಾನ್ ಮಹಮ್ಮದನು ಮಹಮ್ಮದ್‌ಪುರವೆಂದು ಬದಲಾಯಿಸಿದನು. ಇಬ್ರಾಹಿಂ ರೋಜಾದ ಬಾಗಿಲಿನಲ್ಲಿ ಕೆತ್ತಲಾಗಿರುವ ಪರ್ಷಿಯನ್ ಶಾಸನವು ವಿಜಾಪುರವನ್ನು ವಿದ್ಯಾಪುರ (ಅಧ್ಯಯನ ಕೇಂದ್ರ) ವೆಂದು ಉಲ್ಲೇಖಿಸುತ್ತದೆ.

ಪರ್ಷಿಯನ್ ಭಾಷೆಯಲ್ಲಿರುವ ಪ್ರಾಚೀನ ಭೂಪಟದಲ್ಲಿ ವಿಜಾಪುರವನ್ನು ದರ್‌ಉಲ್ ಜಫರ್ ಎಂಬ ಹೆಸರು ಹೆಚ್ಚು ಪ್ರಚಲಿತದಲ್ಲಿದೆ. ಬಹುಶಃ ಆಂಗ್ಲರ ಪ್ರಭಾವದಿಂದ ವಿಜಾಪುರವು, ವಿಜಯಪುರವೆಂದು ರೂಢಿಗೆ ಬಂದಿರಬೇಕು. ಬಹುವಾಗಿ ರಾಜ್ಯವು ಸ್ಥಾಪನೆಯಾದಾಗ ವಿಜಾಪುರವು ಗುಲಬರ್ಗಾ ಪ್ರಾಂತ್ಯಕ್ಕೆ ಸೇರಿತ್ತು. ಆದಿಲ್‌ಷಾಹಿ ರಾಜ್ಯ ಸ್ಥಾಪನೆಯಾದಾಗ ವಿಜಾಪುರವು ಅದರ ರಾಜಧಾನಿಯಾಯಿತು.

ವಿಜಯಪುರದ ಪೌರಾಣಿಕ ಹಿನ್ನೆಲೆ

ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ಜಿಲ್ಲೆಯ ಪೌರಾಣಿಕ ಹಿನ್ನೆಲೆಯೂ ಅಷ್ಟೇ ಸಮೃದ್ಧವಾಗಿದ್ದು, ಜಿಲ್ಲೆಯ ಅನೇಕ ಸ್ಥಳಗಳು ರಾಮಾಯಣ, ಮಹಾಭಾರತಗಳೊಂದಿಗೆ ಸಂಬಂಧ ಕಲ್ಪಿಸುವ ಐತಿಹ್ಯಗಳನ್ನು ಹೊಂದಿವೆ. ಜಿಲ್ಲೆಯ ನಡುವೆ ಹರಿಯುವ ಕೃಷ್ಣಾನದಿ, ಈಶಾನ್ಯ ಗಡಿಯಾಗಿರುವ ಕೃಷ್ಣೆಯ ಉಪನದಿಯಾದ ಭೀಮಾ ಮತ್ತು ಜಿಲ್ಲೆಯ ದಕ್ಷಿಣ ಗಡಿಯಾಗಿ ಸ್ವಲ್ಪ ದೂರ ಹರಿದು ಮುಂದೆ ಉತ್ತರಾಭಿಮುಖವಾಗಿ ಪ್ರವಹಿಸಿ ಕೃಷ್ಣಾ ನದಿಯೊಂದಿಗೆ ಸಂಗಮಿಸುವ ಮಲಪ್ರಭಾ ನದಿಗಳು ಪೌರಾಣಿಕ ಮಹತ್ವವನ್ನು ಹೊಂದಿವೆ. ಸ್ಕಂದ, ವಾಯು, ಪದ್ಮ ಹಾಗೂ ಬ್ರಹ್ಮ ಪುರಾಣಗಳಲ್ಲಿ ಮಹಾಭಾರತದ ಸಭಾಪರ್ವ ಹಾಗೂ ಭೀಷ್ಮ ಪರ್ವಗಳಲ್ಲಿ ಮಂಗಳಾಷ್ಟಕ ಹಾಗೂ ಜಾತಕ ಕಥೆಗಳೂ ಉಲ್ಲೇಖಿತಗೊಂಡಿರುವ ಕೃಷ್ಣ ನದಿಯು 'ಸ್ವರ್ಗದಿಂದ ಇಳಿದು ಬಂದ ದಕ್ಷಿಣ ಗಂಗೆ' ಎಂದೇ ಪ್ರಸಿದ್ಧವಾಗಿದೆ. ಈ ನದಿ ತೀರದಲ್ಲಿ ಬಬಲಾದಿ ಜೈನಾಪುರ, ಬೆಮ್ಮಲಗಿ, ಮುತ್ತೂರು, ಶೊರ್ಪಾಲಿ ಮುಂತಾದ ಪುಣ್ಯಕ್ಷೇತ್ರಗಳಿವೆ. ಮತ್ಸ್ಯ, ಬ್ರಹ್ಮ, ವಾಯು ಪುರಾಣಗಳಲ್ಲಷ್ಟೇ ಅಲ್ಲದೇ ಮಹಾಭಾರತದಲ್ಲೂ ಉಲ್ಲೇಖಿತಗೊಂಡಿರುವ ಭೀಮಾ ನದಿಯ ಪೌರಾಣಿಕ ಮಹತ್ವ ಪಡೆದಿದ್ದು, ಅಯೋಧ್ಯೆಯ ರಾಜ ಭೀಮಕನ ಅಪೇಕ್ಷೆಯಂತೆ ಶಿವನ ಹಣೆ ಬೆವರೇ ಭೀಮಾರಥಿ ನದಿಯಾಗಿ ಪ್ರವಹಿಸಿತ್ತೆಂಬ ಐತಿಹ್ಯವಿದೆ. ಈ ನದಿಯ ಮಹಿಮೆಯನ್ನು ಸಾರುವ 'ಭೀಮೆ ಮಹಾತ್ಮೆ'ಯ ಇಂಡಿಯನ್ನು 'ಪಯಕ್ಷೇತ್ರ'ವೆಂದು ಕರೆದಿದೆ. ಭೀಮಾ ನದಿಯ ಬಲದಂಡೆಯ ಮೇಲಿರುವ ಧೂಲಬೇಡವನೇ ದಕ್ಷ ಬ್ರಹ್ಮನು ಯಜ್ಞ ಮಾಡಿದ ಪವಿತ್ರ ಸ್ಥಳ, ಪಾರ್ವತಿಯ ತಪೋಭೂಮಿ ಎಂದೂ ನಂಬಲಾಗಿದ್ದು, ಗ್ರಾಮದ ಸಮೀಪದಲ್ಲಿ ಸುಮಾರು ೧೩ ಎಕರೆಗಳಷ್ಟು ವಿಶಾಲವಾದ ಪ್ರದೇಶದಲ್ಲಿರುವ ಬೂದಿ ದಿಬ್ಬವನ್ನು ಯಜ್ಞ ಸ್ಥಳವೆಂದು ಸ್ಥಳೀಯರು ತೋರಿಸುತ್ತಾರೆ. ಈ ಬೂದಿ ದಿಬ್ಬದ ಅವಶೇಷವು ನೂತನ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿರುವುದು ಗಮನಾರ್ಹವಾಗಿದೆ. ಆಚೆ ದಡದಲ್ಲಿರುವ ಎಡೂರು ಕೂಡ ದಕ್ಷ ಬ್ರಹ್ಮನು ಯಜ್ಞ ಮಾಡಿದ ಸ್ಥಳವೆಂಬ ಐತಿಹ್ಯವನ್ನು ಹೊಂದಿದೆ.

ಮಲಪ್ರಭಾ ನದಿಯು 'ಮಲಪಹಾರಿ' ಎಂದು ಪರಿಚಿತವಿದ್ದು ಮಾನವನ ಪಾಪ ಪರಿಹಾರ ಮಾಡುವ ಪವಿತ್ರ ನದಿ ಎಂಬ ನಂಬಿಕೆ ಜನರಲ್ಲಿದೆ.

ಸಿಂದಗಿ ತಾಲೂಕಿನ ಹಿಪ್ಪರಗಿಯಲ್ಲಿರುವ ಕಲ್ಲೇಶ್ವರ ದೇವಾಲಯವನ್ನು ಪರಶುರಾಮನ ತಂದೆಯಾದ ಜಮದಗ್ನಿಯು ನಿರ್ಮಿಸಿದನೆಂದು ಹೇಳಿಕೆ ಇದೆ.

೩.೧ ಸ್ಥಳನಾಮಗಳ ವರ್ಗೀಕರಣ

ಸ್ಥಳನಾಮಗಳಲ್ಲಿ ಕಾಣಬರುವ ನಿರ್ದಿಷ್ಟ ಘಟಕಗಳನ್ನು ಒಂದೆಡೆ ಕಲೆ ಹಾಕುವುದು ಕಷ್ಟ. ಸ್ಥಳಗಳಿಗೆ ಹೆಸರಿಡುವ ಪ್ರಕ್ರಿಯೆಯ ಇತಿಹಾಸಗಳನ್ನು ಗಮನಿಸಿದಾಗ ಸಾಮಾನ್ಯವಾಗಿ ಪ್ರಕೃತಿವಾಚಿ ಮೊದಲು ಅನಂತರ ಜನಾಂಗವಾಚಿ ಅನಂತರ ವ್ಯಕ್ತಿವಾಚಿಗಳು ಬರುತ್ತವೆ.

ಎಷ್ಟು ಮಾನವ ನೆಲೆಗಳಿವೆಯೋ ಅಷ್ಟು ಊರುಗಳಿರುತ್ತವೆ. ಎಷ್ಟು ಊರುಗಳಿರುತ್ತವೆಯೋ ಅಷ್ಟೇ ಹೆಸರುಗಳು ಅನೇಕ ಕಾರಣಗಳಿಂದ ಪುನರಾವರ್ತಿತವಾಗಿರುತ್ತವೆ. ಪುನರಾವರ್ತಿತ ಹೆಸರುಗಳಿಗೆ ಕಾರಣವೆಂದರೆ ಪ್ರತಿರೂಪ ಮತ್ತು ವಿಕಾಸದ ಹಂತದಲ್ಲಿ ಮಾನವ ಮನೋಧರ್ಮದ ಏಕಸೂತ್ರತೆ ಪ್ರದರ್ಶಿತವಾಗಿರುತ್ತದೆ. ಸೀಮಿತ ಪ್ರದೇಶದ ಎಲ್ಲಾ ಸ್ಥಳನಾಮಗಳನ್ನು ಅಧ್ಯಯನ ಮಾಡಿದ ಸ್ಥಳನಾಮಗಳನ್ನು ವರ್ಗೀಕರಿಸುವ ಪ್ರಯತ್ನ ಮಾಡಿದ್ದಾರೆ. ವರ್ಗೀಕರಿಸಿದ್ದಾರೆ. ಇಂತಹ ಸ್ಥಳನಾಮ ಅಧ್ಯಯನದ ಒಂದು ಭಾಗವೇ ಆಗಿರುತ್ತದೆ. ಸ್ಥಳನಾಮಗಳ ವರ್ಗೀಕರಣಗಳ ಸ್ಥೂಲ ಚಿತ್ರಣವನ್ನು ದಾಖಲುಗೊಳಿಸುವುದೇ ಈ ಅಧ್ಯಾಯದ ಉದ್ದೇಶ.

"ಆಂಗ್ಲ ಸ್ಥಳನಾಮಗಳ ನಿಘಂಟುವನ್ನು ಸಿದ್ಧಪಡಿಸುವ ಮೂಲಕ ಲೋಕವಿಖ್ಯಾತನಾದ ಇ.ಎಕ್ವಾಲ್ ಅವರು ಮಾನವ ನೆಲೆಗಳನ್ನು ಪ್ರಧಾನವಾಗಿ ಮೂರು ವರ್ಗಗಳಲ್ಲಿ ಗುರುತಿಸುತ್ತಾರೆ.[೧]

"ಗ್ರಾಮಗಳಿಗೆ ಮೊದಲು ಪ್ರಕೃತಿನಾಮ (ನವಿಲಗುಂದ) ಆಮೇಲೆ ಜನಾಂಗನಾಮ ಗೊಲ್ಲಗೇರಿ ತದನಂತರ ವ್ಯಕ್ತಿನಾಮ (ಬುಕ್ಕಸಾಗರ) ಗಳನ್ನಿಡುತ್ತಾ ಬರಲಾಗಿದೆಯೆಂದು ತಿಳಿದು ಬಂದಿರುವುದರಿಂದ ಜನಾಂಗ ನಾಮವಿಡುತ್ತಲಿದ್ದ ಕಾಲಘಟ್ಟದಲ್ಲಿ ಹುಟ್ಟಿದ 'ಧಾರವಾಡ' ತಕ್ಕಮಟ್ಟಿಗೆ ಹಳೆಯದೆಂದೇ ಹೇಳಬೇಕು.[೨] ಆದರೆ ವಾರ್ಗಿಕ ಆಕೃತಿಮಾಗಳ ಸಂಖ್ಯೆ ಸೀಮಿತವಾಗಿರುವುದರಿಂದ ಅವುಗಳನ್ನು ಒಂದೆಡೆ ಸಂಗ್ರಹಿಸುವುದು ಸುಲಭಸಾಧ್ಯ. ಸ್ಥಳನಾಮಗಳ ಘಟಕಗಳನ್ನು ಪ್ರತ್ಯೇಕಿಸಿ ಅವುಗಳ ಸ್ವರೂಪವನ್ನು ಖಚಿತಪಡಿಸಿ ಅರ್ಥಗ್ರಹಿಕೆಯೊಡನೆ ಆ ಸ್ಥಳನಾಮ ಬರಲು ಆಧಾರಗಳೊಡನೆ ಒಂದು ನಿರ್ಧಾರಕ್ಕೆ ಬರುವುದಾದರೆ ಅಲ್ಲಿ ನಿಷ್ಪತ್ತಿಯಂತಹ ಪ್ರಮುಖ ಘಟ್ಟವನ್ನು ತಲುಪಿದಂತಾಗುತ್ತದೆ.

ವಿಜಯಪುರ ಜಿಲ್ಲೆಯ ಐದು ತಾಲ್ಲೂಕುಗಳ ಶಾಸನೋಕ್ತ ಸ್ಥಳನಾಮಗಳ ವಾರ್ಗಿಕಗಳನ್ನು ಪರಿಶೀಲನೆಗೆ ಒಳಪಡಿಸಿ ಕೆಳಗಿನಂತೆ ವರ್ಗೀಕರಿಸಿ ವಿಶ್ಲೇಷಿಸಲಾಗಿದೆ.

ಪ್ರಾಕೃತಿಕ ಸ್ಥಳನಾಮಗಳು | ಸಾಂಸ್ಕೃತಿಕ ಸ್ಥಳನಾಮಗಳು | ಸಂಕೀರ್ಣ ಸ್ಥಳನಾಮಗಳು

ಜಲವಾಚಿ ↓ ಸಸ್ಯ, ಗಿಡ, ಮರ ಇತ್ಯಾದಿ ↓ ಶಿಲಾವಾಚಿ ↓ ಲೋಹ, ಖನಿಜ ↓ ದಿಕ್ಕು, ದೆಸೆ ↓ ಪರಿಮಾಣವಾಚಕ

ಪ್ರಾಣಿವಾಚಿ ↓ ವ್ಯಕ್ತಿವಾಚಿ ↓ ಆಹಾರ ↓ ದೈವವಾಚಿ ↓ ವ್ಯಾಪಾರ ↓ ಕೋಟೆ/ ಸೈನಿಕ ಕೇಂದ್ರ ↓ ವೃತ್ತಿ, ಜಾತಿ

೩.೧.೧. ಪ್ರಾಕೃತಿಕ ಸ್ಥಳನಾಮಗಳು

೧. ಜಲವಾಚಿ ಸ್ಥಳನಾಮಗಳು:

"ಮಾನವನ ಸಂಸ್ಕೃತಿಯ ವಿಕಾಸ ಹಂತದಲ್ಲಿ ಜಲಕ್ಕೆ ಅತಿಮುಖ್ಯ ಸ್ಥಾನವಿದೆ. ಬಹುತೇಕ ಜಗತ್ತಿನ ನಾಗರೀಕತೆಗಳೆಲ್ಲವೂ ನದಿಯ ದಂಡೆಯ ಮೇಲೆ ಜೀವನವನ್ನು ಆರಂಭಿಸಿದವೆಂದು ತಿಳಿಯುತ್ತದೆ. ಸದಾ ಸಂಚಾರಿಯಾಗಿದ್ದ ಮಾನವನು ಒಂದೆಡೆ ತನ್ನ ಅಸ್ತಿತ್ವವನ್ನು ಕಂಡುಕೊಂಡನು. ಆಗ 'ಜಲ' ಮುಖ್ಯವಾಗಿ ಬೇಕಿತ್ತು. ಈ ಕಾರಣಗಳಿಂದ ಕಾಡನ್ನು ತೊರೆದು ನೀರಿನ ಸಮೀಪ ತಮ್ಮ ನೆಲೆಗಳನ್ನು ಕಟ್ಟಿಕೊಂಡರೂ ಅಥವಾ ಸಹಜವಾಗಿ ಹರಿಯುವ ನೀರಿಗೆ ಕೆರೆ, ಕೊಳ, ಕುಂಟೆಗಳಂತಹ ಕೃತಕ ಜಲಸಂಗ್ರಾಹಕಗಳನ್ನು ನಿರ್ಮಿಸಿಕೊಂಡರು.[೩] ಇಂದಿಗೂ ಗ್ರಾಮಗಳ ನಿರ್ಮಾಣ ನೀರನ್ನು ಅವಲಂಬಿಸಿ ರಚನೆಯಾಗುತ್ತದೆ. ಹೀಗೆ ಜಲಮೂಲ ಸಂಸ್ಕೃತಿಯಿಂದ ಆರಂಭವಾದ ಸಂಸ್ಕೃತಿಯಲ್ಲಿ ಆ ಜಲವನ್ನು ಅವಲಂಬಿಸಿಯೇ ಕೆಲವು ಗ್ರಾಮಗಳಿಗೆ ಹೆಸರು ಕರೆಯುಕೊಳ್ಳುವ ರೂಢಿ ಆರಂಭವಾಗಿರಬೇಕು. ಅಂತಹ ಭೂಸ್ಥಿತಿಯನ್ನು ಹೇಳುವ ಸ್ಥಳನಾಮಗಳು ದೊರೆಯುತ್ತವೆ.

ಸ್ಥಳನಾಮಗಳು

ನಿಡೋಣಿ, ಮಧಭಾವಿ, ಝುಳಕಿ, ಹಡ್ಗಿನಾಳ್, ನದಿಹಾಳ್, ಯರನಾಳ್, ರಬ್ಬಿನಹಾಳೂ, ವಂದಾಳ, ಹೆಬ್ಬಾಳ, ಲೋಟಗೇರಿ, ಆಹೇರಿ, ಕಲಕೇರಿ, ಗೋಲಗೇರಿ.

ಕೆರೆ, ಕೊಳ ಎಂಬ ಜಲವಾಚಿ ವಾರ್ಗಿಕಗಳು ಈ ಭಾಗದಲ್ಲಿ ಬಳಕೆಯಾಗಿಲ್ಲವಾದರೂ ಜಲವಾಚಕಕ್ಕೆ ಸಂಬಂಧಿಸಿದಂತೆ ಸ್ಥಳನಾಮಗಳನ್ನು ಗುರುತಿಸಲಾಗಿದೆ. ವಿಜಾಪುರ ಜಿಲ್ಲೆಯ ಪರಿಸರದಲ್ಲಿ ನದಿ, ಡೋಣಿ, ಹಾಳ ಎಂಬಂತಹ ಜಲಮೂಲ ಉತ್ತರ ಪದಗಳಾಗಿ ಸ್ಥಳನಾಮಗಳಲ್ಲಿ ಬಳಕೆಯಾಗಿರುವುದು ವಿಶೇಷವಾಗಿ ತೋರುತ್ತದೆ.

ಕೆರೆ-ಕಟ್ಟೆಯಂತಹ ಜಲ ಸಂಗ್ರಾಹಕಗಳಿಗೆ ತಮ್ಮ ಕಲ್ಪನೆಯಲ್ಲಿ ಸಮುದ್ರ, ಸಾಗರ ಎಂದು ಕರೆದುಕೊಂಡಿರಬೇಕು. ಜಲವಾಚಿ ಸ್ಥಳನಾಮಗಳಲ್ಲಿ ಬಳಕೆಯಾಗುವ ಕೆರೆ>ಗೆರೆ, ಒಂದೇ ಎಂದು ಭಾವಿಸಲಾಗುತ್ತದೆ. 'ಅಚ್ಚ ದ್ರಾವಿಡ ವಾರ್ಗಿಕವಿದು. ದ್ರಾವಿಡ ಭಾಷೆಗಳಲ್ಲೆಲ್ಲಾ ಬಳಕೆಯಲ್ಲಿದ್ದು ಅದರ ಜ್ಞಾತಿ ಶಬ್ದಗಳು ಈ ಕೆಳಗಿನಂತಿವೆ.[೪]

ತಮಿಳು, ಮಲೆಯಾಳಂ:	ಚೇರಿ
ಕನ್ನಡ:	ಕೆರಿ, ಗೆರಿ
ತೆಲಗು:	ಗೆರಿ
ತುಳು:	ಕೆರಿ

ಈ ವಾರ್ಗಿಕವು ಊರು, ಊರಿನ ಭಾಗ ಎಂಬ ಅರ್ಥವನ್ನು ಕೊಡುತ್ತದೆ. "ಗೆರೆಯು ಜಲಾಶಯವನ್ನು ಸೂಚಿಸುವ ಮುಕ್ತ ಆಕೃತಿಮಾ (Free morpheme) ಕೆರೆಯಿಂದ ಬಂದಿರಬೇಕೆಂದು ಡಾ.ಆರ್.ಸಿ.ಹಿರೇಮಠ್ ಹೇಳುತ್ತಾರೆ.[೫] ಜಲವನ್ನು ಸೂಚಿಸುವ ಪದಗಳು ಹೆಚ್ಚಾಗಿ ಸ್ಥಳನಾಮಗಳ ಉತ್ತರ ಭಾಗದಲ್ಲಿ ಕಂಡುಬಂದಿದೆ. ಪೂರ್ವಪದವಾಗಿ ವಿರಳವಾಗಿ ತೋರುತ್ತವೆ.

೨. ಶಿಲಾವಾಚಿ ಸ್ಥಳನಾಮಗಳು

ಸ್ಥಳನಾಮ ನಿರ್ದೇಶನದಲ್ಲಿ ಹೆಚ್ಚಾಗಿ ಪ್ರಕೃತಿಯನ್ನೇ ಅವಲಂಬಿಸಿದ ಪ್ರಾಚೀನರು ಕಲ್ಲನ್ನು ಅತಿಯಾಗಿ ಗಮನದಲ್ಲಿಟ್ಟುಕೊಂಡಿದ್ದಾರೆ ಎಂಬುದು ಸ್ಥಳನಾಮಗಳ ಅವಲೋಕನದಿಂದ ತಿಳಿಯುತ್ತದೆ. ಅರೆ, ಕಲ್ಲು, ಕೋರೆ, ಬಂಡೆಗಳು ವಾರ್ಗಿಕಗಳಾಗಿ ಕೂಡ ಶಿಲಾವಾಚಿ ಸ್ಥಳನಾಮಗಳು ರೂಪಿತವಾಗಿವೆ ಎಂಬುದನ್ನು ಗುರುತಿಸಬಹುದು. ಕಲ್ಲನ್ನು ಪ್ರೀತಿಸುವ ಪೂಜಿಸುವ ನಮ್ಮ ಪ್ರಾಚೀನ ಜನರು ಕಲ್ಲು, ಶಿಲೆಗಳಿಗೆ ಮಹತ್ವವಾದ ಸ್ಥಾನವನ್ನು ಕೊಟ್ಟಿದ್ದಾರೆ.

ಕುಂದ-ಗುಂದ-ಗೊಂದಿ ಇದು ದ್ರಾವಿಡ ಮೂಲದಿಂದ ಬಂದ ವಾರ್ಗಿಕ ಇತರೆ ದ್ರಾವಿಡ ಭಾಷೆಗಳಲ್ಲಿ ಸಂವಾದಿ ರೂಪಗಳು ಕೆಳಕಂಡಂತಿದೆ.

ತಮಿಳು: ಕುನಮ್

ಕನ್ನಡ: ಕೊಂಡ್ಡ

ತೆಲುಗು: ಕೊಂಡ್ಡ

ಮಲೆಯಾಳಂ: ಕುನ್ಸಮ್

ತುಳು: ಗುಡ್ಡ

ಈ ಎಲ್ಲ ಜ್ಞಾತಿಭಾಷೆಗಳಲ್ಲಿ ಇದು ಎತ್ತರದ ಸ್ಥಳ, ಗುಡ್ಡ, ಬೆಟ್ಟ ಮುಂತಾದ ಅರ್ಥಗಳನ್ನು ಕೊಡುತ್ತದೆ.[೬] ಬೆಟ್ಟಗಳು ಗುಡ್ಡಗಳ ಸಮೀಪ ಬೆಳೆದ ಊರುಗಳನ್ನು ಸೂಚಿಸಲು ಈ ವಾರ್ಗಿಕ ಬಳಕೆಯಾಗಿದೆ.

ಸ್ಥಳನಾಮಗಳು

ನಾದ (ಕುರ್ದ್‌)

ಬೆಟ್ಟ, ಕಲ್ಲು, ಗುಡ್ಡ, ಗುಂಡ ಎಂಬ ಶಿಲಾವಾಚಿ ಪದಗಳಿಂದ ಸ್ಥಳನಾಮಗಳು ಈ ಪರಿಸರಕ್ಕೆ ಕಾರಣವಾಗಿದೆಯೆಂದು ಮೇಲ್ನೋಟಕ್ಕೆ ತಿಳಿಯುತ್ತದೆ. ಶಿಲಾವಾಚಿ ಸ್ಥಳನಾಮಗಳು ಹೆಚ್ಚಾಗಿ ಉತ್ತರ ಪದದಲ್ಲಿ ಸೂಚಿತವಾಗಿದೆ. ಅತೀ ವಿರಳವಾಗಿ ಅಲ್ಲೊಂದು ಇಲ್ಲೊಂದರಂತೆ ಪೂರ್ವಪದದಲ್ಲಿಯೂ ಇರುವುದು ಕಂಡುಬರುತ್ತದೆ. ಕಲ್>ಗಲ್, ಕೋಡು>ಗೊಂಡು ಎಂಬ ಈ ವಾರ್ಗಿಕದಿಂದ ಕೊನೆಗೊಳ್ಳುವ ಸ್ಥಳಗಳು ಬಹು ಪ್ರಾಚೀನವಾದವು. ಶಿಲಾಯುಗದ ಮಾನವನ ನಿವಾಸ ಸ್ಥಳವನ್ನು ನಿರ್ದೇಶಿಸುತ್ತವೆ. ನಿಸರ್ಗವಾಚಿ ವಾರ್ಗಿಕವಾದ ಇದು ಕಲ್ಲು-ಬಂಡೆಗಳಿರುವ ಪ್ರದೇಶ ಎಂಬ ಅರ್ಥವನ್ನು ಕೊಡುತ್ತದೆ.

೩. ಸಸ್ಯವಾಚಕ ಸ್ಥಳನಾಮಗಳು

ಮಾನವನಿಗೂ ಪ್ರಕೃತಿಗೂ ಅವಿನಾಭಾವ ಸಂಬಂಧವಿದೆ. ಇಂತಹ ಸಂಬಂಧದಿಂದ ಅವನ ಜೀವನವು ಸುಖಮಯವಾಗಿ ನಡೆಯಲು ಸಾಧ್ಯವಾಗಿದೆ. ಶುದ್ಧಗಾಳಿ, ನೆರಳು, ಸಸ್ಯವಾಚಕಗಳಿಂದ ದೊರೆಯುತ್ತದೆ. ಇಷ್ಟೇ ಅಲ್ಲದೆ ಒಂದೊಂದು ಜನಾಂಗ, ಪಂಗಡ ಹಾಗೂ ರಾಜಮನೆತನಗಳ ಮೂಲ ಪುರುಷ ಒಂದೊಂದು ಮರದಲ್ಲಿ ಹುಟ್ಟಿ ಬಂದನೆಂಬ ಭಾವನೆಯು ಇತಿಹಾಸ ಕಾಲದಲ್ಲಿ ಇದ್ದುದರಿಂದ ಆಯಾ ಜನಾಂಗಗಳು ತಮಗೆ ಸಂಬಂಧಿಸಿದ ವೃಕ್ಷಗಳು

ಗಿಡಗಳನ್ನು ಆರಾಧನೆ ಮಾಡತೊಡಗಿದವು. ಹಾಗೆಯೇ ಆ ಪರಿಸರದಲ್ಲಿ ಸಾಮಾನ್ಯವಾಗಿ ಬೆಳೆಯುತ್ತಿದ್ದ ಮರ, ಗಿಡ, ದವಸ, ಧಾನ್ಯ ಮುಂತಾದವುಗಳ ಹೆಸರುಗಳನ್ನು ಹೆಸರಿಸಿರುವ ಸಾಧ್ಯತೆಗಳಿವೆ.

ಸ್ಥಳನಾಮಗಳು

ತೆನಿಹಳ್ಳಿ, ಹಿರೇಬೇವಿನೂರು, ಕಡ್ಲವಾಡ, ಇಂಗಳಗೇರಿ, ಬಿದರಕುಂದಿ.

೩.೧.೨ ಸಾಂಸ್ಕೃತಿಕ ಸ್ಥಳನಾಮಗಳು

ನಿಸರ್ಗದ ಅವಲಂಬಿಯಾಗಿದ್ದ ಮಾನವನು ಪ್ರಾರಂಭದಲ್ಲಿ ಅಲೆಮಾರಿಯಾಗಿ ಜೀವನ ಸಾಗಿಸುತ್ತಿದ್ದು ನಂತರ ಒಂದೆಡೆ ನೆಲೆನಿಂತು ಪಶುಪಾಲನೆ ಹಾಗೂ ಕೃಷಿಯನ್ನು ಕೈಗೊಂಡು ಆಹಾರ ಉತ್ಪಾದನೆಯಲ್ಲಿ ತೊಡಗಿ ಗ್ರಾಮಗಳನ್ನು ಸ್ಥಾಪಿಸಿಕೊಂಡು ಬದುಕಲು ಪ್ರಾರಂಭಿಸಿದ. ಅಂದಿನಿಂದ ಅವನ ಸಾಂಸ್ಕೃತಿಕ ಬದುಕು ವಿಕಾಸವಾಗಿ ತನ್ನದೇ ಆದ ಜೀವನ ರೀತಿ–ನೀತಿ, ಆಚಾರ–ವಿಚಾರ, ನಡೆ–ನುಡಿ, ವೇಷ–ಭಾಷೆ, ಜಾತಿ–ಜನಾಂಗ, ವಿದಿ–ವಿಧಾನಗಳನ್ನು ರೂಪಿಸಿಕೊಂಡನು. ವ್ಯಕ್ತಿಗಳ ಜೀವನ ಕ್ರಮದಿಂದ ಅವನ ಸಂಸ್ಕೃತಿಯನ್ನರಿಯಲು ಸಾಧ್ಯವಿದೆ. ಸ್ಥಳನಾಮಗಳಲ್ಲಿ ಅವನ ಬದುಕಿನ ಬಗ್ಗೆ ಅನೇಕ ವಿಷಯಗಳುಂಟು. ಅವುಗಳ ಅಧ್ಯಯನದಿಂದ ಜನಗಳ ಮನೋಭಾವನೆ, ವ್ಯಕ್ತಿತ್ವ, ಜಾತಿ, ರಾಜಕೀಯ ಮತ್ತು ಸಾಮಾಜಿಕ ವಿಕಸನ ಮೊದಲಾದವುಗಳನ್ನು ಅರಿಯಬಹುದು.

ಸಾಂಸ್ಕೃತಿಕ ಸ್ಥಳನಾಮಗಳನ್ನು ಈ ಕೆಳಗಿನಂತೆ ವಿಭಾಗಿಸಿ ನೋಡಬಹುದು.

೧. ಪ್ರಾಣಿವಾಚಕ ಸ್ಥಳನಾಮಗಳು

ಆದಿಮಾನವನ ಮುಖ್ಯ ಕಸುಬಾಗಿದ್ದು ಪಶುಪಾಲನೆಯಿಂದ ಅವನು ಕೃಷಿ ಕಲಿತುಕೊಂಡು ಕೆಲವೊಂದು ಪ್ರಾಣಿಗಳನ್ನು ಸಾಕಲು ಕಲಿತುಕೊಂಡನು. ಇದಲ್ಲದೆ ಪ್ರಕೃತಿಯಲ್ಲಿ ಆಯಾ ಪ್ರದೇಶಕ್ಕೆ ಅನುಗುಣವಾಗಿ ಯಾವ ಪ್ರಾಣಿಗಳು ಅತೀ ಹೆಚ್ಚು ಸಿಗುತ್ತವೆಯೋ ಆ ಪ್ರಾಣಿಗಳ ಹೆಸರಿನಲ್ಲಿಯೇ ಸ್ಥಳನಾಮಗಳನ್ನು ಗುರುತಿಸಿಕೊಂಡರು. ಜನಪದ ಅಥವಾ ಶಿಷ್ಟರ ಮನೋಭಾವನೆಯನ್ನು ಇವು ವ್ಯಕ್ತಪಡಿಸುತ್ತವೆ. ತಮ್ಮ ಜೀವನದೊಂದಿಗೆ ಬದುಕುವ ಅಥವಾ ತಮಗೆ ಅತಿಮಾನುಷವೆಂದು ತೋರುವ ಪ್ರಾಣಿ–ಪಕ್ಷಿಗಳ ಹೆಸರನ್ನು ತಮ್ಮ ವಾಸದ ನೆಲೆಗಳಿಗೆ ನಿರ್ದೇಶಿಸುತ್ತಾರೆ.

ಸ್ಥಳನಾಮಗಳು

ಗೋಳಸಾರ, ಚಕ್ಕಮಸಳಿ, ಬೆಕ್ಕಿನಾಳ,

೨. ವ್ಯಕ್ತಿವಾಚಕ ಸ್ಥಳನಾಮಗಳು

ಕೆಲವು ಪ್ರಮುಖ ಅರಸು ಮನೆತನಗಳಲ್ಲಿ ಪಾಳೆಯಗಾರರು ಪ್ರಸಿದ್ಧ ವ್ಯಕ್ತಿಗಳು, ಪ್ರಾಂತ್ಯಾಧಿಕಾರಿಗಳು ಇವರುಗಳ ಹೆಸರಿನ ಸ್ಥಳನಾಮಗಳು ವಿಜಯಪುರ ಜಿಲ್ಲೆಯಲ್ಲಿ ಬಹುಪ್ರಮುಖವಾಗಿ

ಕಂಡುಬರುತ್ತವೆ. ರಾಜನ ಪ್ರೀತಿಗೆ ಪಾತ್ರರಾಗಿದ್ದ ಪ್ರಾಂತ್ಯಾಧಿಕಾರಿಗಳ ಹೆಸರಿನ ಮೇಲೆ ಹಳ್ಳಿಗಳು ನಿರ್ಮಾಣವಾಗಿವೆ. ಕೆಲವು ಮಹಿಳೆಯರ ಹೆಸರಿನ ಸ್ಥಳನಾಮಗಳು ಕೂಡ ಕಂಡುಬರುತ್ತವೆ. ರಾಜರು ಭೂಮಿಯನ್ನು ಉಂಬಳಿ ಅಥವಾ ದಾನವಾಗಿ ನೀಡಿ ಆ ಊರಿಗೆ ತನ್ನ ರಾಣಿಯರ ಹೆಸರುಗಳನ್ನು ನಾಮಕರಣ ಮಾಡಿರುವುದಾಗಿ ಶಾಸನಾಧಾರಗಳಿಂದ ತಿಳಿದುಬರುತ್ತದೆ.

ಸ್ಥಳನಾಮಗಳು:

ಅ.ಪುರುಷರನ್ನು ಸೂಚಿಸುವ ಸ್ಥಳಗಳು:– ಅರ್ಜುನಗಿ, ಬಾಬಾನಗರ, ಬಿಜ್ಜರಗಿ, ನಂದರ್ಗಿ, ಬೊರಸನಹಳ್ಳಿ, ರಾಮನಹಳ್ಳಿ, ಸಾನಬಾಳ, ಬೈರವಾಡಿಗ, ಜೆಟ್ಟಗಿ, ಸುಲ್ತಾನಪುರ

ಆ.ಸ್ತ್ರೀಸೂಚಕ ಸ್ಥಳಗಳು: ಬೆಳ್ಳುಬ್ಬಿ, ಚಾಂದಕವಟೆ

೩. ದೈವವಾಚಕ

ನಮ್ಮ ಪೂರ್ವಜರು ಕುಲದೈವ, ಮನೆದೈವ, ಗ್ರಾಮದೇವತೆ, ಪ್ರಾದೇಶಿಕ ದೈವ ಹೀಗೆ ಒಂದೊಂದು ದೈವಗಳನ್ನು ಮಾಡಿಕೊಂಡು ಅವುಗಳಲ್ಲಿ ನಂಬಿಕೆ, ಭಯ–ಭಕ್ತಿ, ಶ್ರದ್ಧೆ ಗೌರವಗಳನ್ನು ತೋರಿಸುತ್ತಾ, ಕೆಲವೊಂದು ಸಸ್ಯಗಳಿಗೂ ಕೂಡ ದೈವದ ಹೆಸರನ್ನು ಕಲ್ಪಿಸಿ ಪೂಜಿಸಿಕೊಂಡು ನಂಬಿಕೊಂಡು ಬಂದಿದ್ದಾರೆ. ಅಂತಹ ದೈವವಾಚಕ ಸ್ಥಳನಾಮಗಳನ್ನು ವಿಜಯಪುರ ಜಿಲ್ಲೆಯಲ್ಲಿಯೂ ಕಾಣಬಹುದು.

ಸ್ಥಳನಾಮಗಳು: ದೇವರಗೆಣ್ಣೂರು, ಬಬಲೇಶ್ವರ, ಇಂಗಳೇಶ್ವರ

೪. ವ್ಯಾಪಾರಕ್ಕೆ ಸಂಬಂಧಿಸಿದಂತೆ

ವ್ಯಾಪಾರ, ಸಂತೆಗಳು ನಡೆಯುವ ಸ್ಥಳಗಳು ವಿಶೇಷ ಸ್ಥಳವಾಗಿದ್ದು, ಪ್ರಾದೇಶಿಕವಾಗಿ ಸಂಪದ್ಭರಿತವಾಗಿರುತ್ತವೆ. ಸುತ್ತಮುತ್ತಲ ಊರಿನ ಹಳ್ಳಿಗಳ ಜನರು ಬಂದು ತಮಗೆ ಬೇಕಾಗಿರುವ ದಿನಸಿ ವಸ್ತುಗಳನ್ನು ಕೊಂಡೊಯ್ಯುವ ಸ್ಥಳಗಳಾಗಿವೆ.

ಸ್ಥಳಗಳು: ಕಾಜೋಳ್, ಜುಮ್ನೊಳ್, ನಿಂಬಾಳ್, ಬರ್ಡೊಳ್, ಮಣ್ಣುರು,

೫. ಜಾತಿವಾಚಕ

ಸಾಮಾಜಿಕ ರಚನೆಯಲ್ಲಿ ಮಾನವನಿಗೆ ಲಿಂಗ, ವರ್ಗ, ಜಾತಿ ಮುಂತಾದ ಅಂಶಗಳಿವೆ. ಲಿಖಿತ ಆಧಾರಗಳ ಕೊರತೆಯಿದ್ದ ಸಂದರ್ಭದಲ್ಲಿ ಯಾವುದೇ ಜನಾಂಗ ನೆಲೆಸಿದ್ದ ಪ್ರದೇಶದ ಸ್ಥಳನಾಮಗಳಲ್ಲಿ ಸಮನ ರೂಪಗಳನ್ನು ಪರಿಶೀಲಿಸಬೇಕು. ಇದರಿಂದ ಆಯಾ ನಾಡಿನ ಸಾಂಸ್ಕೃತಿಕ ಸ್ತರಗಳು, ಜನಾಂಗಗಳ ಅಸ್ತಿತ್ವವು ಸ್ಥಳನಾಮಗಳಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದು.

ಸ್ಥಳನಾಮ ನಿರ್ದೇಶನವು ಜಾತಿ, ವರ್ಗದ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುತ್ತದೆ. ಮಾನವ ಪ್ರಾಚೀನ ಕಾಲದಲ್ಲಿ ನಿಸರ್ಗದೊಂದಿಗೆ ಜೀವನವನ್ನು ಸಾಗಿಸುತ್ತಾ ಇದ್ದ ಸಂದರ್ಭದಲ್ಲಿ ನಿಸರ್ಗವಾಚಿ ಸ್ಥಳನಾಮಗಳು ಉಗಮಗೊಂಡವು. ಕಾಲಕ್ರಮೇಣ ನಿಸರ್ಗಕ್ಕಿಂತ ತನ್ನ ಜನಾಂಗದ ಬಗೆಗೆ ವ್ಯಕ್ತಿಗಳು ಮೋಹ ಬೆಳೆಸಿಕೊಂಡ ಪರಿಣಾಮ ಜನಾಂಗವಾಚಿ ಸ್ಥಳನಾಮಗಳು ತಳೆಯಾರಂಭಿಸಿದವು. ಹೀಗಾಗಿ ಜನಾಂಗ ಅಥವಾ ಜಾತಿಯ ನೆಲೆಯಲ್ಲಿ ನಿರ್ದೇಶನಗೊಂಡಿರುವ ಸ್ಥಳನಾಮಗಳನ್ನು ಆಯಾ ಸಮುದಾಯಗಳ ಹಿನ್ನೆಲೆಯಲ್ಲಿ ಗುರುತಿಸುವ ಪ್ರಯತ್ನವನ್ನು ಕೆಳಗಿನ ವಿವೇಚನೆಯಲ್ಲಿ ಮಾಡಲಾಗಿದೆ.

ಸ್ಥಳನಾಮಗಳು

ಶಿರ್ಕನಹಳ್ಳಿ, ಕನ್ನೂಳ್ಳಿ, ಕೋರವಾರ, ಗೋಲಗೇರಿ, ಚಟ್ಟರಕಿ, ನಾಗಾವಿ ಬಿ.ಕೆ., ಮಲಘಾಣ, ಶಿರಸಗಿ, ಡೋಣೂರು, ಮನಗೋಳಿ, ಕೋಳೂರು, ನಾಗರಬೆಟ್ಟ, ನಾಗೂರು, ಸರೂರು, ಸಿರೋಳ

ಬ್ರಾಹ್ಮಣರು: ಪ್ರಾಚೀನ ಕಾಲದಿಂದಲೂ ಬ್ರಾಹ್ಮಣರು ಪ್ರತಿಷ್ಠಿತ ಸಮುದಾಯವಾಗಿದ್ದು, ಗರಿಷ್ಠವಾದ ಸ್ಥಾನಮಾನವನ್ನು ಗುರುತಿಸಿಕೊಂಡು ಸ್ಥಳನಾಮಗಳ ಮೇಲಣ ತನ್ನ ಅಸ್ತಿತ್ವವನ್ನು ಸ್ಥಾಪಿಸಿರುವುದು ಅವುಗಳ ಅಧ್ಯಯನದಿಂದ ಮನವರಿಕೆಯಾಗುತ್ತದೆ. ಪ್ರಾರಂಭದಲ್ಲಿ ವೈದಿಕರು ತಮ್ಮ ಕೆಲವು ನೆಲೆಗಳಿಗೆ ವೈಷ್ಣವ ಸಂಬಂಧಿ ಹೆಸರುಗಳನ್ನು ನಿರ್ದೇಶಿಸಿಕೊಂಡಿದ್ದರು. ಅಂದಿನ ರಾಜ ಪರಂಪರೆಯು ಬ್ರಾಹ್ಮಣರಿಗಾಗಿ ಅಗ್ರಹಾರಗಳನ್ನು ನಿರ್ಮಿಸಿಕೊಟ್ಟಿದ್ದುದು ತಿಳಿದುಬರುತ್ತದೆ. ಅಗ್ರಹಾರಗಳಲ್ಲದೆ ಬ್ರಾಹ್ಮಣ ಭಂಟ, ಬೊಮ್ಮ ಮೊದಲಾದ ಹೆಸರುಗಳಿಂದ ಆರಂಭವಾಗುವ ಸ್ಥಳನಾಮಗಳು ಕರ್ನಾಟಕದಾದ್ಯಂತ ದೊರೆಯುತ್ತದೆ. ಬ್ರಹ್ಮವು ಸಂಸ್ಕೃತದಿಂದ ತದ್ಭವಗೊಂಡು ಬೊಮ್ಮ ಆಗಿದೆ. ಭಟ್ಟ ಪದವು ಬ್ರಾಹ್ಮಣ ವಾಸ್ತವ್ಯದ ಹೆಸರನ್ನು ಪ್ರತಿನಿಧಿಸುತ್ತದೆ.

ಈ ಪರಿಸರದಲ್ಲಿ ಕಾಣಸಿಗುವ ಬ್ರಾಹ್ಮಣರಿಗೆ ಸಂಬಂಧಿಸಿದ ಸ್ಥಳನಾಮಗಳು.

ಸ್ಥಳಗಳು: ಕುಮಠೆ.

೬. ನಿರ್ಮಾಣವಾಚಕ

ಮಾನವನ ಜೀವನಕ್ಕೆ ಅತ್ಯವಶ್ಯಕವಾಗಿ ನೀರಿನ ಅಗತ್ಯವಿದೆ. ಆದ್ದರಿಂದ ಪ್ರಾಕೃತಿಕವಾಗಿ ಹರಿಯುವ ನೀರಿಗೆ ಅಡ್ಡಲಾಗಿ ಕೆರೆ, ಕಟ್ಟೆ, ಗುಂಡಿ, ಕುಂಟೆಗಳನ್ನು ನಿರ್ಮಿಸಿಕೊಂಡು ಜೀವನವನ್ನು ಸಾಗಿಸುತ್ತಿದ್ದರು. ಇವುಗಳೂ ಆ ಸ್ಥಳಗಳಲ್ಲಿ ಪಾತ್ರ ವಹಿಸುತ್ತಿದ್ದು ಇವುಗಳಿಂದಾಗಿಯೇ ಆ ಸ್ಥಳಗಳಿಗೆ ಹೆಸರುಗಳು ಪ್ರಾಪ್ತವಾಗುತ್ತಿದ್ದವು.

ಮಾನವ ನಿರ್ಮಿಸಿದ ಕೆರೆ, ಕಟ್ಟೆಗಳಿಗೆ ಪ್ರಾಕೃತಿಕವಾಗಿ ಬಂದಿರುವ ಹೆಸರುಗಳಲ್ಲದೆ, ವ್ಯಕ್ತಿಯ ಹೆಸರುಗಳು ಕೂಡ ನಾಮ ನಿರ್ದೇಶಿತಗೊಂಡಿವೆ.

ಸ್ಥಳನಾಮಗಳು: ಕಲಕೇರಿ.

ಮಾನವನ ಅನುಕೂಲತೆಗೆ ತಕ್ಕಂತೆ ನಿರ್ಮಾಣ ಮಾಡಿಕೊಂಡಿರುವಂತಹ ಕೇರಿ, ಖೇಡ್, ಗಾವ್ ಎಂಬ ಹಳ್ಳಿಗಳು ಮಾನವನ ಬದುಕಿನಲ್ಲಿ ಹಾಸುಹೊಕ್ಕಾಗಿ ಕಂಡುಬಂದಿವೆ.

ಒಟ್ಟಾರೆ ಸ್ಥಳನಾಮ ವೈವಿಧ್ಯಪೂರ್ಣವಾದ, ವಿಸ್ತಾರವಾದ ಪ್ರಪಂಚವಾಗಿದ್ದು, ಸ್ಥಳನಾಮಗಳನ್ನು ವರ್ಗೀಕರಿಸಿ ನೋಡುವುದರಿಂದ ನಮಗೆ ತಿಳಿಯದಂತಹ ಕೆಲವೊಂದು ವಿಚಾರಧಾರೆಗಳು ಬೆಳೆಯುತ್ತವೆ. ಕೆಲವೊಂದು ಸ್ಥಳನಾಮಗಳು ಹಳೆಯ ರೂಪವನ್ನು ಶೇಷಗೊಳಿಸಿಕೊಂಡು ಹೊಸ ರೂಪವನ್ನು ಹೊಂದಿರುವುದು ಕಂಡುಬರುತ್ತದೆ. ಸ್ಥಳನಾಮ ಅಧ್ಯಯನವು ತುಂಬಾ ಜಟಿಲ ಸಂಕೀರ್ಣವೆಂದು ಹೇಳಬಹುದು. ಸಂಶೋಧಕನು ಸ್ವಲ್ಪ ಯಾಮಾರಿದರೂ ಕೂಡ ಅವುಗಳ ಅರ್ಥ ಸಾಧ್ಯತೆಗಳು ಕಡಿಮೆಯಾಗುತ್ತವೆ.

ಸ್ಥಳನಾಮಗಳಿಗೆ ಅನೇಕ ಸಾವಿರ ವರ್ಷಗಳ ಇತಿಹಾಸವಿದೆ. ಮಾನವನ ಪ್ರಾಚೀನ ಇತಿಹಾಸದ ಮೇಲೆ ಸ್ಥಳನಾಮಗಳು ಬೆಳಕು ಚೆಲ್ಲುತ್ತವೆ. ನಿಸರ್ಗ, ಜನಾಂಗ, ದೈವಗಳ ಪರಿಕಲ್ಪನೆ, ವ್ಯಾಪಾರ, ಸಸ್ಯ, ಗಿಡ, ಮರ, ಪ್ರಾಣಿ-ಪಕ್ಷಿ, ಖನಿಜ ಸಂಪತ್ತು, ರಾಜಮನೆತನಗಳು ಇತ್ಯಾದಿ ವಿಚಾರಧಾರೆಗಳು ಸ್ಥಳನಾಮ ಅಧ್ಯಯನದಿಂದ ತಿಳಿದುಬರುತ್ತದೆ.

ಸ್ಥಳನಾಮಗಳು ಭಾಷಾವಿಜ್ಞಾನಿ, ಸಮಾಜಶಾಸ್ತ್ರ, ಇತಿಹಾಸತಜ್ಞರಿಗೆ ಅಧ್ಯಯನ ಮಾಡಲು ಭತ್ತದ ತೊರೆಗಳಾಗಿವೆ.

೩.೨ ಶಾಸನೋಕ್ತ ಸ್ಥಳನಾಮಗಳ ಪಟ್ಟಿ

ವಿಜಯಪುರ ತಾಲ್ಲೂಕು

ಶಾಸನ ಸಂಖ್ಯೆ	ದೊರಕಿದ ಸ್ಥಳ	ಶಾಸನದ ಕಾಲ ಕ್ರಿ.ಶ.	ಉಲ್ಲೇಖಿತ ಸ್ಥಳನಾಮಗಳು
೨	ದ್ವಾರಾವತಿಪುರ	೧೧೪೯	ಬ್ರಹ್ಮಗಿರಿ ಗೌಡಗೇಜೆಯಹಳ್ಳಿ ಅರಸಹಳ್ಳಿ ಹೊನ್ನಿಹಳ್ಳಿ ಪಿರಿಯಹಳ್ಳಿ

೩	ಯಾಲೂರಲು	೧೨೭೮	ಕೂಟಜಿಯಲು, ದೇಹೂರಲಿ
೪	ತಳೆಕೋಟೆ	೧೫೦೦	
೬	ಹೇರಜಿಕೆ	೧೧೪೯	ಹೆರಕಲೊಳ, ಹೆರಕಲ್ಲು, ಹೆರಕಲ್ಲೊಳ
೭	ವಂಕಾಪುರ	೧೦೭೪	ವಿಜಯಾಪುರ, ಬಿಜ್ಜಲಹಳ್ಳಿ
೯	ವಿಜಯಾಪುರ	೧೨೪೪	
೧೦	ನೆಗಳ್ದುವಾತಿಭಟಗ್ರಾಮ	೧೧ ಕ್ರಿ.ಶ.	ಲಕ್ಷ್ಮೀನೂಪುರ
೧೨	ಸುನ್ದರಿ(ಯ)ಕಲ್ಲ	೧೦೪೧	
೧೩	ಪೆರ್ಜ್ಜುಂಕ	೧೦೮೩	ವಡ್ಡರಾವುಳ
೧೫	ಬನದಹಳ್ಳಿ	೧೧೦೪	
೧೬	ಪೊಟ್ಟಳಕೆಜ಼್	೧೧ ಕ್ರಿ.ಶ.	
೧೮	ಮಾನ್ಯಖೇಟ	೯೪೫ ಕ್ರಿ.ಶ.	ಕರ್ಣಪುರಿ, ಮುದುವೊಳಲ
೨೨	ಗೊರವನಹಳ್ಳಿ	೧೧೨೩	
೨೩	ದೇವೇಂದ್ರಪುರ	೧೧೯೬	
೨೯	ಬೆನಕನಕದಿಟ್ಟಿಗೆ	೧೦೪೦	
೩೦	ಜಯಸ್ತ್ರೀಪುರ	೧೧೧೧	ಸಿನ್ದಿಗೆ
೩೧	ಜಯನ್ಸೀಪುರ	೧೧೨೦	ಸಿನ್ದಿಕಾಪುರಂ, ಸಿನ್ದಿಗೆ, ಕಂನವಳ್ಳಿ, ಬನದಹಳ್ಳೀ
೩೨	ಸಿನ್ದಿಗೆ	೧೧೨೯	
೩೪	ಮಾಸಣರೂ	೧೧೭೬	ಭೋಗಪುರ
೩೬	ಕಿಸುವೊಳಲ,	೧೦೭೦	
	ಪಟ್ಟದಕಲ್ಲು		

೩೭	ಜಯಂತೀಪುರ	೧೧೦೦	
೩೮	ವಿಜೆಯಾಪುರೇ	೧೨೩೪	ಹೊಸಹಳ್ಳಿ
೪೦	ಜಕ್ಕಿಮಯನಹಳಿ		
೪೨	ಹೊಸಹಳ್ಳಿ	೧೦೩೩	
೪೬	ವಿಜಯಾಪುರ	೧೧೯೬	
೪೭	ವಿಜೆಯಾಪುರ	೧೨೪೧	
೪೮	ಜಕ್ಕಿಮಯನಹಳಿ	೧೩೦೪	
೫೩	ದೇವಗಿರಿ	೧೨೦೭	
೫೮	ತಕನಹಳ್ಳಿ	೧೧೩೯	
೬೨	ಕುಂಬಿಟಗೆ	೧೨೧೫	
೬೩	ಕುಮ್ಮಟಗೆ	೧೧೮೫	
೬೪	ಬಬ್ಬುಲೇಸ್ವರ	೧೧೮೭	
೬೫	ಮಾದೆಗಲೂರ	೧೨ ಶತ	
೬೬	ಕನ್ನವೂರಿನ	೧೧೬೦	
೬೭	ಕನ್ನವೂರಿನ	೧೦೮೯	ಮರೆಕನಹಳ್ಳಿ
೭೦	ಕಂನವೂರಿ	೧೧೬೩	
೭೨	ಬೋಗಾವತಿಪುರ	೧೦೮೩	ಟಕ್ಕಳಿಕಾಭಿದಾನಗ್ರಾಮ್ದೆ
೭೩	ಕಾಕಣ್ಣಿಕಾಪುರ	೯೯೪	
೭೫	ಸಂಕನಕೆರೆವೂರ	೧೦೬೯	ವಾಣಸಾನ್ವಯಪುರ
೭೭	ಗಂಡೆಗಗ್ರಾಮ	೧೦೮೯	ಗಂಡೆಗನೂರು
೭೮	ಮೋದಿಗನೂರು	೧೧೭೦	
೭೯	ಜಯನ್ತೀಪುರ	೧೧೧೫	ನಿಡುವಣಿ
೮೫	ಕರಂಜೋಳ	೯೯೬	
೮೬	ಕರಂಜೋಳ	೧೨ನೇ ಶತ	

ಇಂಡಿ ತಾಲ್ಲೂಕು

ಶಾಸನ ಸಂಖ್ಯೆ	ದೊರಕಿದ ಸ್ಥಳ	ಶಾಸನದ ಕಾಲ ಕ್ರಿ.ಶ.	ಉಲ್ಲೇಖಿತ ಸ್ಥಳನಾಮಗಳು
೪	ಖೇಡ	೧೨೪೮	ಹಲಸೂರ, ಯಿಂಗಲೇಶ್ವರ
೫	ಅಗ್ರಾಖೇಡ	೧೩೫೧	
೮	ಅರ್ಜುನಿಗೆ		
೯	ಮಾರಿಸಿಂಗನಹಳ್ಳಿ	೧೯ನೇ ಶ.ತ.	
೧೩	ಸೊಂನಲಗೆಯಪುರ	೧೨೪೩	
೧೫	ಖೇಡಗೆ		
೧೮	ಚಟಚೆತಾಣ	೧೦೬೭	
೨೨	ಚಿಕ್ಕಮೊಸಳೆ	೧೦೩೭	ನಾಗುಹನರಾ
೨೩	ಚೋರಹಾರಿಗೆ	೧೧೯೦	
೩೮	ಕಲ್ಲಹಳ್ಳ	೧೨ ಶ.ತ.	ನಿಂಬಹಳ್ಳಿ
೩೯	ನಿಂಬಹಳ್ಳಿ	೧೧೭೪	
೪೨	ಅತ್ತರಗೆ	೧೨ನೇ ಶ.ಮಾ.	ತಡವಲಗೆ, ರಾಜವಳ್ಳಿ, ಹೊರತಿಯೆಂ, ಮಣಲಿಯ, ತೆನೆಯಹಳ್ಳ
೫೧	ಬುಯ್ಯಾರ	೧೧೭೨	
೫೨	ಬುಯಾರ	೧೪ ಶ.ಮಾ.	
೫೩	ಮಣಿ (ಯೂ)ರ	೧೧೩೪	
೫೪	ಮಾರಸಿಂಗನಹಳ್ಳಿ	೧೦೬೦	
೫೬	ಮಿರಿಗಿ	೧೭ ಶ.ಮಾ.	
೫೭	ಕೋಳಾಪುರ	೧೧೭೬	

೫೮	ರೂವಿಗೆ	೧೦೪೫	
೬೦	ರೂವಿಗೆ	೧೦೧೯	
೭೨	ವೂವುಳಿಗನೂರು	೧೨ ಶ.ತ	ಮಾವುಲಿಗನೂರು, ಮೊವುಲಿಗನೂರು, ಮೊವುಲಿಗನೂರಂ
೭೭	ಬೇವಿನೂರು	೧೧೯೦	ಖೇಡಗ್ರಾಮ, ಬೇವಿನೂರ್ಗ್ಗೆ, ಖೇಡಗೆ, ಬೇವಿನೂರ
೭೯	ಹೊರತಿ	೧೨ ಶ.ತ	

ಸಿಂಧಗಿ ತಾಲ್ಲೂಕು

ಶಾಸನ ಸಂಖ್ಯೆ	ದೊರಕಿದ ಸ್ಥಳ	ಶಾಸನದ ಕಾಲ ಕ್ರಿಶ.	ಉಲ್ಲೇಖಿತ ಸ್ಥಳನಾಮಗಳು
೧	ವೆರಂಗಲ್ಲ	೧೧೪೬	
೨	ವಿರಿಂಗಲ್ಲದ	೧೨೦೮	
೧೧	ಗೊಲ್ಲಗೇರಿ	೧೦೨೭	
೧೫	ಕಂನ್ನವಳ್ಳಿ	೧೯೪	
೧೬	ಕಂನವಳ್ಳಿ	೧೧೬೪	
೧೭	ಕಣ್ಣ (ವೊಳ್ಳಿಯಂ)	೧೦೪೧	ಕಣ್ಣವಳ್ಳಿ
೧೯	ಕಂನ್ನವಳ್ಳಿ	೧೨೦೭	
೨೦	ಕನ್ನವಳ್ಳಿಯಲ್	೧೧ ಶತ	ಚೆಟ್ಟುರಗೆಯಂ
೨೨	ಸಿಂದಿಗೆ	೧೦೬೮	
೨೬	ಏಳಮೇಲ	೧೨ ಶತ	
೨೭	ಏಳಮೇಲಿ	೧೦೮೬	

೩೪	ದೇವಣಗಾವೆ		
೩೫	ಗೇರೆನಹಳಿ	೧೧೯೯	
೩೬	ದೇವಣಗಾಲು	೧೬೩೫	
೩೭	ಕಡಲೇವಾಡ	೧೧೫೮	ಕುಮ್ಮಸಿ
೩೮ ೩೯	ಕಡಲೆವಾಡ ಕಡಲೇವಾಡ	೧೧೭೮ ೧೨೦೪	ಕುಂಮಸೆ, ಮೆಳಮೇಲ
೪೧ ೪೨	ಮಂಗಳವೇಡ ನಾವಿದಿಗೆ	೧೧೬೮ ೧೧೬೮	ಸೆಂಬೆವಾಡ, ಹಡವಳಹಟ್ಟಿ
೪೩	ಕಡಲೆವಾಡ	೧೧೬೩	
೪೪	ಜಯಂನ್ತೀಪುರ	೧೧೨೩	ಸೆಂಬೆವಾಡ
೪೫	ಮಂಗಳವೇಡ	೧೧೭೬	ಕಡಲೆವಾಡ, ದೇವವಳ್ಳಿ, ಸೆಂಬೆವಾಡ
೪೬	ಕುಂಬಿಟ್ಟಿಗೆ	೧೧೯೨	
೪೭ ೪೮	ಅಲಂದೆ ಹಿಂಚಗೇರಿ	೧೧೨೭ ೧೧೮೬	ಹಿಂಚಗೇರಿ, ಬಾಗವಾಡಿ
೪೯	ಸೆಲೆಯಹಳ್ಳಿ	೧೧೭೨	ದೇವವಳ್ಳಿ, ಸೆಂಬೆವಾಡ, ದೇವಣಗಾವೆ
೫೧ ೫೨	ನಾವಿದಿಗೆ ಕೊರವಳ್ಳಿ	೧೧೪೦ ೧೧೩೯	ಕೊಡಗಂಬೊಲ, ಕುಮ್ಮಸಿ
೫೩	ಕುಂಬಿಟ್ಟಗೆ	೧೦೮೨	
೫೬	ಕಕ್ಕನೆಳಮೇಲ	೧೧೪೭	
೫೯	ಕಕ್ಕರಮೇಲೆ	೧೦೭೦	
೬೦	ಮಲ್ಲಗಾಣ	೧೧೩೩	
೬೧	ಮಲ್ಲಗಾಣ	೧೧೦೦	

೭೧	ಹಿಪ್ಪರಗೆ	೧೧೯೨	
೭೪	ಪಡ(ತಿ)ಗನೂರ	೧೨೦೮	
೭೭	ಮಣ್ಣಿಯೂರ	೧೧ ಶ.ಮಾ.	
೭೮	ದೇವಪುರ	೧೧೯೬	
೭೯	ದೇವಪುರ	೧೦೬೪	
೮೦	ಮೂಡಕರ್ಣವಳ್ಳಿ	೧೦೨೯	
೮೩	ಕೋ(ರಾ)ವೂರ	೧೨೧೧	
೮೬	ಹೆಬ್ಬಳ್ಳ	೧೨೫೦	
೮೭	ಪಿರಿದುಪ್ಪಿನಹಳ್ಳ	೧೧೮೭	
೮೯	ಕಲಕೆಜ಼	೧೧ ಶತ	
೯೮	ಕೊಂಡಗುಳಿ	೧೧೬೬	

ಬಸವನ ಬಾಗೇವಾಡಿ ತಾಲ್ಲೂಕು

ಶಾಸನ ಸಂಖ್ಯೆ	ದೊರಕಿದ ಸ್ಥಳ	ಶಾಸನದ ಕಾಲ ಕ್ರಿ.ಶ.	ಉಲ್ಲೇಖಿತ ಸ್ಥಳನಾಮಗಳು
೨	ದೂಂಕನಕೇರಿ	೧೧೩೭	
೩	ಕವಜಗೇರಿ	೧೧೭೬	ಯಸಗಬಾಳು, ಚಂದಣಗೇರಿ, ಯಂಗರಗೇರಿ
೪	ಇಂಗಳೇಶ್ವರ	೧೧೬೦	
೬	ಊಂಡಗೇರಿ	೧೨ನೇ ಶ.ತ.	
೧೨	ವೊರೊಡೆಗೇರಿ	೧೨೬೫	ಮಣಿಗವಳ್ಳಿ
೧೩	ದಿಂಡಾವರ	೧೧೧೨	

೧೪	ಚಂದಣಗೇರಿ	೧೩ನೇ ಶ.ಮಾ.	
೨೧	ಬಾಗವಾಡಿ	೧೧೭೦	
೨೩	ವಾಣಸುಗೇರಿ	೧೦೪೯	ಭತ್ತಗ್ರಾಮ
೩೨	ಮಣಿಗವಳ್ಳಿ	೧೧೪೨ 131845	ಮಾಣಿಕ್ಯವಳ್ಳಿ, ಮಾಣಿಕ್ಯವಲ್ಲಿ, ಮಾಣಿಗವಳ್ಳಿ
೩೩	ಮಣಿಗವಳ್ಳಿ	೧೧೬೫	
೩೮	ಬಾಣಸುಗೇರಿ	೧೧೬೫	
೪೮	ಮುರ್ತ್ತಗೆ	೧೧೧೦	ಮುರ್ತ್ತುಗೆ
೫೧	ಮುತ್ತಗೆ	೧೧೪೭	ಹೆಬ್ಬಾಳು, ನಾಗವಾಡ
೫೨	ಸಾತಿಯಹಳ್ಳಿ	೧೧೯೧	
೫೩	ಪೆರ್ಬ್ಬಾಳ	೧೦೯೫	
೫೪	ಹೆಬ್ಬಳ	೧೨೯	
೫೬	ಏಳಾಊರ	೧೨೨೨	
೫೯	ಸಾಳವಾಡಿಗೆ		
೬೦	ಸಾಳವಾಡಿಗೆ	೧೨೫೧	ಬಾಗವಾಡಿ
೬೩	ಬಾಸುರಿಕೋಡು	೮೬೨ ಕ್ರಿ.ಶ.	ಬಾಗೆವಾಡಿ, ಸಾಮಳವಾಡಿಗೆ, ಒಡ್ಡವೊಡಿಗೆ, ಪಿಪ್ಪರಗೆ, ಇಂಗಳಿಸರ
೬೪	ಪೂವಿನ ಪಿಪ್ಪರಗೆ	೮೬೨ ಕ್ರಿ.ಶ.	
೬೫	ಮುಳಿವಾಡ	೧೪ನೇ ಶ.ತ.	
೬೯	ಬೆಲ್ಕೋಡಂ	೧೦೬೨	
೭೧	ಹತ್ರಿಕಿಹಾಳ	೧೪೮೮	
೭೪	ಕೋಲಾರ	೧೨೨೩	ಮಾಣಿಗಡೆಗೆನೂರ

ಮುದ್ದೇಬಿಹಾಳ ತಾಲ್ಲೂಕು

ಶಾಸನ ಸಂಖ್ಯೆ	ದೊರಕಿದ ಸ್ಥಳ	ಶಾಸನದ ಕಾಲ ಕ್ರಿ.ಶ.	ಉಲ್ಲೇಖಿತ ಸ್ಥಳನಾಮಗಳು
೩	ಕ್ಕುಂಟ್ಟೆ	೧೧ನೇ ಶ.ತ.	
೬	ಕುಂಟಿಜಿಯ	೧೦೬೮	
೯	ಕೂಳೂರ	೧೨ನೇ ಶ.ತ.	
೧೧	ಕೋಳೂರ	೧೨ನೇ ಶ.ತ.	
೨೧	ದಟ್ಟುಗಿ	೧೨೫೭	
೨೪	ಆಲಕೊಪರ	೧೭ನೇ ಶ.ತ.	
೩೧	ಡವಳಿಗಿ	೧೭ನೇ ಶ.ತ.	
೩೨	ದೂವಳಗೆ	೧೨೩೫-೩೬	
೩೩	ಬಸುರಿಕೋಡ	೧೨೫೭	ಹಾಗಿಲುಹನ್ನೆಜಿ ದೊಳಗಣ, ಸೂಂನಲಿಗೆಯಪುರ, ಪಡಿಯಕನೂರ
೩೬	ಕಾನ್ತಿಪಟ್ಟಣ	೧೦೩೨	
೩೭	ದೋಂಟದೊಳು	೧೧ಲಳ	ಮಿಣಿಂಜಿಗೆ, ಬೆಳಹನೂರ, ವಾರಣಾಸಿ
೩೯	ಹೊಟ್ಟಳಕೇಜಿ	೧೦೩೩	
೪೨	ಪಗಲಟ್ಟ	೧೦೧೪	ಬಾಣರಾಸಿ
೪೩	ಕಾಜನೂರ	೧೦೧೨	ಪಲಗಟ್ಟ
೪೭	ಹಗರಿಟ್ಟಗೆ	೧೧೭೪	ಬಾಡಂ, ಬಮ್ಮನಹಳ್ಳಿ
೪೮	ಬಂದನೂರ	೧೧೮೯-೯೦	ಹಗರಟ್ಟೆ, ಕಾರಗನೂರ
೫೦	ಬಾಡ	೧೧೪೫	ಬೇಲೂರ

೫೧	ಹಗರಿಟ್ಟ	೧೧೮೧	ತಾಳಿಯಕೋಟೆ
೫೨	ತಾಳಿಯಕೋಟೆ	೧೧೨೫	ವಾರಾಣಾಸಿ
೫೩	ಸೇಲೆಯಹಳ್ಳಿ	೧೧ನೇ ಶ.ತ.	ಕೀರ್ತ್ತಿಗೆರೆ
೫೪	ಪಿರಿಯಳಿಗೆ	೧೧೮೪	ಉಣುಕಲ್ಲು, ಬಮ್ಮುಕೂರು, ತಾಳಿಯಕೋಟೆ, ಬಂಮನಹಳ್ಳಿ, ಕಾರೆಗನೂರಿಗೆ, ಅಣಲೆವಾಡ, ಸಂಪಗಾವಿ
೫೫	ಕೊಡೆಯನೂರ	೧೨ನೇ ಶ.ತ.	
೫೮	ಸರವೂರ	೧೨೧೦	ಅರಸನಹಳಿ, ಅರಳಿಗೇಜ್, ಸರಊರ
೫೯	ಅರಳಿಗೆಜಿಗೆ	೧೨೧೫	
೬೩	ವಾರಾಸಿಯಾಳು	೧೦೪೧	
೬೪	ಜಕನಹಳ್ಳಿ	೧೧೭೩	
೬೫	ಸೂಳವಾಳಂ	೧೧೪೮	ವಾಸಿಕಾಜಿಂ
೬೭	ದೇವಗಿರಿ	೧೨-೧೩ನೇ ಶ.ತ.	
೬೮	ದೇಸುರ	೧೧೨೧	
೭೧	ಬಂಟನೂರ	೧೧೮೯-೯೦	ಕಾರಿಗನೂರ

ಶಾಸನಗಳ ಸಹಾಯದಿಂದ ಸ್ಥಳನಾಮಗಳ ಪ್ರಾಚ್ಯರೂಪಗಳನ್ನು ಗುರುತಿಸಲು ಸಾಧ್ಯವಾಗುವುದಲ್ಲದೆ, ಅವುಗಳು ಕಾಲದಿಂದ ಕಾಲಕ್ಕೆ ಹೊಂದಿರಬಹುದಾದ ರೂಪ ವ್ಯತ್ಯಾಸ, ಅರ್ಥ ವ್ಯತ್ಯಾಸಗಳನ್ನರಿಯಲು ಸಾಧ್ಯವಾಗುತ್ತದೆ. ಹಾಗಾಗಿಯೇ ಮಾನವ ನೆಲೆಗಳ ಪ್ರಾಚ್ಯರೂಪಗಳ ಅಧ್ಯಯನ ಶಾಸನೋಕ್ತ ಸ್ಥಳನಾಮಗಳ ಅಧ್ಯಯನಕ್ಕೆ ಯಾವಾಗಲು ಪೂರಕ ಎನಿಸುತ್ತದೆ.

ಸ್ಥಳನಾಮಗಳನ್ನು ಅಧ್ಯಯನ ಮಾಡುವಂತಹ ಸಂದರ್ಭದಲ್ಲಿ ಶಾಸನಗಳು ಪ್ರಮುಖ ಆಕರಗಳಾಗಿ ಕಂಡುಬರುತ್ತವೆ. ಇಂತಹ ಪ್ರಮುಖ ಆಕರಗಳು ಕಾಲಘಟ್ಟಕ್ಕೆ ಅನುಗುಣವಾಗಿ ಜನರ ಮೂಢನಂಬಿಕೆಗಳಿಗೆ ತುತ್ತಾಗಿ ಕಾಲಗರ್ಭ ಭೂಮಿಯಲ್ಲಿ ಹುದುಗಿ ಹೋಗಿರುವುದು ನಮ್ಮ ಕಣ್ಣಿಗೆ ಕಟ್ಟುವಂತಿವೆ.

ಶಾಸನಗಳು ಹಳ್ಳಿ-ಹಳ್ಳಿಗಳಲ್ಲೂ ದೊರಕುವುದರಿಂದ ಅವುಗಳ ಸಹಾಯದಿಂದ ಆಯಾ ಪ್ರದೇಶದ ಚರಿತ್ರೆಯನ್ನರಿಯಲು ಸಾಧ್ಯವಾಗುತ್ತದೆ. ಶಾಸನಗಳು ಸಮಕಾಲೀನ ದಾಖಲೆಗಳಾಗಿರುವುದರಿಂದ ಉತ್ಪ್ರೇಕ್ಷೆಗೆ ಅವಕಾಶವಿಲ್ಲ. ವಸ್ತುನಿಷ್ಠತೆ, ಖಚಿತತೆ ಮತ್ತು ಪ್ರಮಾಣಾರ್ಹತೆ ಅವುಗಳ ಬಹುದೊಡ್ಡ ಗುಣ.

ಶಾಸನಗಳನ್ನು ಪ್ರಮುಖ ಆಕರವಾಗಿ ಪರಿಗಣಿಸಿ ಅವುಗಳನ್ನು ಇನ್ನಷ್ಟು ಆಳವಾದ ಅಧ್ಯಯನಕ್ಕೆ ಒಳಪಡಿಸಿದರೆ ಇನ್ನೂ ಅನೇಕ ಮಾಹಿತಿಗಳು ದೊರಕುತ್ತವೆ. ಈ ನನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ಶಾಸನೋಕ್ತ ಸ್ಥಳನಾಮಗಳು ಪ್ರಾಚೀನ ಕಾಲದ ಜನರ ಬಾಯಲ್ಲಿ ಯಾವ ರೀತಿಯಲ್ಲಿ ಉಚ್ಚಾರಣೆಗೆ ಒಳಪಟ್ಟಿದ್ದವೂ ಅದೇ ರೂಪದಲ್ಲಿ ಶಾಸನದಲ್ಲಿ ಉಲ್ಲೇಖಗೊಂಡಿವೆ.

ಬಹಳಷ್ಟು ಅಧ್ಯಯನ ಮಾಡುವಂತಹ ಸಂದರ್ಭದಲ್ಲಿ ಶಾಸನಗಳಲ್ಲಿ ಕಾಲ ಗಣನೆಯನ್ನು ಉಲ್ಲೇಖ ಮಾಡಿಲ್ಲ ಮತ್ತು ಸ್ಥಳಗಳ ಹೆಸರುಗಳು ಉಲ್ಲೇಖ ಮಾಡಿಲ್ಲ. ಶಾಸನ ನಿರ್ದಿಷ್ಟವಾಗಿ ಇಂತಹ ವ್ಯಕ್ತಿ ಅಥವಾ ವಿಷಯಕ್ಕೆ ಸಂಬಂಧಿಸಿದಂತೆ ಎಂದು ಗುರುತಿಸಲು ಕಷ್ಟಕರವಾಗುತ್ತದೆ. ಸ್ಥಳನಾಮಗಳ ಪ್ರಸ್ತುತ ಮತ್ತು ಪ್ರಾಚೀನ ಕಾಲದ ಸ್ಥಳನಾಮಗಳೆಲ್ಲ ಯಾವ ರೀತಿಯ ಬದಲಾವಣೆಯಾಗಿದೆ ಎಂಬುದನ್ನು ಶಾಸನಗಳ ಅಧ್ಯಯನ ಮಾಡುವುದರಿಂದ ನಮಗೆ ಮುಖ್ಯ ಅಂಶಗಳು ಕಂಡುಬರುತ್ತವೆ.

ವಿಜಯಪುರ ಜಿಲ್ಲೆಯ ಶಾಸನಗಳನ್ನು ಗಮನಿಸಿದರೆ ಬರೀ ಅಲ್ಲಿ ಬರುವಂತಹ ವೈಭವಯುತವಾದ ರಾಜರ ಆಡಳಿತ ಪದ್ಧತಿ ಮತ್ತು ಸೂಫಿ ಸಂತರುಗಳ ಬಗ್ಗೆ ಹಾಗೂ ಭವ್ಯವಾಗಿ ಕಂಗೊಳಿಸುವಂತೆ ಕಟ್ಟಡಗಳ ಹಿನ್ನೆಲೆ, ಅದರ ಸ್ಥಾಪಕರುಗಳ ಬಗ್ಗೆ ಮಾಹಿತಿಯನ್ನು ತಿಳಿಯಬಹುದು. ಈ ತರಹದ ಪುಸ್ತಕಗಳು ಹೆಚ್ಚಾಗಿ ಕಂಡುಬರುತ್ತವೆ. ಆದ್ದರಿಂದ ಆಸಕ್ತ ಶಾಸನ ಸಂಶೋಧಕರು ಈ ಜಿಲ್ಲೆಯ ಶಾಸನಗಳನ್ನು ಪುನರ್ ಶೋಧಿಸಿ ಸಂಶೋಧನೆಗೆ ಒಳಪಡಿಸಿ ಹೊಸ ಹೊಸ ವಿಚಾರಗಳನ್ನು ಬೆಳಕಿಗೆ ತರುವಂತಹ ಕಾರ್ಯವನ್ನು ಮಾಡುವುದು ಪ್ರಮುಖವಾದ ಉದ್ದೇಶವಾಗಿದೆ.

೩.೩ ಶಾಸನೋಕ್ತ ಸ್ಥಳನಾಮಗಳ ಪ್ರಾಚೀನ ಮತ್ತು ಪ್ರಸ್ತುತ ರೂಪಗಳು

'ಅ' ಕಾರಾದಿ ರೂಪಗಳು

ಪ್ರಾಚೀನ	ಪ್ರಸ್ತುತ
೧) ಅರ್ಜುನಿಗೆ	– ಅರ್ಜುನಗಿ
೨) ಅಗರ್‌ಖೇಡ್, ಅಗ್ರಾಖೇಡ	– ಅಗರ್‌ಖೇಡ್
೩) ಅತ್ತರಗೆ	– ಅಥರ್ಗಾ
೪) ಅಜುಣಗೆ	– ಅರ್ಜುಣಗಿ
೫) ಆಲಕೊಪರ	– ಅಲಕೊಪ್ಪರ

'ಆ' ಕಾರಾದಿ ರೂಪಗಳು

ಪ್ರಾಚೀನ	ಪ್ರಸ್ತುತ
೬) ಎಳಮೇಲ, ಏಳಮೇಲ	– ಆಲಮೇಲ್
೭) ಅರಳಿಗೆಜ್	– ಆಹೇರಿ
೮) ಯಾಲೂರಲು	– ಆಲೂರು

'ಇ' ಕಾರಾದಿ ರೂಪಗಳು

ಪ್ರಾಚೀನ	ಪ್ರಸ್ತುತ
೯) ಯಿಂಗಳೇಶ್ವರ	– ಇಂಗಳೇಶ್ವರ
೧೦) ಯಂಗರಗೇರೆ	– ಇಂಗಳಗೇರಿ

'ಕ' ಕಾರಾದಿ ರೂಪಗಳು

ಪ್ರಾಚೀನ	ಪ್ರಸ್ತುತ
೧೧) ತಕನಹಳ್ಳಿ	– ಕತಕನ್ಹಳ್ಳಿ
೧೨) ಕಣೂಊರ	– ಕಣ್ಣೂರು
೧೩) ಕಕ್ಕನೆಳಮೇಲ	– ಕಕ್ಕಳಮೇಲ
೧೪) ಕಡಲೆವಾಡ, ಕಡಲೇವಾಡ	– ಕಡ್ಲೆವಾಡ

೧೫) ಕಂನ್ನವಳ್ಳಿ, ಕಂನವಳ್ಳಿ, ಕಂನ್ನವಳ್ಳಿ– ಕನ್ನೊಳ್ಳಿ

೧೬) ಕಲ್ಕೆಱೆ, ಕಲಕೆಱೆ – ಕಲಕೇರಿ

೧೭) ಕಾಖ್ಡಂಕಿ – ಕಲಕೇರಿ

೧೮) ಕಾಜೋಳ – ಕಾಜೋಳ್

೧೯) ಕುಮಟಗೆ – ಕುಮಟಗಿ

೨೦) ಕುಮತ – ಕುಮತೆ

೨೧) ಕುಂಬಿಟ್ಟಗೆ – ಕುಳೇಕುಮಟಗಿ

೨೨) ಕ್ಕುಂಟ್ಟೆ, ಕೊಂಟಜಿ – ಕುಂಟೋಜಿ

೨೩) ಕೂಡಿಗಿ – ಕೂಡಗಿ

೨೪) ಕೊಂಡಗುಳಿ – ಕೂಂಡಗುಳಿ

೨೫) ಕೋರಾವೂರ – ಕೋರವಾರ

೨೬) ಕೋಲಾರ – ಕೂಲ್ಹಾರ

೨೭) ಕೊಳೂರ, ಕೋಳುರ – ಕೋಳೂರು

'ಖ' ಕಾರಾದಿ ರೂಪಗಳು

ಪ್ರಾಚೀನ **ಪ್ರಸ್ತುತ**

೨೮) ಖೇಡಗೆ – ಖೇಡಗಿ

'ಗ' ಕಾರಾದಿ ರೂಪಗಳು

ಪ್ರಾಚೀನ **ಪ್ರಸ್ತುತ**

೨೯) ಗೊಲ್ಲಗೇರಿ – ಗೋಲಗೇರಿ

೩೦) ಗೊಟ್ಟಖಂಡಿಕೆ – ಗೋಟಖಂಡ್ಕಿ

'ಚ' ಕಾರಾದಿ ರೂಪಗಳು

ಪ್ರಾಚೀನ **ಪ್ರಸ್ತುತ**

೩೧) ಚಟ್ಟತಾಣ – ಚಡಚಣ

೩೨) ಚಿಟ್ಟರಗೆ – ಚಟ್ಟರಕಿ

೩೩) ಚಿಕ್ಕಮೊಸಳೆ – ಚಿಕ್ಕಮಸಳಿ

೩೪) ಚಂದಿಸೆಟ್ಟಿ – ಚಾಂದಕವಟೆ

'ಜ' ಕಾರಾದಿ ರೂಪಗಳು

ಪ್ರಾಚೀನ	ಪ್ರಸ್ತುತ
೩೫) ಜಕನಹಳ್ಳಿ, ಜಂಗಮುರಾಳ	– ಜಂಗಂಮುರಾಳ
೩೬) ಜುಮ್ಮಾಳ್	– ಜುಮ್ನಾಳ
೩೭) ಜೆಟ್ಟಗಿ	– ಜೆಟ್ಟಗಿ

'ಧ' ಕಾರಾದಿ ರೂಪಗಳು

ಪ್ರಾಚೀನ	ಪ್ರಸ್ತುತ
೩೮) ದವಳಾರ	– ಧವಳಾರ
೩೯) ಡವಳಿಗಿ, ದೊವಳಗೆ	– ಧವಳಗಿ
೪೦) ಡೋಣೂರು	– ಡೋಣೂರು

'ತ' ಕಾರಾದಿ ರೂಪಗಳು

ಪ್ರಾಚೀನ	ಪ್ರಸ್ತುತ
೪೧) ತರ್ದ್ದವಾಡಿ	– ತದ್ದೇವಾಡಿ
೪೨) ತಂಬೆಧಡೆ, ತಂಭೆದಳಿ	– ತಮ್ಮದಡ್ಡಿ
೪೩) ತಾವರಖೇಡ್	– ತಾವರಖೇಡ
೪೪) ತಾಳಿಯಕೋಟೆ	– ತಾಳಿಕೋಟೆ
೪೫) ತುಂಬಿಗಿ, ತುಂಬಿಗೆ	– ತುಂಬಗಿ
೪೬) ತೋಂಟಾಪುರ	– ತೋಂಟಾಪುರ

'ದ' ಕಾರಾದಿ ರೂಪಗಳು

ಪ್ರಾಚೀನ	ಪ್ರಸ್ತುತ
೪೭) ಗಂಡೆಗನೂರು	– ದೇವರಗೆಣ್ಣೂರು
೪೮) ದೇವಣಗಾವೆ, ದೇವಣಗಾಲು	– ದೇವಣಗಾಂವ್

೪೯) ನಾವಿದಿಗೆ – ದೇವರನಾವದಗಿ

೫೦) ದೇವಪುರ – ದೇವೂರು

'ನ' ಕಾರಾದಿ ರೂಪಗಳು

ಪ್ರಾಚೀನ		ಪ್ರಸ್ತುತ
೫೧) ನರಸಲಿಗೆ	–	ನರಸಲಗಿ
೫೨) ನಂದುಗೆ	–	ನರಸಲಗಿ
೫೩) ನಾಗವಾಪ	–	ನಾಗಾವಿ ಬಿ.ಕೆ.
೫೪) ನಗಪುರ	–	ನಾಗೂರು
೫೫) ನಾಲಿತ್ವಾಡ	–	ನಾಲತ್ವಾಡ

'ಪ' ಕಾರಾದಿ ರೂಪಗಳು

ಪ್ರಾಚೀನ		ಪ್ರಸ್ತುತ
೫೬) ಪಡ(ತಿ)ಗನೂರ	–	ಪಡಗಾನೂರು
೫೭) ಪಡಿಯಕನೂರ (ನೂಲ)	–	ಫಡೆಕನೂರು
೫೮) ಪೀರಪುರ	–	ಪೀರಾಪುರ

'ಬ' ಕಾರಾದಿ ರೂಪಗಳು

ಪ್ರಾಚೀನ		ಪ್ರಸ್ತುತ
೫೯) ಬಬ್ಬುಲೇಶ್ವರ	–	ಬಬಲೇಶ್ವರ
೬೦) ಬಬ(ಲ)ದಿ	–	ಬಬಲಾದಿ
೬೧) ಬರ್ಡೊಳ	–	ಬರ್ಡೊಳ್
೬೨) ಬಟ್ಟುಕಿ	–	ಬಟ್ಟುಣಿಕಿ
೬೩) ದೇವನಮಡುಗು	–	ಬಮ್ಮದೇವನಮಡು
೬೪) ಬಳಗ(ನೂ)ರ	–	ಬಳಗಾನೂರು
೬೫) ಬಾಸುರಿಕೋಡು	–	ಬಸರಕೋಡು

೬೬) ಬಬಾನಗರ – ಬಾಬಾನಗರ

೬೭) ಬಾಗವಾಡಿ – ಬಾಗೇವಾಡಿ

೬೮) ಬಾ(ವು)ರು – ಬಾವೂರು

೬೯) ವಿಜಯಾಪುರ – ಬಾವೂರು

೭೦) ಬೀಜರಗೀ – ಬಿಜ್ಜರಗಿ

೭೧) ಬಿದರ್ಕಂದಿ – ಬಿದರಕುಂದಿ

೭೨) ಬಿಜ್ಜ(ವೂ)ರ – ಬಿಜ್ಜೂರು

೭೩) ಬೆಳ್ಳಬ್ಬಿ – ಬೆಳ್ಳುಬ್ಬಿ

೭೪) ಬೆನಕನಕದಿಟ್ಟಗೆ – ಬೆನಕನಹಳ್ಳಿ

೭೫) ಬೆಕ್ಕಿನಳ – ಬೆಕ್ಕಿನಾಳ

೭೬) ಬೇಳೂರು – ಬೇಲೂರು

೭೭) ಬುಯ್ಯಾರ – ಭೂಯಾರ್

೭೮) ಬಾಕೋಡ – ಬ್ಯಾಕೋಡ

೭೯) ಭೈರಪಾಡಿಗ – ಭೈರವಾಡಿಗ

'ಮ' ಕಾರಾದಿ ರೂಪಗಳು

ಪ್ರಾಚೀನ **ಪ್ರಸ್ತುತ**

೮೦)ಮಧಭವಿ – ಮದಭಾವಿ

೮೧) ಮಣಿ(ಯಾ)ರ, ಮಣ್ಣಿಯಾರ – ಮಣ್ಣೂರು

೮೨) ಮಲ್ಲಗಾಣ – ಮಲಘಾಣ

೮೩) ಮಾನ್ಯಗೇರಿ, ಮಣಿಗವಳ್ಳಿ – ಮನಗೋಳಿ

೮೪) ಮರಗೋಳಿ – ಮರಗೊಳ

೮೫) ಮಸೂತಿ – ಮುಸು(ವ)ತಿ

೮೬) ಮಾರಸಿಂಗನಪಳ್ಳಿ – ಮಾರಕಬ್ಬಿನಹಳ್ಳಿ

೮೭) ಮಾರಸಿಂಗನಹಳ್ಳಿ – ಮಾರಸನಹಳ್ಳಿ

೮೮) ಮಿಣಿಂಜಿಗಿ – ಮಿಣಜಿಗಿ

೮೯) ಮರಿಗಿಯ – ಮಿರಿಗೆ

೯೦) ಮುತ್ತಗೆಯೆಮೀ, ಮುತ್ತಗೆಯಾಳ್– ಮುತ್ತಗಿ

೯೧) ಮುಳಿವಾ(ಡ) – ಮುಳವಾಡ

೯೨) ಮುದ್ದೇಬಿಹಳ – ಮುದ್ದೇಬಿಹಾಳ

೯೩) ಮೈಲೇಸ್ವರ – ಮೈಲೇಶ್ವರಮೈಲೇಶ್ವರ

'ಯ' ಕಾರಾದಿ ರೂಪಗಳು

ಪ್ರಾಚೀನ **ಪ್ರಸ್ತುತ**

೯೪) ಯರನಳ – ಯರನಾಳ್

೯೫) ಯರಗಲ್ಲು – ಯೊರಗಲ್

೯೬) ಏಳಾಉರದ – ಯೊಳವಾರ

'ರ' ಕಾರಾದಿ ರೂಪಗಳು

ಪ್ರಾಚೀನ **ಪ್ರಸ್ತುತ**

೯೭) ರಬ್ಬಿನಹಾಳ – ರಬ್ಬಿನಹಾಳು

೯೮) ರಾಮನ್ನಹಳ್ಳಿ – ರಾಮನಹಳ್ಳಿ

೯೯) ರೂವಿ – ರೂಗಿ

'ಲ' ಕಾರಾದಿ ರೂಪಗಳು

ಪ್ರಾಚೀನ **ಪ್ರಸ್ತುತ**

೧೦೦) ಲೊಟಕೇರಿ – ಲೊಟಗೇರಿ

'ಶ' ಕಾರಾದಿ ರೂಪಗಳು

ಪ್ರಸ್ತುತ **ಪ್ರಾಚೀನ**

೧೦೧) ಶಿರ್ಕನಹಳ್ಳಿ – ಶಿರ್ಕನ್ನಹಳ್ಳಿ

೧೦೨) ಶಿರಸಗಿ – ಶಿರಸಂಗಿ

'ಸ' ಕಾರಾದಿ ರೂಪಗಳು

ಪ್ರಾಚೀನ	ಪ್ರಸ್ತುತ
೧೦೩) ಸಾಂಕ	– ಸಂಖ
೧೦೪) ಸಾತಿಯಹಳ್ಳಿ	– ಸತಿಹಾಳ
೧೦೫) ಸೂರೂರು	– ಸರೂರು
೧೦೬) ಸಾತಲಾಗಾವ	– ಸಾತಲಗಾವ್
೧೦೭) ಸಾಲೋಟ್ಟಿಗಿ	– ಸಾಲೋಟಗಿ
೧೦೯) ಸಾನಬಳ	– ಸಾನಬಾಳ
೧೧೦) ಸಾಂಯನಳ್ಳಿ	– ಸಾಂಯನಳ್ಳಿ
೧೧೧) ಸಾಳವಾಡಿಗೆ	– ಸಾಲವಾಡಗಿ
೧೧೨) ಸಿನ್ದಿಗೆ	– ಸಿಂದಗಿ
೧೧೩) ಸಿರೋಳ್	– ಸಿರೋಳ
೧೧೪) ಸುಲ್ತಾನಪುರ	– ಸುಲ್ತಾನಪುರ

'ಹ' ಕಾರಾದಿ ರೂಪಗಳು

ಪ್ರಾಚೀನ	ಪ್ರಸ್ತುತ
೧೧೫) ಹಲಸಂಗ	– ಹಲಸಂಗಿ
೧೧೬) ಹಟ್ಟಿಹಾಳ	– ಹಟ್ಟಿನಾಳ್
೧೧೭) ಹ(ತ್ರಿ)ಕಿಹಾಳ	– ಹತ್ತಿರಿಕಿಹಾಳ
೧೧೮) ಹಂದರಗಲ್ಲು	– ಹಂದರಗಲ್
೧೧೯) ಹಳ್ಳ(ಉ)ರ	– ಹಳ್ಳೂರು
೧೨೦) ಹಿಪ್ಪರಗೆ	– ಹಿಪ್ಪರಗಿ
೧೨೧) ಹಿವರೂಊರು	– ಹಿವರೂರು
೧೨೨) ಹಿರೇಮುರಾಳ	– ಹಿರೇಮುರಾಳ್

೧೩೩) ಹೊರತಿ – ಹೊರ್ತಿ

೧೨೪) ಪೆರ್ಬ್ಬಾಳ, ಹೆಬ್ಬಳ – ಹೆಬ್ಬಾಳ

೧೨೫) ಹುಲುಬೆಂಚಿ – ಹುಲಬೆಂಚಿ

ವಿಜಯಪುರ ಜಿಲ್ಲೆಯ ಒಟ್ಟಾರೆ ಶಾಸನಗಳನ್ನು ಕ್ರಮಬದ್ಧವಾಗಿ ಭಾಷೆಯ ಹಿನ್ನೆಲೆಯಲ್ಲಿ ಒಟ್ಟಾರೆ ಸ್ಥಳಗಳನ್ನು ಕ್ರೂಢೀಕರಿಸಿಕೊಂಡು ಅವುಗಳನ್ನು ಒಂದು ಪಟ್ಟಿ ಮಾಡುವುದರ ಮೂಲಕ ಪ್ರಾಚೀನ ಮತ್ತು ಪ್ರಾಸ್ತುತ ಸ್ಥಳನಾಮಗಳ ವ್ಯತ್ಯಾಸವನ್ನು ತಿಳಿಯಲು ಸಹಾಯಕವಾಗುತ್ತದೆ.

ಸ್ಥಳಗಳನ್ನು ಅಕ್ಷರಮಾಲೆಯ ಕ್ರಮದಲ್ಲಿ ಜೋಡಣೆಯನ್ನು ಮಾಡುವುದರಿಂದ ಓದುಗ ಸಮೂಹಕ್ಕೆ ಅನುಕೂಲಕರವಾಗುತ್ತದೆ. ಭಾಷೆ ಎಂಬುದು ಸದಾ ಹರಿಯುವ ನದಿ ಇದ್ದ ಹಾಗೆ ಅದು ನಿಂತ ನೀರಲ್ಲ. ಅದು ಕಾಲಕ್ಕೆ ಅನುಗುಣವಾಗಿ ಬದಲಾಗುತ್ತಾ ಇರುತ್ತದೆ. ಯಾವುದೇ ಭಾಷೆಯು ತನ್ನ ಸ್ವಂತ ಅಸ್ತಿತ್ವದಿಂದ ತನ್ನ ಉಳಿಯುವಿಕೆಯಿಂದ ಸ್ವಂತಿಕೆಯನ್ನು ಉಳಿಸಿಕೊಳ್ಳಬಾರದು. ಅದು ಇತರೆ ಭಾಷೆಗಳಿಂದ ಸ್ವೀಕೃತವಾದ ಪದಗಳನ್ನು ಬಳಸಿಕೊಂಡಾಗ ಮಾತ್ರ ಆ ಭಾಷೆಯ ಪ್ರಬುದ್ಧವಾಗಿ ಬೆಳೆಯಲು ಸಾಧ್ಯವಾಗುತ್ತದೆ. ಹಾಗೆ ಭಾಷೆಯ ಬದಲಾವಣೆಯಿಂದ ಹೊಸ ಹೊಸ ಪ್ರಯೋಗಗಳ ಮೂಲಕ ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತದೆ. ಜನರ ಆಡುಭಾಷೆಗೂ ಮತ್ತು ಸುಂಬದ್ಧವಾದ, ಕ್ರಮಬದ್ಧವಾದ ಶಿಷ್ಟ ಭಾಷೆಗೂ ತುಂಬ ವ್ಯತ್ಯಾಸಗಳಿವೆ.

ಶಾಸನಗಳಲ್ಲಿ ಬರುವಂತಹ ಭಾಷೆಗೂ ಮತ್ತು ಪ್ರಸ್ತುತವಾಗಿ ಜನಸಾಮಾನ್ಯರು ಬಳಸುವ ಭಾಷೆಗೂ ಅಜಗಜಾಂತರ ವ್ಯತ್ಯಾಸವಿರುವುದನ್ನು ಗಮನಿಸಬಹುದು.

ಅಡಿಟಿಪ್ಪಣಿ

೧. ಸಿ.ಎಂ.ವಿಶ್ವನಾಥಯ್ಯ, ಕಡೂರು ತಾಲ್ಲೂಕಿನ ಸ್ಥಳನಾಮಗಳು, ಪು.೨೧

೨. ಎಂ.ಎಂ.ಕಲ್ಬುರ್ಗಿ, ಮಾರ್ಗ ಸಂಪುಟ–೨, ಪು.೫೩೭

೩. ಜಾಜಿ ದೇವೇಂದ್ರಪ್ಪ, ಆಂಧ್ರ–ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು, ಪು.೫೯

* * *

ಅದ್ಯಾಯ ನಾಲ್ಕು

ವಿಜಯಪುರ ಶಾಸನಗಳಲ್ಲಿನ ಸ್ಥಳನಾಮಗಳ ವಿಶ್ಲೇಷಣೆ

೪.೧. ಭಾಷಿಕ ವಿಶ್ಲೇಷಣೆ

೪.೨. ಸ್ಥಳನಾಮ ನಿಷ್ಪತ್ತಿಯ ವಿವರಗಳು

ವಿಜಯಪುರ ಶಾಸನಗಳಲ್ಲಿನ ಸ್ಥಳನಾಮಗಳ ವಿಶ್ಲೇಷಣೆ

೪.೧. ಭಾಷಿಕ ವಿಶ್ಲೇಷಣೆ

ಪ್ರಾಚೀನ ಮಾನವ ತನ್ನಲ್ಲಿ ಹುದುಗಿರುವ ಭಾವನೆಗಳನ್ನು ಅಭಿವ್ಯಕ್ತ ಪಡಿಸುವ ಸಲುವಾಗಿ ಭಾಷೆಯನ್ನು ಕಂಡುಕೊಂಡ ತರುವಾಯ ತನ್ನ ಉದರ ಘೋಷಣೆಗಾಗಿ ವನ್ಯಜೀವಿಗಳಂತೆ ಕಾಡಿನಿಂದ ಕಾಡಿಗೆ ಅಲೆದಾಡಿ ಆಹಾರ ಸಂಗ್ರಹಿಸುವುದನ್ನು ಕಲಿತನು. ಈ ರೀತಿಯಾಗಿ ಬದುಕುತ್ತಿದ್ದ ಮಾನವ ನಿಂತ ನೆಲೆಯಲ್ಲಿ ನಿಲ್ಲದೆ ಎಷ್ಟೋ ಶತಮಾನಗಳವರೆಗೆ ಅಲೆಮಾರಿಯಾಗಿ ಸಂಚರಿಸುತ್ತಾ ಕಾಲವನ್ನು ಸವೆಸುತ್ತಿದ್ದನು. ಈತನಿಗೆ ಭೌದ್ಧಿಕ ಚಿಂತನೆ ಹೆಚ್ಚಾದಂತೆಲ್ಲಾ ಕಾಲ ಕ್ರಮೇಣದಲ್ಲಿ ತನ್ನ ಜೀವನದಲ್ಲಿ ಹೊಂದಿಕೆಯಾಗುವಂತಹ ಪರಿಸರವೊಂದರಲ್ಲಿ ನೆಲೆನಿಂತನು ಹೀಗೆ ನೆಲೆನಿಂತ ಸ್ಥಳಗಳೇ ವಸತಿಗಳಾದವು. ಅವು ಮುಂದೆ ಹಟ್ಟಿಗಳಾಗಿ ಹಳ್ಳಿ, ಊರು, ಗ್ರಾಮ, ನಗರ, ಪಟ್ಟಣ ಮೊದಲಾದವುಗಳು ಸ್ಥಳನಾಮಗಳಾಗಿ ಮಾರ್ಪಟ್ಟವು.

'ಸ್ಥಳನಾಮ' ಎಂದರೆ ಊರು ಹೆಸರುಗಳ ಗ್ರೀಕ್ ಭಾಷೆಯಲ್ಲಿ 'ಟೋಪೋಸ್' ಎಂದರೆ ಸ್ಥಳಗಳ 'ನೋಮೋಸ್' ಎಂದರೆ ಹೆಸರುಗಳು . ಆದ್ದರಿಂದ ಸ್ಥಳಗಳ ಹೆಸರುಗಳನ್ನು ಅದ್ಯಯನಮಾಡುವ ವಿಜ್ಞಾನಕ್ಕೆ 'ಟೋಪೋನೋಮ' ಎಂದು ಕರೆಯಲಾಗಿದೆ.[೧]

ಟೋಪೋಸ್ ಮೂಲತಃ ಭೂವಿವರವನ್ನು ಸೂಚಿಸುವ ಅರ್ಥ ಹೊಂದಿದ್ದರೂ ಇಲ್ಲಿ ಪಾರಿಭಾಷಿಕವಾಗಿ ಪ್ರಾಕೃತಿಕ ಮತ್ತು ಸಾಂಸ್ಕೃತಿಕವಾಗಿ ವೈಲಕ್ಷಣಗಳೆರಡನ್ನು ಇದು ಒಳಗೊಂಡಿದೆ.

ಭಾರತದಲ್ಲಿ ಇಂತಹ ಭೌಗೋಳಿಕನಾಮ ಅಥವಾ ದೇಶ ನಾಮಗಳಿಗೆ ಪ್ರಾದೇಶಿಕ ಭಾಷೆಗಳಲ್ಲಿ ಗ್ರಾಮನಾಮ (ಹಿಂದುಸ್ಥಾನಿ) ಊರ್ಲಪೇರ್ಲು (ತೆಲಗು) ಇಡಂ (ತಮಿಳು) ಊರ ಹೆಸರು (ಕನ್ನಡ) ಮುಂತಾದ ಪರ್ಯಾಯ ಪದಗಳನ್ನು ಬಳಸಲಾಗಿದೆ. ಊರು,ಪುರ, ಗ್ರಾಮ. ದೇಶ ಮುಂತಾದ ಪದಗಳಿಗೆ ಪಾರಂಪರಿಕವಾದ ಸೀಮಿತ ಅರ್ಥಗಳಿರುವುದರಿಂದ ಉಳಿದ ಸಾಮುದಾಯಿಕ ಮಾನವ ನೆಲೆಗಳ ಅರ್ಥವನ್ನು ಅವು ಒಳಗೊಳ್ಳುವವು.

ಸ್ಥಳನಾಮಗಳ ಅಧ್ಯಯನಕ್ಕೂ ಭಾಷಾಧ್ಯಯನಕ್ಕೂ ಪರಸ್ಪರ ನಿಕಟವಾದ ಸಂಬಂಧವಿದೆ. ಒಂದು ರೀತಿಯ ಅವಿನಾಭಾವ ಸಂಬಂಧ ಹಾಗೂ ಕಳ್ಳುಬಳ್ಳಿ ಸಂಬಂಧವೆಂತಲೂ ಹೇಳಬಹುದು.

ಸ್ಥಳನಾಮಗಳ ಖಚಿತತೆ (ಸ್ಪಷ್ಟತೆ)ಗೆ ಭಾಷೆ ಬಹುಮುಖ್ಯ ವಾಹಕವಾಗಿದೆ. ಸ್ಥಳನಾಮಗಳ ಶೋಧನೆಗೆ ತೊಡಗಿದ್ದ ಅದ್ಯಯನಕಾರನಿಗೆ ಭಾಷೆಯ ವಿವಿಧ ಮಗ್ಗಲುಗಳನ್ನು ಸ್ಪರ್ಶಿಸಿ ಪದರು ಪದರುಗಳನ್ನು ತೆರೆದು ನೋಡಿದಂತೆ ಕೆಲವು ಸೂಕ್ಷ್ಮ ಒಳನೋಟಗಳ ಮೂಲಕ ಮಹತ್ವದ ಮಾಹಿತಿಯು ದೊರೆಯುತ್ತದೆ. ಹೀಗಾಗಿ ಸ್ಥಳನಾಮ ಶಾಸ್ತ್ರ ಹಾಗೂ ಭಾಷಾಶಾಸ್ತ್ರಗಳು ಒಂದಕ್ಕೊಂದು ಅವಿನಾಭಾವ ಸಂಬಂಧ ಪಡೆದ ವಿಷಯಗಳಾಗಿವೆ. "ಭಾಷಾ ವಿಜ್ಞಾನ ದೃಷ್ಟಿಯಿಂದ ಸ್ಥಳನಾಮಗಳ ಸಂಶೋಧನೆಗೆ ಎತ್ತರವಾದ ಸ್ಥಾನವಿದೆ."[೨]

ಭಾಷೆ ಎನ್ನುವುದು ನಿಂತ ನೀರಲ್ಲ. ಹರಿಯುವ ನದಿ. ಭಾಷೆ ಎನ್ನುವುದು ಕೊನೆಯಾದ ಕೊರಡಲ್ಲ. ಕೊನೆಯುವ ಕೊರಡು. ಈ ಮಾತುಗಳು ಭಾಷೆಯ ನಿತ್ಯ ಪರಿವರ್ತನಾ ಶೀಲತೆಯನ್ನು ಧ್ವನಿಸುತ್ತವೆ. "ಪರಿವರ್ತನೆ ಭಾಷೆಯೊಂದರ ಜೀವಂತಿಕೆಗೆ ಸಾಕ್ಷಿ". ಭಾಷೆಯ ಪರಿವರ್ತನಾಶೀಲತೆಯಿಂದಾಗಿಯೇ ಎಂದೊ ಇಟ್ಟ ಸ್ಥಳನಾಮಗಳು ಇಂದು ಒಗಟಿನಂತೆ ಜಿಗುಟಾಗಿ ಕಾಣಬರುತ್ತದೆ. ಮೂಲ ಹೆಸರು ಕಗ್ಗಂಟ್ಟಿನಂತೆ ಕಾಣಬರುತ್ತವೆ. ಸ್ಥಳನಾಮಗಳು ಭಾಷಿಕ ಘಟಕಗಳೇ ಆದ್ದರಿಂದ ಭಾಷಾ ವಿಜ್ಞಾನಿಗಳು ಸ್ಥಳನಾಮೇತರ ಭಾಷಾ ಘಟಕಗಳನ್ನು ಭಾಷಾ ಶಾಸ್ತ್ರದ ದೃಷ್ಟಿಯಿಂದ ಹೇಗೆ ಪರಿಶೀಲಿಸುತ್ತಾರೋ ಅದೇರೀತಿಯಲ್ಲಿ ಸ್ಥಳನಾಮಗಳನ್ನು ಪರಿಶೀಲಿಸುತ್ತಾರೆ. ಭಾಷೆಯ ವಿಕಾಸ ಸಜಾತಿಯ ಭಾಷೆಗಳೊಡನೆ ಅವುಗಳ ಸಂಬಂಧ ಅನ್ಯಭಾಷೆಯ ಪ್ರಭಾವ ಪ್ರಾಂತೀಯ ಭಾಷಾ ಲಕ್ಷಣಗಳು ವಿಂಗಡಿಸಲು ಪೂರಕ ಆಕಾರಗಳಾಗಿ ನಾಮಗಳು ಸಹಯಕವಾಗಿವೆ. ದ್ವಿಭಾಷಿಕ ವಲಯದಲ್ಲಿನ ಭಾಷಿಕ ಚಹರೆಗಳನ್ನು ವರ್ಣನಾತ್ಮಕ, ಚಾರಿತ್ರಿಕ, ಸಾಮಾಜಿಕ, ತುಲನಾತ್ಮಕ ಪದ್ದತಿಗಳ ಮೂಲಕ ಸ್ಥಳನಾಮ ಸಂಶೋಧನೆ ಮುಖೇನ ಧ್ವನಿಯಾ ರಚನೆ(Phenology) ಆಕೃತಿಮ ವಿಜ್ಞಾನ ನಿಘಂಟು ರಚನೆ ಶಬ್ದಾರ್ಥ ವಿವರಣೆ ಮೊದಲಾದ ಭಾಷಾಶಾಸ್ತ್ರಗಳ ರಚನೆಗೆ ಸ್ಥಳನಾಮ ಅಥವಾ ಗ್ರಾಮನಾಮಗಳು ಸಹಾಯಕವಾಗಬಲ್ಲವು. "ವಿವರಣಾತ್ಮಕ ಭಾಷಾವಿಜ್ಞಾನವೇ ನಿಜವಾಗಿ ಇಂದಿಗೂ ಭಾಷಾವಿಜ್ಞಾನದ ಬೆನ್ನೆಲುಬು. ತಾತ್ವಿಕ ದೃಷ್ಟಿಯಿಂದ ಇದನ್ನು ಸಾಮಾನ್ಯ ಭಾಷಾವಿಜ್ಞಾನದ ಗುಂಪಿಗೆ ಸೇರಿಸಿದ್ದರೂ ಎಲ್ಲಾ ಭಾಷಾ ವಿಶ್ಲೇಷಣೆ ಮಾಡುವುದು ದುಸ್ಸಾಹಸದ ಮಾತು. ಏಕೆಂದರೆ ಭಾಷಾವಿಶ್ಲೇಷಣೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿರುವ ರೂಪಾಂತರ ವ್ಯಾಕರಣವನ್ನಾಗಲೀ ಸಾಮಾಜಿಕ ಭಾಷಾ ವಿಜ್ಞಾನದ ಮಾದರಿಗಳಾಗಲೀ ಅವು ಎಷ್ಟೋ ನವ್ಯ ತಂತ್ರಗಳನ್ನು ಮೈಗೂಡಿಸಿಕೊಂಡಿದ್ದರೂ ಅವುಗಳ ವಿಶ್ಲೇಷಣೆಗೆ ಮೂಲದ್ರವ್ಯ ಸಾಧಿತವಾಗುವುದು ವರ್ಣನಾತ್ಮಕ ಭಾಷಾ ವಿಜ್ಞಾನದಿಂದಲೇ" ಡಾ. ಸೋಮಶೇಖರಗೌಡ ಅವರ (ಭಾಷಾ ರಚನೆ ಬಳಕೆ, ಪು.೦೨) ಮಾತನ್ನು ಒಪ್ಪಬಹುದು.[೩] ಆದರೂ ಇದು ಸಾಮಾಜಿಕ ಮನಸ್ಥಿತಿಯ ಮೂಲಕ ವರ್ಣನಾತ್ಮಕ ಮಾಧರಿಯ ಅಗತ್ಯತೆಯನ್ನು ಕಂಡುಕೊಳ್ಳಬೇಕಾಗಿದೆ. ಕಾರಣ ಇಲ್ಲಿ ವಿವರಣಾತ್ಮಕ ಮಾದರಿಗಿಂತ ಭಿನ್ನವಾಗಿ ಸಾಮಾಜಿಕ ಪ್ರಸ್ತುತತೆಯ ಮೂಲಕ

ಸ್ಥಳನಾಮಗಳನ್ನು ಭಾಷಿಕ ನೆಲೆಯಲ್ಲಿ ನೋಡುವ ಪ್ರಯತ್ನವನ್ನು ಮಾಡಲಾಗಿದೆ. ಸ್ಥಳನಾಮಗಳ ರೂಪಾಂತರಗಳು ಎರಡು ಕಾರಣಗಳಿಂದ ಘಟಿಸುತ್ತವೆ. ಒಂದು ಉದ್ದೇಶಿತ ಬದಲಾವಣೆಯಾದ್ದರೆ. ಇನ್ನೊಂದು ಅನುದ್ದೇಶಿತ ಬದಲಾವಣೆಯಾಗಿರುತ್ತದೆ. ಆಯಾ ಪ್ರದೇಶಗಳ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕಾರಣಗಳಿಂದಾಗಿ ಸ್ಥಳನಾಮವೊಂದು ಬದಲಾವಣೆಗೊಂಡಿದ್ದರೆ ಅದು ಉದ್ದೇಶಿತ ಬದಲಾವಣೆ ಎನಿಸುತ್ತದೆ. ಜನಪದ ಸೌಲಭ್ಯಾಕಾಂಕ್ಷೆಗೆ ಅನುಗುಣವಾಗಿ ಇಲ್ಲವೇ ಭಾಷಿಕ ಕಾರಣಗಳಿಗಾಗಿ ತನ್ನಿಂದ ತಾನೇ ಬದಲಾವಣೆಗೊಂಡಿದ್ದರೆ. ಅದು ಅನುದ್ದೇಶಿತ ಬದಲಾವಣೆ ಎನಿಸುತ್ತದೆ. ಉದಾಹರಣೆಗೆ:

೧. **'ಏಳುಮಂಡಲ'** ಎಂಬ ಸ್ಥಳ ಇಂದಿಗೂ ಜನಪದರ ಬಾಯಲ್ಲಿ ಉಚ್ಚರಣೆಗೊಳ್ಳುತ್ತಿದ್ದು, ಈಗ 'ಚಿಕ್ಕನಹಳ್ಳಿ' ಎಂಬ ಪುನರ್‌ನಾಮಕರಣ ಮಾಡಲಾಗಿದೆ ಇದು ಉದ್ದೇಶಪೂರ್ವಕ ಬದಲಾವಣೆ.

೨. **'ಜೀಯರಹಳ್ಳಿ'** ಎಂಬುದು ಶಾಸನೋಕ್ತ ಸ್ಥಳನಾಮ. ಅದು ಈಗ 'ರಾಮಸಾಗರ' ಎಂದು ಬಳಕೆಯಾಗುತ್ತದೆ ಸೌಲಭ್ಯಾಕಾಂಕ್ಷೆಯ ಕಾರಣಕ್ಕಾಗಿ ಆದ ಭಾಷಿಕ ಬದಲಾವಣೆ ಆಗಾಗಿ ಇದು ಅನುದ್ದೇಶಿತ ಬದಲಾವಣೆ.

ಯಾವ ಭಾಷೆಯು ತನ್ನ ಮಡಿವಂತಿಕೆಯನ್ನು ಬಹಳಕಾಲ ಕಾಯ್ದುಕೊಳ್ಳಲಾರದು. ರಾಜಕೀಯ ಕಾರಣಗಳಿಂದಾಗಿ ಆಳರಸರು ಸ್ಥಳೀಯ ಭಾಷೆಗೆ ಸಂಬಂಧಿಸಿರದಿದ್ದರೆ, ಕ್ರಮೇಣ ಆಡಳಿತಗಾರರ ಭಾಷೆ ಸ್ಥಳೀಯ ಭಾಷೆಯ ಮೇಲೆ ಪ್ರಭಾವ ಬೀರತೊಡಗುತ್ತದೆ. ರಾಜಕೀಯ ಗಡಿಗಳನ್ನು ದಾಟಿಬಂದ ಭಾಷೆ ಬಳಕೆಗೊಳ್ಳುತ್ತಿರಬಹುದು. ಭಾಷಾಗಡಿ ಪ್ರದೇಶಗಳಲ್ಲಿಯೂ ಜನರು ಸ್ಥಳೀಯ ಭಾಷೆ. ಆಡಳಿತ ಭಾಷೆ, ಇವುಗಳಲ್ಲಿ ಮಾತೃ ಭಾಷೆಯೊಂದಿಗೆ ಕನಿಷ್ಠ ಪಕ್ಷ ಒಂದನ್ನಾದರೂ ಬಲ್ಲವರಾಗಿರುತ್ತಾರೆ. ಹೀಗಾಗಿ ಆ ಪ್ರದೇಶ ದ್ವಿಭಾಷಾ ಇಲ್ಲವೇ ಬಹುಭಾಷಾ ಪ್ರದೇಶವೆನಿಸುತ್ತದೆ. ಯಾವುದೇ ಕಾರಣವಿರಲಿ ಅನ್ಯ ಭಾಷೆಯ ಪ್ರಭಾವ ಸುತ್ತಲಿನ ಪರಿಸ್ಥಿತಿಗೆ ಅನುಗುಣವಾಗಿ ಒಂದು ಪ್ರದೇಶದ ಸ್ಥಳೀಯ ಭಾಷೆಯ ಮೇಲೆ ಗಾಢವಾಗಿ ಆಗುತ್ತಾ ಹೋದಂತೆ ಅದರದೇ ಆದ ವಿಶಿಷ್ಟ ಭಾಷೆಗಿಂತ ಭಿನ್ನವಾಗಿ ತೋರಲಾರಂಭಿಸುತ್ತದೆ. ಅನ್ಯಭಾಷಾ ಪ್ರಭಾವವೆಂದರೆ ಸಾಮಾನ್ಯವಾಗಿ ಸ್ಥಳೀಯ ಭಾಷೆಯನ್ನು ಹಲವು ಬಗೆಯಲ್ಲಿ ನಡೆಯುವ ಸ್ವೀಕರಣ ಇದು ಸಹಜ ಮತ್ತು ಇದು ಜೀವಂತವಾಗಿ ಎಲ್ಲಾ ಭಾಷೆಗಳಲ್ಲಿ ನಡೆಯುವ ಪ್ರಕ್ರಿಯೆಯಾಗಿದೆ. ತೆಲುಗಿನ ಪ್ರಭಾವ ಕೇವಲ ಈ ಭಾಗದ ಜನತೆಯ ದೈನಂದಿನ ಮಾತುಗಳಲ್ಲಿ ವಿವಿಧ ಧಾರ್ಮಿಕ ಆಚರಣೆಗಳಲ್ಲಿ ಅಷ್ಟೆ ಆಗದೆ ಆ ಭಾಗದ ಸ್ಥಳನಾಮಗಳ ಮೇಲೂ ಆದುದ್ದನ್ನು ಗುರುತಿಸಬಹುದು.

ಭಾಷಿಕ ಅಧ್ಯಯನ

ಭಾಷಾ ವಿಜ್ಞಾನಿಗಳು ಊರ ಹೆಸರುಗಳನ್ನು ನಿರ್ದಿಷ್ಟ ಮತ್ತು ವಾರ್ಗಿಕ(Specific and Generie) ಎಂಬೆರೆಡು ಘಟಕ (ಆಕೃತಿಮಾ)ಗಳಲ್ಲಿ ವಿಭಜಿಸಿ ಅಧ್ಯಯನ ಮಾಡುವುದುಂಟು. ಕೆಲ ಊರ ಹೆಸರುಗಳು ಎರಡಕ್ಕಿಂತ ಹೆಚ್ಚಾಗಿ ಘಟಕಗಳನ್ನು ಹೊಂದಿರಲೂಬಹುದು. ಅವು ವಿಶಿಷ್ಟದ ಓಂದೆ(Prefix) ವಿಶೇಷಣ ಅಥವಾ ಯಾವುದೋ ವಿಷಯಸೂಚಕ ಪದಗಳಾಗಿ ಸೇರಿಕೊಂಡಿರುತ್ತವೆ. ಸ್ಥಳನಾಮದ ಮೊದಲನೆಯ ಘಟಕ ಸ್ಥಳಗಳ ಲಕ್ಷಣವನ್ನು ಹೇಳುತ್ತದೆ. ಹಾಗಾಗಿ ಅದನ್ನು ನಿರ್ದಿಷ್ಟ ಎಂದು ಹೇಳುತ್ತೇವೆ. ಹೀಗೆ ಸೇರಿ ಕೊಂಡಂಥವುಗಳನ್ನು ನಿರ್ದಿಷ್ಟವೆಂದೇ ಪರಿಗಣಿಸುವುದುಂಟು. ಇಂಥಹ ಕ್ರಮವನ್ನೇ ಇಲ್ಲಿ ಅನುಸರಿಸಲಾಗಿದೆ.

ನಿರ್ದಿಷ್ಟವೆಂದರೆ, ವಿಶಿಷ್ಟ (Specific) ಎಂದರ್ಥ ಅಂದರೆ ಯಾವುದಾದರೂ ವಿಷಯವನ್ನು ಒಳಗೊಂಡಿರುವಂಥದ್ದು. ವಾರ್ಗಿಕ (Generic)ವು ಸ್ಥಳದ ಭೌತಿಕ ನೆಲೆಯನ್ನು ಸೂಚಿಸುವ (ಸ್ಥಳ ನಿರ್ದೇಶಕ) ಘಟಕವಾಗಿರುತ್ತದೆ. ಹಾಗಾಗಿ ಅದನ್ನು ವಾರ್ಗಿಕ(Generics) ಎಂದು ಕರೆಯುತ್ತೇವೆ. ಊರುಗಳನ್ನು ವರ್ಗೀಕರಣಕ್ಕೆ ಒಳಪಡಿಸಬಹುದಾದ ಸಾಮಾನ್ಯ ಘಟಕ ಇದಾಗಿರುತ್ತದೆ. ಸಾಮಾನ್ಯವಾಗಿ ಸ್ಥಳನಾಮಗಳು ಕೂಡುನುಡಿಗಳೇ ಹೊರತು ಅಖಂಡ ಶಬ್ದಗಳಲ್ಲ. ಅಂತೆಯೇ ಕನ್ನಡ ದ್ರಾವಿಡ ಮೂಲದ ಸ್ಥಳನಾಮಗಳು ಸಾಮಾನ್ಯವಾಗಿ ೨ ಘಟಕ (ಆಕೃತಿ)(Morphemes)ಗಳಿಂದ ಕೂಡಿರುತ್ತದೆ.

ಉದಾ: ಊರು, ಹಳ್ಳಿ, ಪುರ, ಗ್ರಾಮ, ಗುಡ್ಡ, ಕೆರೆ, ಕುಂದ, ಕೋಟೆ ಈ ಮುಂತಾದ ಘಟಕಗಳಲ್ಲಿ ಒಂದನ್ನೊಳಗೊಂಡು ಕೊನೆಗೊಳ್ಳುವಂಥವೂ ನಿರ್ದಿಷ್ಟ ಮತ್ತು ವಾರ್ಗಿಕ ಇವೆರಡೂ ಪ್ರತ್ಯೇಕ ಆಕೃತಿಮಗಳೇ. ಈ ಆಕೃತಿಮಾಗಳು ಕೂಡುವಾಗ ಅಲ್ಲಿ ಧ್ವನಿವ್ಯತ್ಯಾಸಗಳೂ ಆಗುತ್ತದೆ. ನಿಘಂಟು(Lexicography) ವಿಜ್ಞಾನಕ್ಕೂ ಈ ರೀತಿ ಸ್ಥಳನಾಮಾಧ್ಯಯನ ಮಹತ್ವದ ಕೊಡುಗೆಯಾಗುತ್ತದೆ. ಭಾಷಿಕ ದೃಷ್ಟಿಯಿಂದ ವಿಜಯಪುರ ಜಿಲ್ಲೆಯಲ್ಲಿ ಬರುವ ಕೆಲವು ಊರುಗಳನ್ನು ಘಟಕಗಳನ್ವಯ ವಿಂಗಡಿಸಿರುವುದನ್ನು ಹಾಗೂ ಅವು ರೂಪ ಹಾಗೂ ಧ್ವನಿವ್ಯತ್ಯಾಸ ಪಡೆದುದನ್ನು ಇಲ್ಲಿ ಕೆಲವು ಉದಾಹರಣೆಗಳನ್ನು ನೋಡುವುದರ ಮೂಲಕ ತಿಳಿಯಬಹುದಾಗಿದೆ.

ವಿಜಾಪುರ ಪರಿಸರದ ಸ್ಥಳನಾಮಗಳಲ್ಲಿ ಅನೇಕ ವಿಧವಾದ ಭಾಷಿಕ ಮತ್ತು ವ್ಯಾಕರಣಕ್ಕೆ ಸಂಬಂಧಿಸಿದ ವಿಷಯಗಳು ತಿಳಿಯುತ್ತವೆ. ಈ ಪ್ರದೇಶದ ಸ್ಥಳನಾಮಗಳ ಸಾಮಾನ್ಯ ಪದಗಳು ವ್ಯಂಜನಾಂತ ಮತ್ತು ಸ್ವರಾಂತವಾಗಿ ಕಂಡುಬರುವುದುಂಟು. ಕೆಲವು ಸಂದರ್ಭದಲ್ಲಿ ಉನ್ನತ ಪಾರ್ಶ್ವವಿವೃತ ಧ್ವನಿಯೊಂದಿಗೆ ಅಂತ್ಯವಾಗುತ್ತವೆ. ಈ ಧ್ವನಿಯ ಪದಾಂತ್ಯದಲ್ಲೂ, ಸಂಧಿಸ್ಥಾನದಲ್ಲೂ ಕಾಣಿಸುತ್ತದೆ.

ಉದಾ: ಅರ್ಜುನಗಿ–ಅರ್ಜುನಿಗೆ ಹಾಗೆಯೇ ಅಗರ್ ಖೇಡ್–ಅಗ್ರಾಖೇಡ, ಅಥರ್ಗಾ– ಅತ್ತರಗೆ, ಆದಾಗ ರ್+ಗ ನಲ್ಲಿ 'ಅ' ಹೊರಟು ಹೋಗುತ್ತದೆ. ಅಲ್ಲದೇ ರ್+ಅ ನಲ್ಲಿ 'ಅ' ಲೋಪವಾಗುತ್ತದೆ.

೧. **ಸ್ಥಳನಾಮಗಳಲ್ಲಿ ಕಂಡುಬರುವ ವ್ಯಂಜನಗಳು ಹೀಗಿವೆ:**

		ದಂತೋಷ್ಠ್ಯ	**ದಂತ್ಯ**	**ಪ್ರತಿವೇಷ್ಟಿತ**	**ತಾಲವ್ಯ**	**ಕಂಠ್ಯ**
ಸ್ಪರ್ಶ:	ಅಘೋಷ	ಪ್	ತ್	ಟ್	ಚ್	ಕ್
	ಘೋಷ	ಬ್	ದ್	ಡ್	ಜ್	ಗ್
	ನಾಸಿಕ	ಮ್	ನ್	ಣ್	ಞ್	ಙ್
	ಮೌಖಿಕ	ವ್	ಲ್	ಳ್	ಯ್	
	ಕಂಪಿತ	ರ್				
	ಘರ್ಷ	ಸ್	ಶ್	ಷ್	ಹ್	

ವಿಶ್ವನಾಥ ಅವರ 'ಸಕಲೇಶಪುರದ ಪರಿಸರದ ಸ್ಥಳನಾಮಗಳು' ಪು–೮೭ ರಲ್ಲಿ ಇರುವ ಭಾಷೆಗಳಲ್ಲಿ ಕಂಡು ಬರುವ ವರ್ಣಮಾಲೆ ಪಟ್ಟಿ ವಿಜಯಪುರದ ಶಾಸನೋಕ್ತ ಸ್ಥಳನಾಮಗಳಿಗೆ ಹೊಂದುತ್ತದೆಂದು ಹೇಳಬಹುದು.

೧. **ವಿಜಯಪುರ ಪರಿಸರದ ಸ್ಥಳನಾಮಗಳ ವರ್ಣಮಾಲೆ ವಿಷಯಗಳು:**

೧. ಅ.ಆ : ಅರ್ಜುನಗಿ, ಅಥರ್ಗಾ, ಆಹೇರಿ, ಆಲಕೊಪ್ಪರ.

೨. ಇ.ಈ : ಇಂಗಳೇಶ್ವರ, ಇಂಗಳಗೇರಿ.

೩. ಉ,ಊ : ಉಮರ್ಜಿ.

೪. ಎ,ಐ : ಐರಾಪುರ.

೫. ಕ್, ಖ್, ಗ್ : ಕತಕನ್ಹಳ್ಳಿ, ಕಪ್ಪನಿಂಬರಗಿ, ಕೂಡಗಿ ,ಕಡ್ನಿ, ಕಕ್ಕನೆಳ ಮೇಲ, ಕಜ್ಜೆವಾಡ, ಕನ್ನೂಳ್ಳಿ, ಕಲಕೇರಿ, ಕುಳೇಕುಮಟಗಿ, ಕೊಂಡಗುಳಿ, ಕೋರವಾರ ,ಕೋಲ್ಹಾರ, ಕುಂಟೋಜಿ, ಕೋಳೂರು, ಖೇಡಗಿ, ಗೋಳಸಾರ, ಗೋಲಗೇರಿ, ಗುಂಡಕರ್ಜಗಿ, ಗುಡಿಹಾಳ, ಗೋಟುಖಿಂಡ್ಕಿ.

೬. ಚ್, ಜ್, ಝ್ : ಚಡಚಣ, ಚಿಕ್ಕಮಸಳಿ, ಚೂರಗಿ, ಚಟ್ಟರಕಿ, ಚಾಂದಕವಟ, ಜುಮ್ನಾಳ್, ಜಲವಾಡ, ಜಂಗಮುರಾಳ, ಜಟಗಿ, ಝಳಕಿ.

೭. ಟ್, ಡ್,: ಟಾಕಳಿ, ಡವಳಾರ, ಡೋಣೂರು, ಡವಳಗಿ.

೮. ತ್,ದ್ : ತಿಡಗುಂದಿ, ತಡವಲಗಾ, ತದ್ದೆವಾಡಿ, ತಾಂಬೆ, ತೆನಿಹಳ್ಳ, ತಾವರಖೇಡ, ತೊಂಟಾಪುರ, ತಂಗಡಗಿ, ತಮ್ಮದಡ್ಡಿ, ತಾಳಿಕೋಟೆ, ತುಂಬಗಿ.

ದೇವರಗೆಣ್ಣೂರು, ದೇವರಗಾಂವ್, ದೇವರ ನಾವದಗಿ, ದೇವೂರು, ದಿಂಡವಾರ.

೯. ಣ್, ನ್ : ನಿಡೋಣಿ, ನಂದರ್ಗಿ, ನಾದ, ನಿಂಬಾಳ್, ನಾಗವಿ, ಬಿ.ಕೆ., ನದಿಹಾಳ, ನರಸಲಗಿ , ನಾಗರಬೆಟ್ಟ, ನಾಗೂರು, ನಾಲತ್‌ವಾಡ.

೧೦. ಪ್, ಬ್: ಪಡಗಾನೂರು, ಪಡೆಕನೂರು, ಬಬಲೇಶ್ವರ, ಬಾಗೇವಾಡಿ, ವಿಜಯಪುರ, ಬಿಜ್ಜರಗಿ, ಬಿದರಕುಂದಿ.

೧೧. ಮ್: ಮಣ್ಣೂರು, ಮನಗೋಳಿ, ಮಸೂತಿ, ಮಲಘಾಣ, ಮಾರಸನಹಳ್ಳಿ, ಮಿರಿಗೆ, ಮುತ್ತಗಿ, ಮುಳವಾಡ, ಮಿಣಜಿಗಿ.

೧೨. **ಪ.ಹ್:** ಹೊನವಾಡ, ಹತ್ತಿರಿಕಿಹಾಳ, ಹೂವಿನ ಹಿಪ್ಪರಗಿ, ಹೆಬ್ಬಾಳ,ಹಿರೂರು.

೨. ವಿಜಯಪುರ ಜಿಲ್ಲೆಯ ಸ್ಥಳನಾಮಗಳಲ್ಲಿ ಸಾಮಾನ್ಯವಾಗಿ ವ್ಯಂಜನಾಗುಚ್ಚಗಳು ಸಂಧಿಸ್ಥಾನದಲ್ಲಿ ಕಾಣಿಸಿಕೊಳ್ಳುತ್ತವೆ.

೧. ಪ್ ಗುಚ್ಚ ಪ್–ಪ್=ಅಲಕೊಪ್ಪರ

೨. ಶ್ ಗುಚ್ಚ ಶ್–ವ್=ಇಂಗಳೇಶ್ವರ

೩. ನ್ ಗುಚ್ಚ ನ್–ಹ್=ಕತಕನ್ಹಳ್ಳಿ

೪. ಪ್ ಗುಚ್ಚ ಪ್–ಪ್=ಕಪ್ಪನಿಂಬರಗಿ

೫. ಡ್ ಗುಚ್ಚ ಡ್–ನ್=ಕಡ್ನಿ

೬. ಕ್ ಗುಚ್ಚ ಕ್–ಕ್=ಕಕ್ಕನೆಳಮೇಲ

೭. ಡ್ ಗುಚ್ಚ ಡ್–ಲ್=ಕಡ್ಲೆಬಾಡ

೮. ನ್ ಗುಚ್ಚ ನ್–ನ್=ಕನ್ನೋಳ್ಳಿ

೯. ಲ್ ಗುಚ್ಚ ಲ್–ಹ್=ಕೋಲ್ಹಾರ

೧೦. ಕ್ ಗುಚ್ಚ ಕ್–ಕ್=ಚಿಕ್ಕಮಸಳಿ

೧೧. ಟ್ ಗುಚ್ಚ ಟ್–ಟ್=ಚಟ್ಟರಕಿ

೧೨. ಮ್ ಗುಚ್ಛ ಮ್–ನ್=ಜಮ್ನಾಳ್

೧೩. ಟ್ ಗುಚ್ಛ ಟ್–ಟ್=ಜಟ್ಟಗಿ

೧೪. ದ್ ಗುಚ್ಛ ದ್–ದ್=ತದ್ದೆವಾಡಿ

೧೫. ಳ್ ಗುಚ್ಛ ಳ್–ಳ್=ತೆನಿಹಳ್ಳಿ

೧೬. ಮ್ ಗುಚ್ಛ ಮ್–ಮ್=ತಮ್ಮದಡ್ಡಿ

೧೭. ಣ್ ಗುಚ್ಛ ಣ್–ಣ್= ದೇವರಗೆಣ್ಣೂರು

೧೮. ಶ್ ಗುಚ್ಛ ಶ್–ವ್=ಬಬಲೇಶ್ವರ

೩. **ವಿಜಯಪುರ ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳ 'ಸಂಧಿ' ಸ್ಥಾನದಲ್ಲಿ ಕಂಡು ಬರುವ ಸಂಬಂಧಕಾರಕ ಮಧ್ಯ ಪ್ರತ್ಯಯಗಳು:**

೧. ಕತಕ + ನ + ಹಳ್ಳಿ

೨. ದೇವ + ಣ + ಗಾಂವ್

೩. ಪಡೆ + ಕ + ನೂರು

೪. ಮಾರಸಿಂಗ + ನ + ಹಳ್ಳಿ

೪. **ಸಂಧಿಗಳಲ್ಲಿ ವಿಜಯಪುರದ ಸ್ಥಳನಾಮಗಳು**

೧. **ಸ್ವರಾದೇಶಕ್ಕೆ :** ೧. ಇಂಗಳ + ಕೇರಿ = ಇಂಗಳಗೇರಿ

೨. ಕತಕನ + ಹಳ್ಳಿ = ಕತಕನ್ಹಳ್ಳಿ

೩. ಕಲ + ಗೇರಿ = ಕಲಕೇರಿ

೪. ಗೋಲ + ಕೇರಿ = ಗೊಲಗೇರಿ

೨. **ಸಮರೂಪಧಾರಣೆ :** ೧. ಕಲ + ಗೇರಿ = ಕಲಕೇರಿ

೨. ಗೊಲ + ಕೇರಿ = ಗೊಲಗೇರಿ

೩. **ಸೌಲಭ್ಯಕಾಂಕ್ಷೆ :** ೧. ಅರಳಿಗೆರೆ > ಆಹೇರಿ

೨. ಕಡಲೇವಾಡ > ಕಡ್ಲೆವಾಡ

೩. ನಿಡುವಣಿ > ನಿಡೋಣಿ

೪.ನಂದುರಗೆ > ನಂದರ್ಗಿ

೫. ನಿಂಬಹಳ್ಳ > ನಿಂಬಾಳ್

೬. ನಗಹುರ > ನಾಗೂರು

೭. ಮಣಿಗವಳ್ಳಯೇನಿ > ಮನಗೋಳಿ

೪. ಸಂಯುಕ್ತಾಕ್ಷರ : ಅಯ್+ ರಾ+ ಪುರ= ಐರಾಪುರ

೫. ಸ್ವರ ವ್ಯತ್ಯಾಸ :

೧.ಎಳಮೇಲ – ಆಲಮೇಲ

೨. ಯಿಂಗಳೇಶ್ವರ – ಇಂಗಳೇಶ್ವರ

೩. ಯಿಂಗಳಗೇರಿ – ಇಂಗಳಗೇರಿ

೪. ದಟ್ಟುಗಿ – ಜೆಟ್ಟಗಿ

೫. ತಂಬೆಧಡೆ – ತಮ್ಮದಡ್ಡಿ

೬. ನಗಹುರ – ನಾಗೂರು

೭. ಪೊನ್ನವಾಡ – ಹೊನವಾಡ

೮. ಪೊವಿನ ಐಪ್ಪರಗೆ – ಹೂವಿನ ಹಿಪ್ಪರಗಿ

೯. ಪೆಬ್ಬಾಳ – ಹೆಬ್ಬಾಳ

೬. ಸಮರೂಪಧಾರಣೆ : ೧. ತಾವರ + ಖೇಡ = ತಾವರಖೇಡ

೨. ಅಗರ್ + ಖೇಡ= ಅಗರ್‌ಖೇಡ

೩. ತಂಗ + ಡ + ಅಗಿ = ತಂಗಡಗಿ

೪. ಉಮ + ಅರ್ಜಿ= ಉಮರ್ಜಿ

೫. ನಂದ + ಅರ್ಗಿ= ನಂದರ್ಗಿ

೬. ತುಂಬ + ಅಗಿ= ತುಂಬಗಿ

೭. ಜೆಟ್ಟ + ಅಗಿ = ಜೆಟ್ಟರ್ಗಿ

೮. ಚೋರ + ಅಗಿ =ಚೋರಗಿ

೭. ಸಾಪೇಕ್ಷ ಪರಿಮಾಣವನ್ನು ಸೂಚಿಸುವ ಹೆಸರುಗಳು ಇಂತಿವೆ.

೧. ಹಿರಿ : ಹಿರೂರು

೨. ಕಿರಿ : ಚಿಕ್ಕ ಸತ್ತಿಗಾಲ.

೮. ವಿಜಯಪುರ ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳಲ್ಲಿ ದೊರಕುವ ವಾರ್ಗಿಕಗಳ(Generics) ಪಟ್ಟಿ ಈ ಕೆಳ ಕಂಡಂತಿವೆ

ಕ್ರಸ.ಂ.	ವಾರ್ಗಿಕಗಳ ಆವರ್ತನೆ	ಒಟ್ಟು ವಾಸಸ್ಥಾನ ಸಂಖ್ಯೆ
೧	ಖೇಡ	೧
೨	ಗೇರಿ/ಕೇರಿ/ಹೇರಿ	೧
೩	ಹಳ್ಳಿ	೪
೪	ಪುರ	೨
೫	ವಾಡ	೪
೬	ಊರು	೯
೭	ಹಾಳ	೫
೮	ಗುಳಿ	೧
೯	ಮೇಲ	೨
೧೦	ವಾರ/ಸಾರ/ಹಾರ/ಳಾರ	೧
೧೧	ಮಸಳಿ	೧
೧೨	ಕೋಟೆ	೧
೧೩	ನಗಿ/ಣಗಿ	೧
೧೪	ಕುಂದಿ/ಗುಂದಿ	೧
೧೫	ಕೊಪ್ಪರ	೧
೧೬	ಒಪ್ಪರಗಿ	೧
೧೭	ನಿಂಬರಗಿ	೧
೧೮	ಉಮರ್ಜಿ	೧

೧೯	ಈಶ್ವರ	೧
೨೦	ಕೂಡಗಿ	೧
೨೧	ಖಂಡ್ನಿ	೧
೨೨	ಕರ್ಜಗಿ	೧
೨೩	ಚೂರಗಿ	೧
೨೪	ಕವಟೆ	೧
೨೫	ಜೆಟ್ಟಗಿ	೧
೨೬	ಝುಳಕಿ	೧
೨೭	ಟಾಕಳಿ	೧
೨೮	ವಲಗಾ	೧
೨೯	ತಾಂಬೆ	೧
೩೦	ದಡ್ಡಿ	೧
೩೧	ತುಂಬಗಿ	೧
೩೨	ಕಗಿ/ರಗಿ/ಜಗಿ	೧
೩೩	ನಾದ	೧
೩೪	ಮಿರಿಗೆ	೧
೩೫.	ಮುತ್ತಗಿ	೧

ಈ ಪಟ್ಟಿಯಲ್ಲಿ ಬರುವ ವಾರ್ಗಿಕಗಳಿಂದ ಕೆಲವು ಅಂಶಗಳು ತಿಳಿಯುತ್ತವೆ.

೧. ಮೊದಲನೆ ಅಥವಾ ನಿರ್ದಿಷ್ಟಗಳು(Specific) ಬಳಕೆಯಾಗುವ ಕೊನೆಯ ಘಟಕದಲ್ಲಿ ಕಂಡು ಬರುವ ವಾರ್ಗಿಕಗಳು ಹಳ್ಳಿ, ಪುರ, ವಾಡ, ಊರು, ಹಾರ, ಳಾರ, ಪಟ್ಟಿ.

೨. ಈ ಮೇಲೆ ಗೊತ್ತುಪಡಿಸಿದ ಸ್ಥಳನಾಮಗಳಲ್ಲಿ ನಿರ್ದಿಷ್ಟವಾಗಿ ಬಳಕೆಯಾಗುವ ವಾರ್ಗಿಕ ಹೆಚ್ಚಾಗಿ ವಾಡ, ಪುರ ಪ್ರತ್ಯಯಗಳಲ್ಲಿ ಸೇರಿವೆ.

೩. ವಿಜಯಪುರ ಶಾಸನೋಕ್ತ ಸ್ಥಳನಾಮಗಳಲ್ಲಿ ವಾರ್ಗಿಕಗಳಾಗಿ ಬಳಕೆಯಾಗಿರುವ ಆಕೃತಿಮಗಳು ನಿರ್ದಿಷ್ಟ ಆಕೃತಿಮಗಳಾಗಿ ಬಳಕೆಯಾಗಿಲ್ಲ.

೪.೨. ಸ್ಥಳನಾಮ ನಿಷ್ಪತ್ತಿಯ ವಿವರಗಳು

೧. ಅರ್ಜುನಿಗೆ > ಅರ್ಜುನಗಿ(ವ್ಯವ)[೧] (ಕ.ರ.ಕೊ.ಪು–೨೭)

ಅರ್ಜುನ : ಗಳಿಕೆ, ಸಂಪಾದನೆ, ಬೆಳ್ಳಗಿರುವುದು, ಪಾಂಡವರಲ್ಲಿ ಒಬ್ಬ.

ನಿಗೆ: ನಗ, ನಗೆ, ನಗುವಿಕೆ, ಅಪಹಾಸ್ಯ

ಮಹಾಭಾರತದ ಕಥಾ ಸೃಷ್ಟಿಯ ಎರಡು ಪಡೆಗಳೆಂದರೆ ಕೌರವರು ಮತ್ತು ಪಾಂಡವರು. ಈ ಪಾಂಡವರಲ್ಲಿಯೇ ಒಬ್ಬನಾದ ಶಕ್ತಿಶಾಲಿ ಸುರದೃಪಿ. ಕೌರವರ ಪಾಂಡವರ ಮಧ್ಯ ಯುದ್ಧ ಸಂದರ್ಭದಲ್ಲಿ ಅತೀ ಪ್ರಮುಖ ಪಾತ್ರವಹಿಸಿರುವ ವ್ಯಕ್ತಿ ಈ ಹಿನ್ನಲೆಯಿಂದ ಈ ಸ್ಥಳಕ್ಕೆ ಒಂದು ಇತಿಹಾಸ ಸೃಷ್ಟಿ ಹೆಸರು ಬಂದಿರಬಹುದು.

೨. ಅಗ್ರಾಖೇಡ > ಅಗರ್‌ಖೇಡ್[೨](ವ.ವಾ) (ಕ.ರ.ಕೂ.ಪು–೯)

ಅ > ರ್ ಕಾರವಾಗಿದೆ. ವ್ಯಂಜನಗಳ ಬಳಕೆಯಾಗಿದೆ. ಬ್ರಾಹ್ಮಣರ ಒಂದು ಕೇರಿ. ಇಲ್ಲಿ ಬ್ರಾಹ್ಮಣರ ಶ್ರೇಷ್ಠತೆಯೆಂದರೆ ಅವರು ಅನ್ನದಾನವನ್ನು ಬಾಳೆ ಎಲೆ ಮೇಲೆ ಮಾಡುವುದು ಶ್ರೇಷ್ಠತೆಯನ್ನು ಸೂಚಿಸುತ್ತದೆ. ಈ ಪದ್ಧತಿಯು ಬ್ರಾಹ್ಮಣರ ಅಗ್ರಹಾರಗಳಲ್ಲಿ ಕಂಡು ಬರುತ್ತದೆ. ಖೇಡ > ಹಳ್ಳಿ, ಗ್ರಾಮ ಎಂದು ಕರೆಯಲಾಗಿದೆ. ಅದಕ್ಕೆ ಅಗ್ರಖೇಡ ಎಂದಾಗಿದೆ.

೩. ಅತ್ತರಗೆ > ಅಥರ್ಗಾ :[೩](ವ.ವಾ) :

ಅ > ರ್ ಕಾರವು ಲೋಪವಾಗುತ್ತದೆ. ಅತ್ತ > ಅತ್ತೆ : ಎಂಬ ಸಂಬಂಧ ಸೂಚಕ ಪದವಾಗಿ ಕಂಡುಬರುತ್ತದೆ. ವಿಶೇಷವಾಗಿ ಹೆಂಡತಿಯ ಅಥವಾ ಗಂಡನ ತಾಯಿಗೆ ಪ್ರೀತಿಯಿಂದ ಕೊಡುವಂತಹ ಉಡುಗೊರೆಯಾಗಿ ಒಂದು ಬಗೆಯ ಬೆತ್ತದ ಕಾವಡಿಯಾಗಿ ಕೊಡಬಹುದು. ಆದ್ದರಿಂದ ಈ ಆಚರಣೆ ಪದ್ಧತಿಯಿಂದ ಅತ್ತರಗೆ > ಅಥರ್ಗಾ ಎಂದಾಗಿರಬೇಕು.

೪. ಅರ್ಜುಣಗೆ > ಅರ್ಜುಣಗಿ[೪](ವ್ಯವಾ) :

ಇಲ್ಲಿ ಮೇಲಿನ ಅರ್ಜುನಗಿ ಮತ್ತು ಅರ್ಜುಣಗಿಗೆ ವ್ಯತ್ಯಾಸವೆಂದರೆ ಅಲ್ಲಿ 'ನ' ಕಾರವಿದೆ ಇಲ್ಲಿ 'ಣ' ಕಾರವಾಗಿದೆ. ನ > ಣ ಕಾರವಾಗಿ ಬದಲಾಗಿದೆ. ಅದೇ ಅರ್ಥವನ್ನು ಕೊಡುತ್ತದೆ.

೫. ಏಳಮೇಲ > ಏಳಮೇಲ > ಆಲಮೇಲ್[೫] :

ಏಳ + ಮೇಲ > ಏಳಮೇಲ ಎಂದಾಗಿದೆ. ಅ > ಎ ಕಾರವು ಲೋಪವಾಗುವವು.

ಏಳೆ– ಒಂದು ಜಾತಿಯ ಛಂದಸ್ಸು. ವ್ಯಾಕರಣಾಂಶಕ್ಕೆ ಸಂಬಂಧಿಸಿದ ಅಂಶವಿದೆ. ಹಳ್ಳಿ ಪ್ರದೇಶದ ಆಡು ಭಾಷೆಯಲ್ಲಿ ಸಮುಯಿಕ್ಕೆ 'ಏಳೆ' ಎಂದು ಕರೆಯುತ್ತಾರೆ. ಶ್ರೇಷ್ಠನಾದ ವ್ಯಕ್ತಿ, ಉತ್ತಮವಾದ ವ್ಯಕ್ತಿ ಅಗ್ರಸ್ಥಾನದಲ್ಲಿರುವಂತಹ ಅಭಿವೃದ್ಧಿ ಹೊಂದಿದ ವ್ಯಕ್ತಿಯಾಗಿ ಕಂಡು ಬರುತ್ತಾನೆ.

೬. ಅರಳಿಗೆಱೆ > ಆಹೇರಿ :[೬](ಸ.ವಾ) :

ಅರಳಿ + ಗೆರೆ : ಶಕಟರೇಪೆ 'ಱ' ಬಳಕೆಯಾಗಿದೆ. ಅರಳಿ : ಅಶ್ವತ್ಥ ವೃಕ್ಷ, ಪೂಜ್ಯನೀಯವಾದ ಅಂದರೆ ಕೃಷ್ಣನಿರುವ ಸ್ಥಳವೆಂದು ಮದುವೆಯಾಗದೇ ಇರುವ ಸ್ತ್ರೀಯರು ಅಶ್ವತ್ಥ ಮರಕ್ಕೆ ಪೂಜೆಮಾಡಿ ಮರದ ಸುತ್ತ ಪ್ರದಕ್ಷಿಣೆ ಹಾಕುತ್ತಾರೆ. ಇದರಿಂದ ಈ ಹಳ್ಳಿಗೆ ಆಹೇರಿ > ಅರಳಿಗೆಱೆ ಎಂದು ಕರೆಯಲಾಗಿದೆ.

೭. ಆಲಕೂಪರ > ಅಲಕೊಪ್ಪರ :[೭](ಸ.ವಾ) :

ಆಲ + ಕೊಪ್ಪರ : ಅ + ಒ ಕಾರಗಳು ಲೋಪವಾಗುತ್ತವೆ. ಆಲ > ಹಾಲದ ಮರ ಎಂದು ಸೂಚಿಸಬಹುದು. ಕೊಪ್ಪ > ಚಿಕ್ಕಹಳ್ಳಿ. ಈ ಹಳ್ಳಿಯಲ್ಲಿ ಮಲ್ಲಯುದ್ದ ಹೆಚ್ಚು ಪ್ರಸಿದ್ಧಿಯನ್ನು ಪಡೆದಿರಬಹುದು. ಸಾಮಾನ್ಯ ಮನೆಗಳಲ್ಲಿ ಮಾತಿನ ಸಂದರ್ಭದಲ್ಲಿ 'ಕೊಪ್ಪರಿಗೆ ಮಲ್ಲ' ಎಂದು ಸಂಬೋಧನೆ ಮಾಡುತ್ತೇವೆ. ಅಂದರೆ ಶ್ರೀಮಂತಿಕೆ ಇರುವವರು ಮನೆಯಲ್ಲಿ ದವಸ ದಾನ್ಯವನ್ನು ನಿಟ್ಟು ನಿಟ್ಟಾಗಿ ಹೊಟ್ಟಿರುವುದೆಂದು ಹೇಳಲಾಗಿದೆ. ಈ ಹಳ್ಳಿಯಲ್ಲಿ ಆಲದ ಮರದ ಅಡಿಯಲ್ಲಿ ಸಾಮಾನ್ಯ ಕುಸ್ತಿಪಟುಗಳ ವ್ಯಾಯಾಮ ಶಾಲೆಗಳಿರುತ್ತವೆ. ಆದ್ದರಿಂದ ಆಲ > ಕೊಪ್ಪರ : ಆಲಕೊಪ್ಪರವಾಗಿರಬೇಕು.

೮.ಯಾಲೂರಲು > ಆಲೂರು[೮](ಸ.ವಾ) :

ಯಾಲು : ಆಲೂ > 'ಉ' ಕಾರ ಆದೇಶವಾಗಿ ಬರುತ್ತದೆ. ಈ ಊರಿನಲ್ಲಿ ಒಂದು ವಿಶೇಷವಾದ ಆಲದ ಮರದಲ್ಲಿ ದ್ರವ ರೂಪದಲ್ಲಿ ಸುರಿಯುವಂತಹ ನೀರಾಗಿರಬೇಕು. ಇದು ಪವಾಡ ಸಾದೃಶ್ಯವಾಗಿರಬೇಕು. ಆದ್ದರಿಂದ ಆಲೂರು ಎಂದಾಗಿರಬೇಕು.

೯.ಇಂಗಳೇಶ್ವರ > ಯಿಂಗಳೇಶ್ವರ್[೯](ಸ.ವಾ) :

ಇ > ಯ ಕಾರಗಳು ಬದಲಾವಣೆಯಾಗಿದೆ. ಶಾಸನದ 'ಯ' ಕಾರವಿದ್ದರೆ, ಪ್ರಸ್ತುತವು 'ಇ' ಕಾರದ ಬಳಕೆಯಾಗಿದೆ. 'ಇಂಗಳ' – ಇಂಗಣ, ಸಂತಾಪ, ಸಂಕಟ, ಗಾರೆಗಿಡ, ಇಂಗುದೀವೃಕ್ಷ ಎಂದಾಗಿದೆ. ' ಈಶ್ವರ – ಒಡೆಯ, ಪ್ರಭು ಎಂದಾಗಿದೆ. ಇದೊಂದು ವಿಶೇಷವಾದ ವೃಕ್ಷವಾಗಿ ಕಂಡು ಬರುತ್ತದೆ. ಇದರ ವಿಶೇಷತೆ ಇದರ ಬೇರನ್ನು ಈಶ್ವರಿ ಬೇರೆಂದು ಕರೆಯಬಹುದು. ಆ ಹೆಸರಿನಲ್ಲಿ ದೇವರನಾಮ ಸೇರಿಕೊಂಡಿರುವುದರಿಂದ 'ಇಂಗಳೇಶ್ವರ' ಎಂದಾಗಿದೆ.

೧೦. ಯಂಗಟಿಗೇಱೆ > ಇಂಗಳಗೇರಿ[೧೦](ಸ.ವಾ) :

ಇಂಗಳ + ಗೇರಿ = ಇಂಗಳಗೇರಿ ಇಲ್ಲಿ 'ಟ > ಱ' ಶಕಟರೇಪೆ ಬಳಕೆಯಾಗಿದೆ. ಇಂಗಳ > ಇಂಗುದೀ ವೃಕ್ಷವನ್ನು ಸುತ್ತುವುದರಿಂದ ಸಂಕಷ್ಟಗಳು ಪರಿಹಾರವಾಗಬಹುದೆಂಬ ನಂಬಿಕೆ ಈ ಊರಿನ ಜನತೆಗೆ ಇರಬಹುದು. ಆದ್ದರಿಂದ ಇಂಗಳಗೇರಿ ಎಂದಾಗಿದೆ.

೧೧.ಉಮರ್ಜಿ > ಉಮರ್ಜಿ[೧೧](ದೈ.ವಾ) :

ಉಮ ಪಾರ್ವತಿ, ಗೌರಿ, ಕೀರ್ತಿ, ಎಳ್ಳಗಸೆಗಿಡ ಎಂದು ಅರ್ಥ ಕೊಡುತ್ತದೆ. ಅರ್ಜಿ : ಅರಿಕೆಯ ಪತ್ರ, ಪ್ರಾರ್ಥನಾ ಪತ್ರ, ಇಲ್ಲಿ ಪಾರ್ವತಿ ದೇವಿಯ ಪ್ರಭಾವ ಹೆಚ್ಚಾಗಿರಬಹುದು. ಅರಿಕೆಯಿಂದ : ಪ್ರಾರ್ಥನೆ ಮಾಡುವುದರಿಂದ ಒಳ್ಳೆಯ ಫಲ ಸಿಗಬಹುದು. ಆದ್ದರಿಂದ ಉಮರ್ಜಿ ಎಂಬ ಹೆಸರು ಬಂದಿರಬಹುದು.

೧೨. ಐರಾಪುರ > ಐರಾಪುರ[೧೨](ಪ್ರಾ.ವಾ) :

ಐರಾ > ಪುರ. ಐರಾ : ಆನೆ : ಪುರ : ಹಳ್ಳಿ, ಪಟ್ಟಣ, ನಗರ ಎಂಬರ್ಥಗಳಿವೆ. ತಾರಕಾಸುರನಂತೆ ಶಕ್ತಿ ಶಾಲಿಯಾದ ದೇಹ ಬಲಾಢ್ಯವಾದ ಆನೆಯಂತಹ ದಡು ದೇಹವನ್ನು ಹೊಂದಿರುವಂತಹ ಕುಸ್ತಿಪಟುಗಳಿದ್ದಿರಬಹುದು. ಆದ್ದರಿಂದ ಐರಾಪುರ ಹೆಸರು ಬಂದಿರಬೇಕು.

೧೩. ಕತಕನಹಳ್ಳಿ > ಕತಕನ್ಹಳಿ[೧೩](ಸ.ವಾ) :

ಪ್ರಾಚೀನ ಶಾಸನದಲ್ಲಿ 'ನ' ಕಾರ ಬಳಕೆಯಾಗಿದೆ. ಆದರೆ ಪ್ರಸ್ತುತ ಕಾಲಮಾನದಲ್ಲಿ ಭಾಷೆಯ ಅನುಕೂಲಕ್ಕೋಸ್ಕರ ಬರವಣಿಗೆಯ ರೂಪದಲ್ಲಿ ಸಂಕ್ಷಿಪ್ತವಾಗಬೇಕೆಂದು 'ಹ' ಕಾರವು 'ಒತ್ತಕ್ಷರವಾಗಿ' ರೂಪಗೊಂಡಿದೆ. ಹೀಗೆ ಭಾಷೆ ಮತ್ತು ಬರವಣಿಗೆಯ ರೂಪದಲ್ಲಿ ವ್ಯತ್ಯಾಸವನ್ನು ಹೊಂದಿದೆ.

೧೪. ಕಪ್ಪನಿಂಬರಗಿ > ಕಪ್ಪನಿಂಬರಗಿ[೧೪] :

ಕಪ್ಪ > ನಿಂಬರಗಿ : 'ಅ' ಕಾರ ಮತ್ತು 'ಇ' ಕಾರಗಳು ಲೋಪವಾಗುತ್ತದೆ. 'ಅ > ಬ' ಕಾರಗಳ ಬಳಕೆಯಾಗುತ್ತದೆ. ಕಪ್ಪ > ಸಾಮಂತನಿಂದ ಅಧಿರಾಜನಿಗೆ ಸಲ್ಲುವ ಕಾಣಿಕೆ ಎಂದರ್ಥ. ನಿಂಬ > ಬಿಂಬೆ, ಈಳೆ ಜಾತಿಗೆ ಸೇರಿದ ಮರ ಮತ್ತು ಅದರ ಹಣ್ಣು ಲಿಂಬೆ. ವಿಜಯಪುರದಲ್ಲಿ ಅರಸು ಮನೆತನಗಳು ಹೇರಳವಾಗಿ ಕಂಡು ಬರುತ್ತವೆ. ಆದ್ದರಿಂದ ಅರಸನಿಗೆ ಸಂತೋಷವಾದಾಗ ಮತ್ತು ಯುದ್ಧಗಳಲ್ಲಿ ಜಯಶಾಲಿಗಳಾದ ವ್ಯಕ್ತಿಗಳಿಗೆ ಕಾಣಿಕೆ ನೀಡುವುದು ಒಂದು ಪರಂಪರೆಯಾಗಿ ಬೆಳೆದಿದೆ. ಆದ್ದರಿಂದ ಕಪ್ಪ ನಿಂಬರಗಿ ಎಂದಾಗಿರಬೇಕು.

೧೫. ಕೂಡಿಗಿ > ಕೂಡಿಗಿ[೧೫](ಪ್ರಾ.ವಾ) :

ಕೂಡ : ಪ್ರಾಣಿ ಸೂಚಕವಾಗಿಯೆ ಕಾಣಬಹುದು. ಮತ್ತು ಒಡನೆ, ಸಂಗಡ, ಸಹ ಎಂಬರ್ಥವನ್ನು ನೀಡುತ್ತದೆ. ಕೂಡಿಗಿಯಲ್ಲಿ ಸ್ನೇಹ ಸಂಬಂಧಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡುವಂತಿರಬೇಕು. ಆದ್ದರಿಂದ ಇದರ ಅನ್ವಯವಾಗಿ ಕೂಡ ಪ್ರಾಣಿಯ ಸೂಚಕವಾಗಿ ಈ ಹಳ್ಳಿಯ ಒಳರ್ಥವನ್ನು ತಿಳಿಯಬಹುದು.

೧೬. ಕಕ್ಕಳಮೇಲ > ಕಕ್ಕನೆಳಮೇಲ[೧೬] :

ಕ್ಕ > ನ : ಕ್ಕ > ಎಂಬ ಒತ್ತಕ್ಷರಗಳ ಬಳಕೆಯಾಗಿದೆ. 'ಅ > ನ' ನಕಾರಗಳ ಸಂಕ್ಷಿಪ್ತತೆಯನ್ನು ಕಾಣಬಹುದು. ಕುಕ್ಕಳ > ಕುದಿಯುವುದನ್ನು ಸೂಚಿಸುವ ಒಂದು ಅನುಕರಣ ಪದ ಇಲ್ಲಿ

ಕುಡಿಯುವ ಯಂತ್ರದ ಬಳಕೆಯೋ ಅಥವಾ ಯಾವುದಾದರೂ ಆಚರಣೆಯನ್ನು ಮಾಡುವಂತಿದ್ದಿರಬೇಕು. ಆದ್ದರಿಂದ ಕಕ್ಕಳಮೇಲ ಎಂಬ ನಾಮಕರಣವಾಗಿದೆ.

೧೭. ಕಡಲೆವಾಡ > ಕಡಲೇವಾಡ > ಕಡ್ಲೆವಾಡ[೧೫]**(ಅ.ವಾ) :**

ಲೇ > ಡ್ಲೆ, ಕಡಲೆ > ಕಡ್ಲೆ ಎಂಬೆರಡು ದೀರ್ಘಾಕ್ಷರಗಳನ್ನು ಮತ್ತು ಒತ್ತಕ್ಷರಗಳನ್ನು ಹೊಂದಿದೆ. ಕಡಲೆ > ವಾಡ : ಕಡ್ಲೆವಾಡ : ದಾನ್ಯದ ರೂಪದಲ್ಲಿ ದ್ವಿದಳ ಧಾನ್ಯ ಈ ಪ್ರದೇಶದಲ್ಲಿ ಹೆಚ್ಚಾಗಿ ಕಡ್ಲೆಯನ್ನು ಹೆಚ್ಚಾಗಿ ಬೆಳೆಯುತ್ತಿರಬೇಕು. ಆದ್ದರಿಂದ ಕಡ್ಲೆವಾಡ ಎಂದಾಗಿದೆ.

೧೮. ಕಂನ್ನವಳ್ಳಿ > ಕಂನವಳ್ಳಿ > ಕಂನ್ನವಳ್ಳಿಯೊಳ್ > ಕನ್ನೊಳ್ಳಿ[೧೬] **(ಜ.ವಾ) :**

ಕಂನ್ನ > ಕನ್ನ : ಬರವಣಿಗೆಯಲ್ಲಿ ರೂಪಬೇದವಿದೆ, ಓದುವಿಕೆಯಲ್ಲಿ ಸ್ವರ ವ್ಯತ್ಯಾಸವಿಲ್ಲ. ಅರಸು ರಾಜರುಗಳ ಆಡಳಿತದ ಸಂದರ್ಭದಲ್ಲಿ ಸಂಮೃದ್ಧಿಯ ಸಮಂತ್ತನ್ನು ಹೊಂದಿದಂತಹ ಹಳ್ಳಿಯಾಗಿರಬೇಕು. ಆದ್ದರಿಂದ ಕನ್ನ > ಕಳ್ಳತನ > ಸುರಂಗ > ಹಳ್ಳಿ > ಚಿಕ್ಕಊರು > ಗ್ರಾಮ ಎಂದಾಗಿದೆ.

೧೯. ಕಲ್ಕೆಜೆ > ಕಲಕೆಜೆ > ಕಲಕೇರಿ[೧೮]**(ನಿ.ವಾ) :**

ಶಕಟರೇಪ 'ಜೆ' ಕಾರ ಬಳಕೆಯಾಗಿದೆ. ಕಲ್ಕೆ > ಕಲಕೆ > ಕಲ : ಒತ್ತಾಕ್ಷರಗಳ ಬಳಕೆಯಾಗಿದೆ. ಕಲ > ಮಣ್ಣಿನ ಪಾತ್ರೆ ಮಾಡುವಂತಹ ಕುಂಬಾರರ ಕೇರಿ, ಓಣಿ ಎಂದು ಹೇಳಬಹುದು. ಆದ್ದರಿಂದ ಕಲಕೇರಿ ಎಂಬ ಹೆಸರು ನಾಮಕರಣಗೊಂಡಿರಬೇಕು.

೨೦. ಕುಂಬಿಟ್ಟಿಗೆ > ಕುಳೇಕುಮಟಗಿ[೨೦] **:**

ಕುಳೇ + ಕುಮಟಗಿ : ಕುಂಬಿ > ಇಟ್ಟಿಗೆ 'ಇ'- ಕಾರಕ್ಕೆ 'ಎ' ಆದೇಶವಾಗಿ ಬಂದಿದೆ. ಇ ಕಾರ ಬದಲಿಗೆ ಎ ಕಾರ ಬಂದಿದೆ. ಈ ಅರ್ಥವ್ಯತ್ಯಾಸ ಹೊಂದಿರುವುದನ್ನು ಕಾಣಬಹುದು.

೨೧. ಕೊಂಡಗುಳಿ > ಕೊಂಡಗುಳಿ[೨೧]**(ಪ್ರಾ.ವಾ) :**

ಕೊಂಡ > ಗುಳಿ : 'ಅ' ಕಾರ ಉ ಆದೇಶವಾಗಿ ಬಂದಿದೆ. ಯಾವುದೇ ಅರ್ಥವ್ಯತ್ಯಾಸವಾಗುವುದಿಲ್ಲ. ಕೊಂಡ > ಹೊಂಡ : ಗುಳಿ > ಹಳ್ಳ, ತಗ್ಗು, ಕುಳಿ, ತಗ್ಗು ಪ್ರದೇಶದಿಂದ ಕೂಡಿರುವಂತಹ ಹಳ್ಳಿ ಕೊಂಡಗುಳಿ ಎಂಬರ್ಥವಿದೆ.

೨೨. ಕೋರಾಪೂರು > ಕೋರವಾರ[೨೨]**(ಜ.ವಾ)** ಸಂಕನಿ–ಪು–೧೬ **:**

ಕೋರ > ವಾರ 'ಉ' ಕಾರವು 'ವಾ' ಕಾರವಾಗಿ ಬದಲಾವಣೆಯನ್ನು ಹೊಂದಿದೆ. 'ಉ' ಕಾರದ ಬದಲಿಗೆ 'ವ' ಕಾರ ಆದೇಶವಾಗಿ ಬಂದಿದೆ. ಕೋರ > ಒಂದು ಜನಾಂಗ ಸೂಚಕವಾಗಿ ಕಂಡು ಬಂದಿದೆ. ಈ ಜನಾಂಗದ ಮುಖ್ಯಸ್ಥ ಎಂದು ಹೇಳಲಾಗಿದೆ. ವಾರ > ಮಾಲೀಕ ಎಂಬರ್ಥವಿದೆ. ಆದ್ದರಿಂದ ಕೋರಾವಾರ ಎಂದಾಗಿದೆ.

೨೩. ಕೋಲಾರ > ಕೊಲ್ಹಾರ[೨೩](ಸ್ಥ.ವಾ) :

ಕೋಲ + ಹಾರ : 'ಅ' ಕಾರವು ಲೋಪವಾಗುತ್ತದೆ. ಮತ್ತು 'ಹಾ' ಕಾರವು ಆದೇಶವಾಗುತ್ತದೆ. ಅ > ಹಾ ಕಾರಗಳ ಬಳಕೆಯಾಗಿದೆ. ಕೋಲ > ಕೋಲಾ : ಸಾಮಾನ್ಯ ಹಳ್ಳಿಗಾಡು ಪ್ರದೇಶದ ದೆವ್ವ – ಭೂತಗಳು ಇವೆ ಎಂಬ ನಂಬಿಕೆಯಿದೆ. ಆದ್ದರಿಂದ ಅವುಗಳನ್ನು ಹೊಡಿಸುವ ಸಲುವಾಗಿ ಭೂತಗಳಿಗೆ ಹರಕೆ, ಸೇವೆಗಳ ರೂಪದಲ್ಲಿ ಭೂತ ನರ್ತನವನ್ನು ಮಾಡುವವರಿಗೆ ವಿಶೇಷ ಅಲಂಕಾರಯುತವಾದ ಶೃಂಗಾರ ಹಾರವನ್ನಾಕಿರಬೇಕು ಆದ್ದರಿಂದ ಕೋಲ್ಹಾರ ಎಂದಾಗಿದೆ.

೨೪. ಕ್ಕುಂಟ್ಟೆ > ಕೂಂಟಜಿ > ಕುಂಟೋಜಿ[೨೪](ವ್ಯ.ವಾ) :

ಕುಂಟ್ಟ > ಒಜಿ : 'ಒ' ಸ್ವರ ಆದೇಶವಾಗಿ ಬಂದಿದೆ. ಕೋಂಟೆ > ಕೋಟ : ಎತ್ತರವೂ ಬಲವತ್ತರವೂ ಆದ ಸುತ್ತುಗೋಡೆ : ಕಿಲ್ಲೆ : ದುರ್ಗ : ಹಳ್ಳಿಯಲ್ಲಿ ಸಾಮಾನ್ಯ ಶಾಸ್ತ್ರ ಹೇಳುವಂತಹ ವ್ಯಕ್ತಿಗಳಿರುತ್ತಾರೆ. ಅದರಲ್ಲೂ ವಿಶೇಷವಾಗಿ ಗಿಣಿ ಶಾಸ್ತ್ರ ಹೇಳುವುದು ರೂಡಿ. ಒಬ್ಬವ್ಯಕ್ತಿ ಒಳ್ಳೆ ಕಾರ್ಯ ಕ್ಕೆ ಹೊರಟಾಗ ಅಪಶಕುನವಾಗುತ್ತದೆ. ಹಲ್ಲಿ ಲೊಚಗುಟ್ಟುವುದು. ರತ್ನ ಪಕ್ಷಿಯನ್ನು ನೋಡುವುರಿಂದ ಶುಭ > ಅಶುಭ ಎಂಬ ನಂಬಿಕೆ ಇದೆ. ಈ ಹಿನ್ನಲೆಯಲ್ಲಿ ಈ ಕ್ಕುಂಟ್ಟೆ > ಕೂಂಟಜಿ > ಕುಂಟೋಜಿ ಎಂಬ ಹೆಸರು ಬಂದಿರಬಹುದು.

೨೫. ಕೊಳೂರ > ಕೋಳೂರ > ಕೋಳೂರು[೨೫](ಜ.ಸೂ) :

ಕೊಳ > ಊರು ,ಕೊಳ > ಸರೋವರ, ಪುಷ್ಕರಣಿ ಎಂದಾಗಿದೆ. ಕೊ > ಕೋ ಕಾರವಾಗಿ ಬದಲಾವಣೆಯಾಗಿದೆ. ಇಲ್ಲಿ ಕೊಳಗಳು, ಸರೋವರಗಳು ಹೆಚ್ಚಾಗಿರುವುದರಿಂದ ಈ ಹೆಸರು ಬಂದಿರಬೇಕು. (ಸಂಕನಿ, ಪು– ೩೩೮–೧೬೭)

೨೬. ಗೋಳಸಾರ > ಗೋಳಸಾರ[೨೬](ಪ್ರಾ.ವಾ) :

ಗೋಳ + ಸಾರ = ಗೋಳಸಾರ 'ಅ' ಕಾರ ಲೋಪವಾಗುತ್ತದೆ. ಗೋಳ > ಕುದುರೆ ಎಂದಾಗುತ್ತದೆ.ವಿಜಯಪುರದಲ್ಲಿ ಅರಸು – ರಾಜರು ಕುದುರೆಗಳನ್ನು ಎತ್ತೇಚ್ಚವಾಗಿ ಬಳಸುತ್ತಿರಬೇಕು. ಸಾರ > ಹಿಂದೆ ಯುದ್ಧಗಳಲ್ಲಿ ಕೋಟೆಯನ್ನೇರಲು ಬಳಸುತ್ತಿದ್ದ ಒಂದು ಸಾಧನ. ಇವೆರಡನ್ನು ಯುದ್ಧ ಸಂದರ್ಭದಲ್ಲಿ ಬಳಸುತ್ತಿದ್ದರು. ಎನ್ನಲಾಗಿದೆ. ಆದ್ದರಿಂದ ಗೋಳಸಾರ ಎಂಬ ಹೆಸರು ಬಂದಿದೆ. (ಸಂ.ಕ.ನಿ, ಪು– ೪೦೬ – ೧೨೮೬)

೨೭ ಗೊಲ್ಲಗೇರಿ > ಗೋಲಗೇರಿ[೨೭](ಜ.ಸೂ) :

ಗೋಲ್ಲಿ +ಗೇರಿ : ಗೊಲ್ಲಗೇರಿ ಒತ್ತಾಕ್ಷರಗಳ ಬಳಕೆಯಾಗಿದೆ. ಗೊಲ್ಲ > ದನಕಾಯುವವನು, ಗೋಪಾಲಕ ಎಂದಾಗಿದೆ. ಗೇರಿ > ಕೇರಿ, 'ಗ' ಕಾರ 'ಕ' ಕಾರವಾಗಿರಬೇಕು. ಅರ್ಥಸ್ಪಷ್ಟತೆಗೆ

'ಗೇರಿ' ಎಂದು ಬಳಕೆಯಾಗಿದೆ. ದನಕಾಯುವ ಒಂದು ಸಮೂಹಕ್ಕೆ, ಗುಂಪಿಗೆ ಗೊಲ್ಲಗೇರಿ ಎಂದು ಕರೆಯಲಾಗಿದೆ.

೨೮. ಗುಂಡಕರ್ಜಗಿ > ಗುಂಡಕರ್ಜಗಿ[೨೮](ಸ.ವಾ) :

ಗುಂಡ > ಕರ್ಜಗಿ ಎಂದಾಗಿದೆ. ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ. ಶಾಸನ ಮತ್ತು ಪ್ರಸ್ತುತದಲ್ಲಿ ಒಂದೇಯಾಗಿ ಕಂಡು ಬರುತ್ತದೆ. ಗುಂಡ > ಒನಪುಗಾರ, ಕರ್ಜಗಿ > ಕರ್ಜಗೆ ಹಾಡುಗಾರ ಪ್ರವೃತ್ತಿಯನ್ನು ಹೊಂದಿರುವ ಪರಿಸರದವರಿಗಿರಬೇಕು ಕರ್ಜಗಿ ಎನ್ನುವುದು ಅವರ ಸರ್ ನೇಮ್ ಆಗಿರಬೇಕು ಆದ್ದರಿಂದ ಗುಂಡ ಕರ್ಜಗಿ ಎಂದಾಗಿದೆ. (ಸಂಕನಿ, ಪು-೩೮೧)

೨೯. ಗುಡಿಹಾಳು > ಗುಡಿಹಾಳ್[೨೯](ವ.ವಾ) :

ಗುಡಿ > ಇ > ಹಾಳ : ಗುಡಿಹಾಳ 'ಇ' ಕಾರ ಆದೇಶವಾಗಿ ಬಂದಿದೆ. ಅರ್ಥಕ್ಕೆ ಯಾವ ವ್ಯತ್ಯಾಸವನ್ನು ಹೊಂದಿಲ್ಲ. ಗುಡಿ > ದೇವಸ್ಥಾನ, ಗುಡಾರ, ಕುಟೀರ ಹೀಗೆ ಹಲವು ಅರ್ಥಗಳಿವೆ. ಹಾಳ > ಸಾಗುವಳಿ ಮಾಡಬೇಕಾದ ನೆಲ : ಜಮೀನು ಹೆಚ್ಚಾಗಿ ಇಲ್ಲಿನ ಕೃಷಿಕರು ಬೆಟ್ಟದ ತುದಿಯಲ್ಲಿ ವ್ಯವಸಾಯವನ್ನು ಮಾಡುತ್ತಿದ್ದರೆನೋ ಆದ್ದರಿಂದ ಗುಡಿಹಾಳು ಎಂದು ಹೆಸರು ಬಂದಿದೆ. (ಸಂಕನಿ, ಪು- ೩೮೩)

೩೦. ಗೊಟ್ಟಖಂಡಿಕೆ > ಗೋಟಖಂಡ್ಕಿ[೩೦](ಸ.ವಾ) :

ಗೊಟ್ಟ > ಅ > ಖಂಡಕ 'ಟ' ಕಾರಕ್ಕೆ 'ಡ' ಕಾರಗಳ ಒತ್ತಕ್ಷರಗಳ ಬಳಕೆಯಾಗಿದೆ. 'ಅ' ಸ್ವರಕ್ಷರ ಲೋಪವಾಗುತ್ತದೆ. 'ಡಿ' ಸ್ವರಾಕ್ಷರವು ಆದೇಶವಾಗಿ ಬಂದಿದೆ. ಗೋಟ್ಟ ದನಕರುಗಳ ಕೊಟ್ಟಗೆ, ಹಟ್ಟಿ, ದನಕರುಗಳಿಗೆ ಔಷದಿ ಮುಂತಾದುವನ್ನು ಕುಡಿಸಲು ಬಳಸುವ ಬಿದಿರಿನ ಕೊಳವೆ ಎಂಬಂರ್ಥವಿದೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಹಸು-ದನಗಳಿಗೆ ಚೆನ್ನಾಗಿಲ್ಲದ ಸಂದರ್ಭದಲ್ಲಿ ಒಂದು ಉದ್ದನೆಯ ಬಿದರಿನ ಕೊಳವೆಯ ಮೂಲಕ ಔಷದಿಯನ್ನು ಕೊಡಿಸಲಾಗುವುದು. (ಸಂಕನಿ, ಪು-೩೯೭)

೩೧. ಚಟ್ಟಿತಾಣ > ಚಡಚಣ[೩೧](ವ್ಯ.ವಾ) :

ಚಟ್ಟಿ > ಇ > ತಾಣ : ಒತ್ತಾಕ್ಷರಗಳ ಬಳಕೆಯಾಗಿದೆ. 'ತಾ' ಕಾರದ ಸ್ಥಾನದಲ್ಲಿ 'ಚ' ಕಾರದ ಬಳಕೆಯಾಗಿದೆ. ಚಟ್ಟಿ > ಹಣವನ್ನು ಸಾಗಿಸುವ ಬಿದಿರಿನ ಚೌಕಟ್ಟು ಭಾಷೆಯ ವರ್ಗೀಕರಣ ದೃಷ್ಟಿಯಿಂದ ನೋಡಿದರೆ ವ್ಯಕ್ತಿವಾಚಕವಾಗಿ ಕಂಡು ಬರುತ್ತದೆ. (ಸಂಕನಿ, ಪು-೪೨೧)

೩೨ ಚಿಕ್ಕಮೊಸಳೆ > ಚಿಕ್ಕಮಸಳಿ[೩೨](ಪ್ರಾ.ವಾ) :

ಚಿಕ್ಕ > ಅ > ಮಾಸಳಿ 'ಮೊ' ಕಾರವು 'ಮ' ಕಾರ ಬದಲಾವಣೆಯಾಗಿದೆ. 'ಕ್ಕ' ಒತ್ತಾಕ್ಷರ ಬಳಕೆಯಾಗಿದೆ. ಮೊಸಳೆ > ಒಂದು ಜಲಚರ ಪ್ರಾಣಿ ಸಾಮಾನ್ಯವಾಗಿ ಚಿಕ್ಕಮೊಸಳೆ ಜಾತಿಗೆ ಸೇರಿದ ಜಲಚರ ಪ್ರಾಣಿಗಳಿವೆ.

೩೩. ಚೋರಹಾರಿಗೆ > ಚೋಗರಿ[೩೩](ಸ.ವಾ) :

ಚೋರ > ಹಾರಿಗೆ : ಚೋರಹಾರಿಗೆ . ಚೋರ > ಕಳವು ಮಾಡುವವನು , ಕಳ್ಳ , ಹಾ > ರಿ ಕಾರಗಳ ಬಳಕೆಯಾಗಿದೆ. ಈ ಊರಿನಲ್ಲಿ ಹೆಚ್ಚಾಗಿ ಕಳ್ಳತನಗಳು ನಡೆಯಬಹುದು ವಿಶೇಷವಾಗಿ ಸಾಲು ಸಾಲು ಕಳವು ಪ್ರಕರಣಗಳು ಹೆಚ್ಚಾಗಿರಬೇಕು. ಕಳ್ಳತನ ಮಾಡುವವರ ಸಂಖ್ಯೆ ಹೆಚ್ಚಾಗಿರಬೇಕು. ಆದ್ದರಿಂದ ಚೋರ ಹಾರಿಗೆ ಎಂದು ಕರೆಯಲಾಗಿದೆ. (ಸಂಕನಿ, ಪು – ೪೫೧)

೩೪ ಚೆಟ್ಟುರಗೆ > ಚಟ್ಟರಕಿ[೩೪](ಜಾ.ವಾ) :

ಚಟ್ಟ > ಅರಕೆ 'ಅ' ಕಾರವು ಆದೇಶವಾಗಿ ಬಂದಿದೆ. 'ಟ್ಟ' ಕಾರಗಳು 'ಟ್ಟು' ಕಾರಗಳ ಧೀರ್ಘಾಕ್ಷರಗಳ ಬಳಕೆಯಾಗಿವೆ. ಚಟ್ಟ > ಹೆಣವನ್ನು ಸಾಗಿಸುವ ಬಿದಿರಿನ ಚೌಕಟ್ಟು. ಅಶುಭವನ್ನು ಸೂಚಿಸುವ ಅಂಶವಾಗಿದೆ. (ಸಂಕನಿ, ಪು – ೬೨–೬೩)

೩೫ ಚಂದಿಸೆಟ್ನಿ > ಚಾಂದಕವಟೆ[೩೫](ವ್ಯ.ವಾ) :

ಚಂದ > ಕವಟೆ, 'ಸ' ಕಾರದ ಸ್ಥಾನದಲ್ಲಿ 'ಕ' ಕಾರದ ಬಳಕೆಯಾಗಿದೆ. 'ಸೆಟ್ನಿ > ಕವಟೆ' ಎಂದು ಎತ್ತರ ಪದದ ಬಳಕೆಯಲ್ಲಿ ಬದಲಾವಣೆಯಾಗಿದೆ. ಅರ್ಥವ್ಯತ್ಯಾಸ ಉಂಟಾಗುತ್ತದೆ. ಚಂದ > ಅಂದ, ಸೊಗಸು ಎಂಬರ್ಥಗಳಿವೆ. ಕವಟು > ಬಾಗಿಲು, ಕದ ಎಂಬರ್ಥವಿದೆ. ಸುಂದರವಾದ ಆಕರ್ಷಣಿಯವಾಗಿ ಕಪಾಟು ಅಲ್ಮಾರಗಳ ಬಳಕೆ ಇರಬೇಕು. ಆದ್ದರಿಂದ ಚಂದಿ ಸೆಟ್ನಿ > ಚಾಂದ ಕವಟೆ ಎಂದಾಗಿದೆ.

೩೬ ಜುಮ್ಮಾಳ್ > ಜುಮ್ಮಾಳ್[೩೬](ವ್ಯ.ವಾ) :

ಜಮಾನ > ಹಾಳ್–'ಹಾಳ್' ಎಂಬ ವ್ಯಂಜನ ಪದ ಬಳಕೆಯಾಗಿದೆ. 'ನ' ಕಾರವು ಆದೇಶವಾಗಿ ಕಂಡು ಬರುತ್ತದೆ. ಜುಮ್ಮೆನ್ > ರೋಮಾಂಚನವಾಗು, ಪುಳಕಗೊಳ್ಳು ಜುಮ್ಮೆಂದು ಸದ್ದುಮಾಡು ಎಂಬರ್ಥವಿದೆ. ಹಾಳ > ಜಮೀನು ಎಂಬರ್ಥವಿದೆ. (ಸಂಕನಿ,ಪು–೧೩೮೫)

೩೭ ಜಾಲವಾಡ > ಜಾಲವಾಡ[೩೭](ವ.ವಾ) :

ಜಾಲ > ವಾಡ, ಜಾಲ > ಬಲೆ, ಕಿಟಕಿ, ಕಿಂಡಿ, ಕಪಟಿ, ಮೋಸ, ಗರ್ವ, ಕೊಬ್ಬು, ಗುಂಪು, ಸಮೂಹ, ಹಂಚಿಕೆ, ಉಪಾಯ, ಒಂದು ಬಗೆಯ ಮರ, ಕದಂಬವೃಕ್ಷ– ಮುಚ್ಚಳ, ಒಡವೆ, ಆಭರಣ, ಇಂದ್ರೀಯ ಎಂಬರ್ಥಗಳಿವೆ. , ವಾಡ > ಮನೆ, ನಿವಾಸ ಎಂಬರ್ಥಗಳಿವೆ. ಸಾಮಾನ್ಯ ಜೇಡರಹುಳವು ಬಾವಿಗಳಲ್ಲಿ ಅಥವಾ ಗಿಡ– ಮರಗಳಲ್ಲಿ ಬಲೆಯನ್ನು ನೇಯುವುದು ಇದರ ವಾಸಸ್ಥಾನವಾಗಿದೆ. ತಮ್ಮ ಸಂರಕ್ಷತೆಗಾಗಿ ಬಲೆಯನ್ನು ಏಣೆದುಕೊಂಡಿರುವುದು ಆದ್ದರಿಂದ– ಜಾಲವಾಡ ಎಂದಾಗಿದೆ.

೩೮ ದಟ್ಟುಗಿ > ಜೆಟ್ಟಗಿ[೩೮]**(ವ್ಯ.ವಾ) :**

'ದ' ಕಾರ 'ಜ' ಕಾರವಾಗಿ ಬದಲಾವಣೆಯಾಗಿದೆ. ಧೀರ್ಘಕ್ಷರಗಳು ಒತ್ತಾಕ್ಷರಗಳ ಬಳಕೆಯಾಗಿದೆ. ದಟ್ಟಿ > ಜಟ್ಟಿ – 'ಇ' ಕಾರಗಳ 'ಎ' ಲೋಪವಾಗುತ್ತದೆ. ಜಟ್ಟಿ > ಕುಸ್ತಿ ಮಾಡುವ ಕಸುಬಿನವನು, ಪೈಲವಾನ. ಈ ಹಳ್ಳಿಯಲ್ಲಿ ಹೆಚ್ಚಾಗಿ ಕುಸ್ತಿಪಟುಗಳು ಕಂಡು ಬಂದಿರಬೇಕು. ಆದ್ದರಿಂದ ದಟ್ಟುಗಿ > ಜೆಟ್ಟಗಿ ಎಂದಾಗಿದೆ. (ಸಂಕನಿ, ಪು–೫೮೩–೪೬೦)

೩೯. ಝುಳಕಿ > ಝುಳಕಿ[೩೯]**(ಜ.ವಾ) :**

'ಝು' ವ್ಯಂಜನಗಳ ಬಳಕೆಯಾಗಿದೆ. ಝುಳ > ಅಕಿ, ಝುಳ > ಪ್ರಕಾಶ > ಕಾಂತಿ > ಶಾಖ > ಉಷ್ಣತೆ ಎಂಬರ್ಥಗಳಿಂದ ಕೂಡಿದೆ. ಈ ಪ್ರದೇಶವು ಬೆಂಕಿಯ ಆಹುತಿಗೆ ಒಳಗಾಗಿರಬೇಕು. ಆದ್ದರಿಂದ 'ಝುಳಕಿ' ಎಂಬ ಗ್ರಾಮವಾಗಿರಬೇಕು.

೪೦. ದವಳಾರ > ಡವಳಾರ[೪೦]**(ವ್ಯ.ವಾ) :**

'ದ' ಕಾರ 'ಡ' ಕಾರವಾಗಿ ಬದಲಾವಣೆಯಾಗಿದೆ. ದವಳ > ಹಾರ ದವಳಾರ > ಸುಣ್ಣ ಬಳಿದ ಮನೆ ಬಿಳಿಯಹಾರ , ದವಳೆದ > ಹಾರ ವಜ್ರದ ಹಾರ ಹೀಗೆ ಒಡವೆ ಅಲಂಕಾರಿಕ ವಸ್ತುಗಳ ಮೂಲಕ ಕೇಳುವಂತಹದ್ದು 'ದವಳಾರ'ವಾಗಿದೆ.

೪೧. ಡೋಣೂರು > ಡೋಣೂರು[೪೧]**(ಜ.ವಾ) :**

ಡೋಣ > ಊರು ಇದೊಂದು ಜನಾಂಗ ಸೂಚಕವಾಗಿ ಕಂಡು ಬರುತ್ತದೆ. ಡೋಣಿ– ಬೇದಿಸು, ಇರಿ, ವಂಚಿಸು, ಮೋಸಗೊಳಿಸು, ದಿನ್ನೆ ಅಥವಾ ಗುಡ್ಡದ ಮೇಲಿನ ಸ್ವಾಭಾವಿಕವಾದ ನೀರಿನ ತಗ್ಗು, ದೋಣಿ– ಕೊಳ, ಹಳ್ಳ, ತಗ್ಗು, ಬತ್ತಳಿಕೆ, ಡೂಣೀರ, ಊರು, ನೆಲಸು, ನೆಲೆಯಾಗಿ ನಿಲ್ಲು, ಭದ್ರವಾಗಿ ನಿಲ್ಲಿಸು.

೪೨. ತದ್ದೆವಾಡಿ > ತದ್ದೆ > ಐ > ವಾಡಿ : ತದ್ದೆವಾಡಿ[೪೨] **:**

'ದ' ಕಾರವು 'ದೆ' ಕಾರವಾಗಿದೆ. 'ಐ' ಸ್ವರಾಕ್ಷರವು ಆದೇಶವಾಗಿ ಬಂದಿದೆ. ತದೆ > ಹೊಡೆ ಎಂಬರ್ಥವಿದೆ. ವಾಡಿ > ಊರು, ಹಳ್ಳಿ, ಗ್ರಾಮ, ದನ ಮುಂತಾದವನ್ನು ಕಟ್ಟುವ ಸ್ಥಳ ಎಂಬರ್ಥವನ್ನು ಹೊಂದಿದೆ. (ಸಂಕನಿ, ಪು–೧೧೪)

೪೩. ತೆನಿಹಳ್ಳಿ > ತೆನಿ > ಇ > ಹಳ್ಳಿ : ತೆನಿಹಳ್ಳಿ[೪೩]**(ಸ.ಸ್ಯಾ) :**

ತೆನೆ > ಎ > ಕಾರವು ಲೋಪವಾಗುತ್ತದೆ. ತೆನಿ > ಧಾನ್ಯದ ಹೊಡೆ. ಕದಿರು ಕೋಟೆಯ ಮೇಲ್ಭಾಗ. ಬಸಿರು. ಹಳ್ಳಿ > ಚಿಕ್ಕ ಊರು : ಗ್ರಾಮ. ಈ ಹಳ್ಳಿಯಲ್ಲಿ ಹೆಚ್ಚಾಗಿ ಧಾನ್ಯ ಬೆಳೆಗಳ ಬೇಸಾಯ ಪದ್ಧತಿಯು ಹೆಚ್ಚಾಗಿರಬೇಕು. ಆದ್ದರಿಂದ ತೆನಿಹಳ್ಳಿ ಎಂದಾಗಿದೆ. (ಸಂಕನಿ, ಪು–೫೩೬)

೪೪. ತಾವರಖೇಡ > ತಾವರಖೇಡ್[೪೪](ಸ.ಸ) :

ತಾವರೆ (ನಾ): ಒಂದು ಜಲ ಪುಷ್ಪ ಕಮಲ. ಖೇಡ (ನಾ): ೧. ಹಳ್ಳಿ, ಗ್ರಾಮ ೨. ಹೆದರಿದವನು : ಭಯಗ್ರಸ್ಥ. ತಾವರೆ ಹೂವಿನಿಂದ ಈ ಪ್ರದೇಶಕ್ಕೆ ಈ ಹೆಸರು ಬಂದಿದೆ.

೪೫. ತೋಂಟಾಪುರ > ತೋಂಟಾಪುರ[೪೫](ವ.ವಾ) :

ತೋಂಟ (ನಾ): ಹೊನ್ನ ಹಣ್ಣು, ತರಕಾರಿ ಅಥವಾ, ತೆಂಗು, ಅಡಕೆ, ಬಾಳೆ, ಮಾವು ಮೊದಲಾದವುಗಳನ್ನೇ ಬೆಳೆಯುವ ಭೂಮಿ. ತೋಂಟ > ಪುರ . ಪುರ : ೧. ಹೊನಲು ೨. ಪ್ರವಾಹ : ಕೋಟೆ, ದುರ್ಗ ೩. ಪಟ್ಟಣ ನಗರ ೪. ದೇಹ, ಶರೀರ, ಅತ್ಯುನ್ನತವಾದ ಬೆಳೆಯನ್ನು ಬೆಳೆಯುವಂತಹ ವಿವಿಧ ಬೆಳೆಗಳ ಸಮೃದ್ದಿಯ ಪ್ರದೇಶವಾಗಿರಬೇಕು. ಆದ್ದರಿಂದ ತೋಟಾಂಪುರ ಎಂದಾಗಿದೆ. (ಸಂಕನಿ, ಪು–೭೮೧

೪೬. ಕಪಡಿ > ತಂಗಡಗಿ[೪೬](ಸ.ಸಾ) :

'ಡ' ಕಾರಕ್ಕೆ 'ಟ' ಕಾರದ ಬದಲಾವಣೆಯಾಗಿದೆ. ಕಪಡಿ > ಕಪಟಿ =(ನಾ) ೧. ವಂಚನೆ, ಮೋಸ ೨. ಬಾವಲಿ ೩. ವಸ್ತ್ರ, ಬಟ್ಟೆ ಎಂಬ ಅರ್ಥಗಳಿವೆ. ತಂಗಡಿ : ಆವರಿಕೆ, ಹೊನ್ನಾವರಿಕೆಗಿಂತ ಈ ಗಿಡವು ಹೆಚ್ಚಾಗಿ ಈ ಪ್ರದೇಶದಲ್ಲಿ ಬೆಳೆಯುತ್ತಿರಬೇಕು. ಆದ್ದರಿಂದ ಈ ಹೆಸರು ಬಂದಿದೆ. (ಸಂಕನಿ, ಪು–೨೨೪)

೪೭. ತಂಬೆಧಡೆ > ತಂಬೆದಲ್ದಿ > ತಮ್ಮದಡ್ಡಿ[೪೭](ಸ.ಸೂ) :

ತಂಬೆ > ದಡೆ , ತಮ್ಮ: (ನಾ) ಕಿರಿಯ ಸಹೋದರ, ಅನುಜ, ದಡ್ಡಿ > ಹೆಬ್ಬಾಗಲಿನ ಪಕ್ಕದ ಸಣ್ಣ ಬಾಗಿಲು ಎಂಬರ್ಥವಿದೆ. (ಕ. ರ. ಕೊ. ಪು– ೧೧೭)

೪೮. ತಾಳಿಯಕೋಟೆ > ತಾಳಿಕೋಟೆ[೪೮](ಸ್ಥ.ವಾ) :

ತಾಳಿ > ಕೋಟೆ 'ಇ' ಕಾರ ಆದೇಶವಾಗಿ ಬಂದಿದೆ. ತಾಳಿ > ತಾಳೆ – ಒಜಿದು ಬಗೆಯ ಮರ. ಕೋಟೆ > ದುರ್ಗಾ ಸೈನಿಕ ಕೇಂದ್ರ ಎಂದಾಗಿದೆ. ತಾಳೆ ಮರಗಳಿದ್ದು ಕೋಟೆ ಕಟ್ಟಿರುವುದರಿಂದ ತಾಳಿಕೋಟೆಯಾಗಿದೆ.

೪೯. ತುಂಬಿಗಿ > ತುಂಬಿಗೆ > ತುಂಬಗಿ[೪೯](ಸ.ವಾ) :

ತುಂಬಿ > ಇಗೆ : ಈ ಕಾರವು ಅದೇ ಕಾರವಾಗಿ ಬಂದಿದೆ. ತುಂಬಿ > ದುಂಬಿ : ಭ್ರಮರ. ಬಿಳಿಯ ಸಣ್ಣ ಹೂವುಗಳನ್ನು ಬಿಡುವ ಒಂದು ಬಗೆಯ ಗಿಡ ಮತ್ತು ಅದರ ಹೂವು ಎಂದರ್ಥವಿದೆ. ತುಂಬೆ ಗಿಡಗಳು ಹೆಚ್ಚಾಗಿರುವುದರಿಂದ ತುಂಬಿಗಿ ಎಂದಾಗಿದೆ. (ಸಂಕನಿ, ಪು– ೫೪೭)

೫೦. ಗಂಡೆಗನೂರು > ದೇವರ ಗೆಣ್ಣೂರು[೫೦](ದೈ.ವಾ) :

'ದೇವರ > ಕಣ್ಣುರು' : 'ಗೆ' ಕಾರವು 'ಕ' ಕಾರವಾಗಿ ಬದಲಾವಣೆ ಹೊಂದುತ್ತದೆ. ದೇವರಿರುವಂತಹ ಮಧ್ಯ ಸ್ಥಳಕ್ಕೆ ದೇವರ ಗೆಣ್ಣೂರು ಎಂದಾಗಿದೆ. (ಸಂಕನಿ, ಪು– ೬೧೧)

೫೧. ದೇವಣಗಾವೆ > ದೇವಣಗಾಲು > ದೇವಣಗಾಂವ್[೫೧](ದೈ.ವಾ) :

ದೇವಣ > ಗಾಂವ್ ಕಾಲಕ್ಕೆ ತಕ್ಕಂತೆ ಬದಲಾವಣೆಯನ್ನು ಹೊಂದುತ್ತಾ ಬಂದಿದೆ. 'ವ' ಕಾರವು 'ಉ' ಕಾರವಾಗಿದೆ. ಪ್ರಸ್ತುತವಾಗಿ ಗಾಂವ್ > ಹಳ್ಳಿ, ಗ್ರಾಮ ಎಂದಾಗಿದೆ. ಸಾಮಾನ್ಯ ಹಳ್ಳಿ ಪ್ರದೇಶದಲ್ಲಿ ವಿಶೇಷವಾಗಿ ಜಾತ್ರೆ – ಹಬ್ಬಗಳ ಸಂದರ್ಭದಲ್ಲಿ ದೇವರ ಸಂಮುಖದಲ್ಲಿ ಗಾವುನ್ನು ಜಿಗಿಯುವುದು ಅಥವಾ ಪ್ರಾಣಿ ಬಲಿಕೊಡುವುದು ಎಂದರ್ಥ.(ಸಂಕನಿ, ಪು–೩೭೫)

೫೨.ನಾವಿದಿಗೆ > ದೇವರನಾವದಗಿ[೫೨](ದೈ.ವಾ) :

ದೇವರ > ನಾವದಗಿ = ನಾಗಂದಿಗೆ ಕಲಾನಂತರದಲ್ಲಿ ನಾವಿದಿಗೆಯು > ದೇವರನಾವದಿಗಿಯಾಗಿ ಬದಲಾವಣೆ ಹೊಂದಿದೆ. ಸಾಮಾನ್ಯವಾಗಿ ದೇವರಿಗೆ ಮೀಸಲಾಗಿರುವಂತಹ ಎಲ್ಲಾ ಸಾಮಾನುಗಳನ್ನು ಇಡಲು ಗೋಡೆಗಳಿಗೆ ಎತ್ತರದಲ್ಲಿ ಜೋಡಿಸಿರುವ ಮರದ ಹಲಗೆ , ಬಡು ಎಂದರ್ಥ. ದೇವರು : ಪರಮಾತ್ಮ, ಭಗವಂತ ಆದ್ದರಿಂದ ದೇವನಾವದಗಿ ಎಂದಾಗಿದೆ. (ಸಂಕನಿ, ಪು– ೬೧೧)

೫೩. ದೇವಪುರ > ದೇವೂರು[೫೩](ದೈ.ವಾ) :

ದೇವ > ಪುರ ಪೂರ್ವ ಮತ್ತು ಉತ್ತರ ಪದದಲ್ಲಿ 'ಅ' ಕಾರವು ಆದೇಶವಾಗಿ ಬಂದಿದೆ. ದೇವ > ದೇವರು, ಭಗವಂತ. ಪುರ : ಒನಲು, ಪ್ರವಾಹ ೨. ಕೋಟೆ : ದುರ್ಗ, ಪಟ್ಟಣ, ನಗರ ಎಂದರ್ಥ. ದೇವರಿರುವಂತಹ ಕೋಟೆ ಅಥವಾ ದುರ್ಗ ಇದಕ್ಕೆ ದೇವಾಪುರವಾಗಿದೆ. (ಸಂಕನಿ, ಪು– ೭೮೧೧)

೫೪. ದಿಂಡಾಪುರ > ದಿಂಡಾ + ಪುರ[೫೪](ವ.ಸೂ) :

ದಿಂಡಾವಾರ > ದಿಡಾಪುರ, 'ವಾ' ಕಾರವು 'ಪ' ಕಾರವಾಗಿ ಬದಲಾವಣೆ ಹೊಂದಿದೆ. ತೆರಿಗೆಯನ್ನು ಸಮರ್ಥವಾಗಿ ಶಕ್ತವಾಗಿ ಕೊಡುವಂತಹ ಒಂದು ಸ್ಥಳ ದಿಂಡಾಪುರವಾಗಿದೆ. (ಸಂಕನಿ, ಪು– ೨೮೩)

೫೫. ನಿಡುವಣೆ > ನಿಡೋಣಿ[೫೫](ಜ.ವಾ) :

ನಿಡು > ವಣೆ ಪೂರ್ವ ಪದದಲ್ಲಿ 'ಉ' ಕಾರ ಆದೇಶವಾಗಿ ಬಂದಿದೆ. ಉತ್ತರ ಪದದಲ್ಲಿ ಒತ್ತಾಕ್ಷರಗಳ ಬಳಕೆಯಾಗಿದೆ. ಗೊಮ್ಮಟೇಶ್ವರ ವಿಗ್ರಹವಿರುವಂತಹ ಸ್ಥಳ ನಿಡೋಣಿ ಎಂದಾಗಿದೆ. (ಸಂಕನಿ, ಪು– ೧೧೩೨)

೫೬. ನಂದುರಗೆ > ನಂದರ್ಗಿ[೫೬]**(ವ್ಯ.ವಾ) :**

ನಂದು > ಉರಗಿ 'ಉ' ಕಾರ ಆದೇಶವಾಗಿ ಬಂದಿದೆ. ಹೆಣ್ಣು ಹಾವು ನಾಶವಾಗಿರುವಂತಹದ್ದು ಒಂದಲಗನ ಗಿಡ ನಾಶವಾಗಿರುವಂತಹದ್ದು ಆದ್ದರಿಂದ ನಂದರ್ಗಿ ಎಂದಾಗಿದೆ. (ಸಂಕನಿ, ಪು-೬೩೧-೧೫೮)

೫೭. ನದರ > ನಾಡು > ನಾದ[೫೭]**(ಶಿ.ವಾ) ;**

ನಾದ (ಕುರ್ದ್) ಇಲ್ಲಿ ವ್ಯಂಜನಾಕ್ಷರವು ಆದೇಶವಾಗಿ ಬಂದಿದೆ. ನಾದ > ಒಂದು ಬಗೆಯ ಸಸ್ಯ ವನಸ್ಪತಿ ಎಂದರ್ಥ ಜನವಸತಿಯುಳ್ಳ ಪ್ರದೇಶ, ೨. ದೇಶ, ಪ್ರಾಂತ್ಯ, ರಾಜ್ಯ (ಸಂಕನಿ, ಪು-೬೪೬)

೫೮. ನಿಂಬಹಳ್ಳ > ನಿಂಬಾಳ್[೫೮]**(ವ್ಯ.ಸೂ) :**

ನಿಂಬ + ಹಳ್ಳಿ : ನಿಂಬಹಳ್ಳಿ, ನಿಂಬ ಒಂದು ಬಗೆಯ ಮರ, ಬೇವು ೨. ಮಂದಾರವೃಕ್ಷ. ಹಳ್ಳ > ನೀರು ನಿಲ್ಲುವ ಸ್ಥಳ ಅಥವಾ ಕಟ್ಟೆ ಎಂದರ್ಥ. ಮಂದಾರ ವೃಕ್ಷ ಮರಗಳು ಇರುವಂತಹ ಸ್ಥಳಕ್ಕೆ 'ನಿಂಬಾಳ್' ಎನ್ನುವರು. 'ಳ್' ಎಂಬ ವ್ಯಂಜನ ಪದವು ಉತ್ತರ ಪದದ ಕೊನೆಯಲ್ಲಿ ಬಂದಿದೆ.

೫೯. ನದಿಹಾಳ > ನದಿಹಾಳ[೫೯]**(ಜ.ವಾ) :**

ನದಿ > ಹಾಳ : ನದಿಹಾಳ. ನದಿ > ಹೊಳೆ ತೊರೆ, ಹಾಳ > ಸಾಗುವಳಿ ಮಾಡಬೇಕಾದ ಜಮೀನು, ನದಿ ಹತ್ತಿರವಿರುವ ಊರು ನದಿಹಾಳ ಎಂದಾಗಿದೆ. (ಸಂಕನಿ ಪು- ೧೩೮೫)

೬೦. ನಾಗವಾಪ > ನಾಗಾವಿ ಬಿ.ಕೆ[೬೦]**(ಜ.ಸೂ) :**

ನಾಗ > ವಾಪ, ವಾಪಿ > ಭಾವಿ ೨. ಕೂರಿಗೆ, ೩. ಕುಂಟೆ, ನಾಗ > ಮುಖಂಡ, ಪ್ರಮುಖ ವ್ಯಕ್ತಿ , ನಾಗ ಜನಾಂಗದ ಮುಖಂಡ ಮುಖ್ಯಸ್ಥ ಎಂದಾಗಿದೆ. ಆದ್ದರಿಂದ ನಾಗವಾಪ > ನಾಗಾವಿ ಎಂದಾಗಿದೆ. (ಸಂಕನಿ, ಪು-೧೧೪೨ - ೬೪೩)

೬೧. ನರಸಲಗೆ > ನರಸಲಗಿ[೬೧]**(ಸ್ಥ.ವಾ) :**

ನರ > ಸಲಿಗಿ : ನರಸಲಗೆ. 'ಗೆ' ಕಾರವು 'ಗಿ' ಕಾರವಾಗಿ ಬದಲಾಗಿದೆ. ಪೂರ್ವ ಪದದಲ್ಲಿ 'ಅ' ಕಾರವು ಉತ್ತರ ಪದದಲ್ಲಿ 'ಇ' ಕಾರವು ಆದೇಶವಾಗಿದೆ. ಒಬ್ಬ ಋಷಿಗೆ ಪ್ರೀತಿಯಿಂದ ಕೊಟ್ಟಿರುವ ಹೆಸರು 'ನರಸಲಗೆ' ಎಂದು ಕರೆಯುವರು. (ಸಂಕನಿ, ಪು- ೬೩೮-೧೨೬೯)

೬೨. ನಾಗರಬೆಟ್ಟ > ನಾಗರಬೆಟ್ಟ[೬೨]**(ಜ.ಸೂ) :**

ನಾಗರ > ಬೆಟ್ಟ- 'ಅ' ಕಾರವು ಆದೇಶವಾಗಿದೆ. ನಾಗರ > ನಾಗರ ಹಾವು ದೇವ ನಾಗರಿ ಲಿಪಿ, ವಾಸ್ತು ಶಿಲ್ಪದೊಂದು ವಿಧಾನ. ಬೆಟ್ಟ > ಗಿರಿ, ಪರ್ವತ, ಕಷ್ಟ ಸಾಧ್ಯವಾದುದು,

ದುರಸ್ತವಾದದು ಎಂದರ್ಥ. ನಾಗರ ಶೀಲೆಯಿರುವಂತಹ ಬೆಟ್ಟ ನಾಗರ ಬೆಟ್ಟವಾಗಿದೆ. (ಸಂಕನಿ, ಪು- ೬೪೪)

೬೩. ನಗಹುರ > ನಾಗೂರು[೬೩](ಜ.ಸೂ) :

ನಾಗ > ಹುರ: ನಾಗ > ಜನಾಂಗ ಸೂಚಕವಾಗಿ ಕಂಡು ಬರುತ್ತದೆ. ಹುರ > ಹಾವು , ವಿಷಜಂತು. ಈ ಜನಾಂಗದಲ್ಲಿ ಹಾವು ಹಿಡಿಯುವುದು ಇವರ ವೃತ್ತಿಯಾಗಿರಬೇಕು. ಆದ್ದರಿಂ ನಾಗೂರು ಎಂದಾಗಿದೆ.

೬೪. ನಾಲತ್‌ವಾಡ > ನಾಲತ್‌ವಾಡ[೬೪](ವ.ವಾ)

ನಾಲತ್ + ವಾಡ, 'ತ್' ವ್ಯಂಜನ ಪದಗಳು ಬಳಕೆಯಾಗುತ್ತದೆ. ನಾಲತ್ > ಸಂಖ್ಯೆಯನ್ನು ಸೂಚಿಸುವಂತಹದ್ದು , ನಾಲತ್ > ನಲವತ್ತು (೪೦) ೪೦ ಮನೆಗಳಿರುವಂತಹ ಗ್ರಾಮ ಆದ್ದರಿಂದ ನಾಲತ್ ವಾಡ ಎಮದು ಕರೆಯುವರು.

೬೫. ಪಡ(ತಿ)ಗನೂರು > ಪಡಗಾನೂರು[೬೫] (ವ.ವಾ) :

ಪಡತಿಗಾ > ಉರು 'ಉ' ಕಾರದ ಬದಲಿಗೆ 'ನೂ' ಕಾರ ಆದೇಶವಾಗಿ ಬಂದಿದೆ.

ಪಾತ್ರೆ, ಪಗಡವನ್ನು ತಯಾರು ಮಾಡುವಂತಹ ವ್ಯಕ್ತಿ. ಮಡಿಕೆ, ಕುಡಿಕೆಗಳನ್ನು ತಯಾರು ಮಾಡುವವನೆ ಪಡಿಗ. ಆದ್ದರಿಂದ ಪಡ(ತಿ)ಗಾನೂರು ಎಂದಾಗಿದೆ. (ಸಂಕನಿ, ಪು- ೭೧೨)

೬೬. ಪಡಿಯಕನೂರು (ನೂಲ) > ಫಡೆಕನೂರು[೬೬](ವ.ವಾ) :

ಪಡಿಯಕ > ಉರು. 'ಉ' ಸ್ವರವು ಲೋಪವಾಗುತ್ತದೆ. ಈ ಸ್ಥಳವು ಹೆಣ್ಣನ್ನು ಸೂಚಿಸುತ್ತದೆ. ಮಣ್ಣಿನ ಸಾಮಾನುಗಳನ್ನು ತಯಾರು ಮಾಡುವಂತಹವರು ಆದ್ದರಿಂದ ಪಡಿಯಕನೂರು ಎಂದಾಗಿದೆ. (ಸಂಕನಿ, ಪು- ೭೧೨)

೬೭. ಬಿಬ್ಬುಲೇಶ್ವರ > ಬಿಬಲೇಶ್ವರ [೬೭](ದೈ.ವಾ) :

ಬಬ್ಬುಲ > ಈಶ್ವರ. 'ಬಾ' > 'ಬು' ಧೀರ್ಘಕ್ಷರಗಳ ಬಳಕೆಯಾಗಿದೆ. 'ಈ' ಸ್ವರಾಕ್ಷರವು ಆದೇಶವಾಗಿ ಬಂದಿದೆ. ಬೆಟ್ಟದ ಪಕ್ಕದಲ್ಲಿರುವಂತಹ ಈಶ್ವರ ದೇವಾಲಯಕ್ಕೆ ಬಬ್ಬುಲೇಶ್ವರ ಎನ್ನುವರು (ಸಂಕನಿ, ಪು- ೮೫೮)

೬೮. ಬಾಗವಾಡಿ > ಬಾಗೇವಾಡಿ[೬೮](ವಾ.ಸು) :

ಬಾಗಿನ > ವಾಡಿ. 'ಸ' ಸ್ವರಾಕ್ಷರವು ಆದೇಶವಾಗಿ ಬಂದಿದೆ. ಶುಭ ಸಂದರ್ಭಗಳಲ್ಲಿ ಬ್ರಾಹ್ಮಣರು ಹೆಣ್ಣು ಮಕ್ಕಳಿಗೆ ಕೊಡುವಂತಹ ಕಾಣಿಕೆ ಅದಕ್ಕೆ ಬಾಗಿನ > ಬಾಗೇವಾಡಿ ಎಂದಾಗಿದೆ. (ಸಂಕನಿ. ಪು- ೮೭೨)

೬೯. ಬೀಜರಗೀ > ಬೀಜ > ಅರಗಿ[೬೯](ಸ್ಥ.ವಾ) :

ಬೀಜ > ದಾನ್ಯದ ಕಾಳು, ದಾಳಿಂಬೆ ಮೊದಲಾದ ಹಣ್ಣುಗಳ ಕಾಳು, ಉತ್ಪತ್ತಿ ಸ್ಥಾನ, ಮೂಲ. ಅರಗು > ಜೀರ್ಣವಾಗು, ಪಚನವಾಗು, ವಿಶೇಷವಾಗಿ ಕಾಳೀನ ಬೆಳೆ ಹೆಚ್ಚಾಗಿ ಬೆಳೆಯುತ್ತಿರಬೇಕು. ಆದ್ದರಿಂದ ಬೀಜರಗೀ ಎಂದಾಗಿದೆ. (ಸಂಕನಿ, ಪು- ೬೨- ೮೯೭)

೭೦. ಬೀದಿ(ಕ್ಕು)ನ್ದೆಯ > ಬಿದರಕುಂದಿ[೭೦](ಸ.ವಾ) :

ಬಿದರ > ಕುಂದಿ. ಬಿದಿರು > ಬೊಂಬಿನ ಮರ ಮತ್ತು ಬೊಂಬು ಎಂದಾಗಿದೆ.

ಕುಂದಿ > ಬೆಟ್ಟ, ಗುಡ್ಡ ಎಂದರ್ಥ. ಹೆಚ್ಚಾಗಿ ಬಿದಿರು ಬೆಳೆಯುವ ಬೆಟ್ಟ, ಗುಡ್ಡಕ್ಕೆ ಬಿದರ ಕುಂದಿ ಎನ್ನುವರು.

೭೧. ಬುಯ್ಯೊರ ಭೂಯಾರ್[೭೧](ವ.ವಾ) :

ಬೂಯ > ಅಯ್ಯ > ಊರ, ಬೋಯ > ಬೆಸ್ತ, ಮೀನುಗಾರ, ಸೇವೆ ಮಾಡುವವನು, ಭೂಮಿಯ ಒಡೆಯನಾದುದರಿಂದ ಬುಯ್ಯೊರ ಎಂದಾಗಿದೆ. (ಸಂಕನಿ, ಪು- ೬೨)

೭೨. ಮಣಿ(ಯಾ)ರ > ಮಣ್ಣೂರು[೭೨](ವ್ಯ.ಸೂ) :

ಮಣಿ > ಊರು. ಶಾಸನದಲ್ಲಿ 'ಯೊ' ಕಾರವು ಆದೇಶವಾಗಿ ಬಂದಿದೆ. ಪ್ರಸ್ತುತ ಕಾಲಮಾನದಲ್ಲಿ 'ಣ' ಕಾರವು ಆದೇಶವಾಗಿ ಬಂದಿದೆ. ಕೃಷಿ ಕೆಲಸ ಮಾಡುವವ, ಮಣ್ಣಿನ ಮಾಡುವವರಿಗೆ ಕೃಷಿ ವ್ಯಕ್ತಿ, ಮಣ್ಣಿನ ಮನುಷ್ಯ ಎಂದಾಗಿದೆ. ಆದ್ದರಿಂದ ಮಣ್ಣೂರು ಎಂದಾಗಿದೆ. (ಸಂಕನಿ, ಪು- ೯೬೬)

೭೩. ಮನಗೋಳಿ > ಮನ > ಗೋಳಿ[೭೩] :

ಮನ > ಮನಸ್ಸು, ಅಂತರಂಗ, ಚಿತ್ತ. ಗೋಳಿ > ಆಲದ ಜಾತಿಗೆ ಸೇರಿದ ಒಂದು ಬಗೆಯ ಮರ. ಆಲದ ಮರಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಮನಗೋಳಿ ಎಂದಾಗಿದೆ. ಗೋಣಿ ಸೊಪ್ಪನ್ನು ಇಷ್ಟಪಡುವಂತಹ ವರ್ಗ ಆದ್ದರಿಂದ ಇದಕ್ಕೆ ಮನಗೋಳಿ ಎಂದು ಕರೆಯುವರು.

ಅಡಿಟಿಪ್ಪಣೆ

೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೧೦ ವಿಜಯಪುರ ಜಿಲ್ಲೆ. ವಿಜಯಪುರ ಶಾಸನ ಸಂಖ್ಯೆ -೫೩ (೧೨೦೭) ಶಾಸನ ಕಾಲ

೨. ಅದೇ ಇಂಡಿ ತಾಲ್ಲೂಕು -೧ -೫ - ೧೩೫೧

೩. ಅದೇ ಇಂಡಿ - ೬ (೧೩ ನೇ ಶತಮಾನ)

೪. ಅದೇ ಇಂಡಿ - ೮

೫. ಅದೇ ಸಿಂದಗಿ – ೩೩ – ೧೦೮೬

೬. ಅದೇ ಸಿಂದಗಿ – ೧೦೪ – ೧೦೬

೭. ಅದೇ ಮುದ್ದೇಬಿಹಾಳ – ೨೪ – ೧೭ ನೇ ಶತಮಾನ

೮. ಅದೇ ಮುದ್ದೇಬಿಹಾಳ – ೧೩

೯. ಅದೇ ಬಾಗೇವಾಡಿ – ೪ – ೧೧೬೦

೧೦. ಅದೇ ಮುದ್ದೇಬಿಹಾಳ – ೩೫

೧೧. ಅದೇ ಇಂಡಿ – ೧೦– ೧೨

೧೨. ಅದೇ ಮುದ್ದೇಬಿಹಾಳ – ೭೦

೧೩. ಅದೇ ವಿಜಯಪುರ – ೫೮ – ೧೧೩೯

೧೪. ಅದೇ ಇಂಡಿ – ೧೩

೧೫. ಅದೇ ಇಂಡಿ – ೭೭ – ೧೧೯೦

೧೬. ಅದೇ ಸಿಂದಗಿ – ೫೯ – ೧೦೭೦

೧೭. ಅದೇ ಸಿಂದಗಿ – ೩೯ – ೧೨೦೪.

೧೮. ಅದೇ ಸಿಂದಗಿ – ೧೫ – ೧೧೯೪

೧೯. ಅದೇ ಸಿಂದಗಿ – ೮೯ – ೧೧ನೇ ಶತಮಾನ

೨೦. ಅದೇ ಸಿಂದಗಿ – ೪೬ – ೧೧೯೨

೨೧. ಅದೇ ಸಿಂದಗಿ – ೯೮ – ೧೧೬೬

೨೨. ಅದೇ ಸಿಂದಗಿ – ೮೩ – ೧೨೧೧

೨೩. ಅದೇ ಬಸವನ ಬಾಗೇವಾಡಿ – ೭೪

೨೪. ಅದೇ ಮುದ್ದೇಬಿಹಾಳ – ೩ – ೧೧ ನೇ ಶತಮಾನ

೨೫. ಅದೇ ಮುದ್ದೇಬಿಹಾಳ – ೯ – ೧೨ ನೇ ಶತಮಾನ

೨೬. ಅದೇ ಇಂಡಿ – ೧೬

೨೭. ಅದೇ ಸಿಂದಗಿ – ೧೧ – ೧೦೨೭

೨೮. ಅದೇ ಮುದ್ದೇಬಿಹಾಳ – ೨೫ –೨೭

೨೯. ಅದೇ ಮುದ್ದೇಬಿಹಾಳ – ೩೪

೩೦. ಅದೇ ಮುದ್ದೇಬಿಹಾಳ – ೪೭

೩೧. ಅದೇ ಇಂಡಿ –೧೮ – ೧೦೬೭

೩೨. ಅದೇ ಇಂಡಿ – ೨೨ – ೧೦೩೭

೩೩. ಅದೇ ಇಂಡಿ – ೨೩ – ೧೧೯೦

೩೪. ಅದೇ ಸಿಂದಗಿ – ೨೦– ೧೧ ನೇಶತಮಾನ

೩೫. ಅದೇ ಸಿಂದಗಿ – ೨೨ – ೨೩

೩೬. ಅದೇ ವಿಜಯಪುರ – ೬೧

೩೭. ಅದೇ ಸಿಂದಗಿ – ೮೨

೩೮. ಅದೇ ಮುದ್ದೇಬಿಹಾಳ – ೨೧ – ೧೨೫೭

೩೯. ಅದೇ ಇಂಡಿ – ೨೪

೪೦. ಅದೇ ಸಿಂದಗಿ – ೧೦೭

೪೧. ಅದೇ ಬಾಗೇವಾಡಿ – ೨೮ – ೨೯

೪೨. ಅದೇ ಇಂಡಿ – ೩೦

೪೩. ಅದೇ ಇಂಡಿ – ೩೨

೪೪. ಅದೇ ಸಿಂದಗಿ – ೩೩

೪೫. ಅದೇ ಸಿಂದಗಿ – ೬೯ – ೭೦

೪೬. ಅದೇ ಮುದ್ದೇಬಿಹಾಳ – ೧೪

೪೭. ಅದೇ ಮುದ್ದೇಬಿಹಾಳ – ೩೮ – ೩೯

೪೮. ಅದೇ ಮುದ್ದೇಬಿಹಾಳ – ೫೨ – ೧೧೨೫

೪೯. ಅದೇ ಮುದ್ದೇಬಿಹಾಳ – ೪೦ – ೪೩

೫೦. ಅದೇ ವಿಜಯಪುರ – ೭೭ – ೧೦೮೯

೫೧. ಅದೇ ಸಿಂದಗಿ – ೩೪

೫೨. ಅದೇ ಸಿಂದಗಿ – ೪೨ – ೧೧೬೮

೫೩. ಅದೇ ಸಿಂದಗಿ – ೭೮ – ೧೧೯೬

೫೪. ಅದೇ ಬಾಗೇವಾಡಿ – ೧೩ (೧೧೧೨)

೫೫. ಅದೇ ವಿಜಯಪುರ – ೭೮ – ೮೧

೫೬. ಅದೇ ಇಂಡಿ – ೩೩

೫೭. ಅದೇ ಇಂಡಿ – ೩೪ – ೩೬

೫೮. ಅದೇ ಇಂಡಿ – ೩೯ (೧೧೭೪)

೫೯. ಅದೇ ಬಾಗವಾಡಿ – ೭೫

೬೦. ಅದೇ ಸಿಂದಗಿ – ೮– ೯

೬೧. ಅದೇ ಬಾಗೇವಾಡಿ – ೭೨

೬೨. ಅದೇ ಮುದ್ದೇಬಿಹಾಳ – ೬೩

೬೩. ಅದೇ ಮುದ್ದೇಬಿಹಾಳ – ೫೬

೬೪. ಅದೇ ಮುದ್ದೇಬಿಹಾಳ – ೬೫– ೬೬

೬೫. ಅದೇ ಮುದ್ದೇಬಿಹಾಳ – ೩೩ (೧೨೫೭)

೬೬. ಅದೇ ಸಿಂದಗಿ – ೭೪ (೧೨೦೮)

೬೭. ಅದೇ ವಿಜಯಪುರ – ೬೫ (೧೨ ನೇ ಶತ)

೬೮. ಅದೇ ಬಾಗೇವಾಡಿ – ೨೧ (೧೧೭೦)

೬೯. ಅದೇ ವಿಜಯಪುರ – ೫೬

೭೦. ಅದೇ ಮುದ್ದೇಬಿಹಾಳ –೧

೭೧. ಅದೇ ಇಂಡಿ – ೫೧ (೧೧೭೨)

೭೨. ಅದೇ ಇಂಡಿ – ೫೩ (೧೧೩೪)

೭೩. ಅದೇ ಬಾಗೇವಾಡಿ – ೩೧ – ೩೭

ಅಧ್ಯಾಯ ಐದು

ಸಮಾರೋಪ

ಸಮಾರೋಪ

ನಾಮಾಖಿಲಸ್ಯ ವ್ಯವಹಾರ ಹೇತುಃ ಎಂಬ ಮಾತೊಂದಿದೆ. ಎಲ್ಲ ವ್ಯವಹಾರಗಳಿಗೂ ಹೆಸರು ಮೂಲ ಕಾರಣವಾಗಿರುತ್ತದೆಂಬುದು ಅದರರ್ಥ. ಹೌದು ಹೆಸರಿನ ಬಲವೇ ಅಂತಹದು. ಆ ಹೆಸರು ವ್ಯಕ್ತಿಯದ್ದಾಗಿರಬಹುದು ಇಲ್ಲವೆ ಆ ವ್ಯಕ್ತಿಯು ನೆಲೆಸಿದ್ದ ತಾಣದ್ದಾಗಿರಬಹುದು. ಜೀವನದುದ್ದಕ್ಕೂ ಹೆಸರು ನಿರ್ವಹಿಸುವ ಗಮನಾರ್ಹ ಪಾತ್ರವನ್ನು ಲಕ್ಷದಲ್ಲಿರಿಸಿಕೊಂಡೇ ಬೃಹಸ್ಪತಿ ಮೇಲ್ಕಂಡ ಉದ್ಗಾರವನ್ನು ತೆಗೆದಿರಬೇಕು. ಸ್ಥಳನಾಮಗಳ ಅಧ್ಯಯನದ ಉದ್ದೇಶವನ್ನು ಹೊಂದಿರುವ ಈ ನಿಬಂಧದ ಮೊದಲ ಅಧ್ಯಾಯದಲ್ಲಿ ಈ ಬಗೆಯ ಅಧ್ಯಯನದ ಮಹತ್ವವನ್ನು ವಿವರಿಸಲಾಗಿದೆ.ಆಯ್ದುಕೊಂಡಿರುವ ಪ್ರಬಂಧದ ವಸ್ತುವಾದ ವಿಜಯಪುರ ತಾಲ್ಲೂಕಿನ ಸ್ಥಳನಾಮಗಳ ಬಗೆಗೆ ಮನದಟ್ಟು ಮಾಡಿಕೊಡಲಾಗಿದೆ.

ಸ್ಥಳನಾಮಗಳಂತಹ ಸಾಂಸ್ಕೃತಿಕ ಪಳೆಯುಳಿಕೆಗಳು ಪರಿಸರದ ಸಂಸ್ಕೃತಿಯ ನಿರ್ವಚನದಲ್ಲಿ ಅಗತ್ಯವಾಗಿ ಬಳಸಿಕೊಳ್ಳಬೇಕಾದ ಸಾಮಗ್ರಿಗಳೆಂಬುದನ್ನು ಇಲ್ಲಿಯವರೆಗಿನ ಅಧ್ಯಯನಗಳಿಂದ ತೋರಿಸಲಾಗಿದೆ. ಮಾನವ ಅಲೆಮಾರಿ ಜೀವನಕ್ಕೆ ವಿದಾಯ ಹೇಳಿ ಸ್ಥಿರವಾಸ ಜೀವನಕ್ಕೆ ಕಾಲಿಟ್ಟಾಗಿನಿಂದ ತಾವು ವಾಸಿಸುತ್ತಿದ್ದ ಪ್ರದೇಶಕ್ಕೆ ಒಂದು ಹೆಸರನ್ನು ಕರೆಯುವ ಪ್ರಯತ್ನ ಮಾಡಿದರು. ತಮ್ಮ ಭದ್ರ ನೆಲೆಯೂರಿಕೆಯ ನಂತರ ಇಟ್ಟ ಹೆಸರುಗಳು ಬೆಟ್ಟ, ಗುಡ್ಡ, ಕಣಿವೆ, ಕಂದರ, ಸರೋವರ ಹೀಗೆ ಪ್ರಾಕೃತಿಕ ಸಂಬಂಧವನ್ನು ಗಾಢವಾಗಿ ಬೆಸೆದುಕೊಂಡಿವೆ. ಪ್ರಕೃತಿಯ ಒಂದೊಂದು ವಸ್ತುವು ಸ್ಥಳನಾಮಗಳಿಗೆ ಪ್ರೇರಣೆ ನೀಡಿರುವುದು ಗಮನಿಸಬೇಕಾದ ಸಂಗತಿ. ಪರಿಸರಕ್ಕೆತಕ್ಕಂತೆ ವೈರುಧ್ಯಗಳೂ ಕಾಣಿಸುತ್ತವೆ. ಹೆಚ್ಚಾಗಿ ಜಲ, ನೆಲ, ಬೆಟ್ಟಗಿಡಮರಗಳು ನಾಮನಿರ್ದೇಶನಕ್ಕೆ ಒಳಗಾಗಿವೆ.

ಸ್ಥಳನಾಮಗಳು ಆರಂಭದಲ್ಲಿ ಭೌಗೋಳಿಕತೆಯ ಪ್ರೇರಣೆ ಪ್ರಭಾವದಿಂದ ನಾಗರೀಕತೆ ಬೆಳೆದಂತೆ ಸಂಸ್ಕೃತಿಮುಖಿಯಾಗಿ ಸ್ಥಿತ್ಯಂತರಕ್ಕೆ ಒಳಪಟ್ಟಿತು. ವ್ಯಕ್ತಿ ಕುಟುಂಬದ ಅತಿಮುಖ್ಯ ಘಟಕ. ಇಂತಹ ವ್ಯಕ್ತಿ ಕೇಂದ್ರಿತ ಕುಟುಂಬಗಳು ಸೇರಿ ಒಂದು ಊರಾಗುತ್ತವೆ. ವಿಶೇಷವಾದ ನೆಲೆನಾಡಿ,

ವ್ಯಕ್ತಿತ್ವವನ್ನು ಹೊಂದಿರುವವರ ಹೆಸರುಗಳೂ ಸ್ಥಳಗಳಾಗಿ ಕರಣಗೊಂಡಿವೆ. ಅಂತೆಯೇ ಗ್ರಾಮ ಸಮಾಜಗಳು ದೇವರು ಧರ್ಮವನ್ನು ತಮ್ಮ ಅವಿಭಾಜ್ಯ ಅಂಗವೆಂದು ನಂಬಿವೆ. ಭಕ್ತಿ ಮತ್ತು ಭಯದ ನೆಲೆಯಲ್ಲಿ ತಮ್ಮ ವಾಸಸ್ಥಳಗಳಿಗೆ ದೈವಗಳ ಹೆಸರನ್ನು ಕರೆದುಕೊಂಡ ಬಗೆಗೆ ಮಾಹಿತಿಯಿದೆ. ಇದರಿಂದ ಶುಭವಾಗುತ್ತದೆಯೆಂಬ ಬಲವಾದ ನಂಬಿಕೆಯ ಗ್ರಾಮ ಸಮಾಜದಲ್ಲಿ ಬೇರೂರಿದೆ. ಒಂದೆಡೆ ನೆಲೆನಿಂತ ಮಾನವ ಕೃಷಿಗೆ ಪಶುಪಾಲನೆಯನ್ನು ತಮ್ಮ ಮುಖ್ಯ ವೃತ್ತಿಯನ್ನಾಗಿಸಿಕೊಂಡರು. ವೃತ್ತಿಯಿಂದಲೇ ತಾವು ವಾಸಿಸುತ್ತಿದ್ದ ಸ್ಥಳಗಳಿಗೆ ನಾಮಕರಣ ಮಾಡಿ ಗುರುತಿಸಿಕೊಂಡರು. ನಂತರ ದಿನಗಳಲ್ಲಿ ವೃತ್ತಿ ಮತ್ತು ಜಾತಿಯಿಂದ ಸ್ಥಳನಾಮಗಳು ನಿರ್ದೇಶಿಸ್ಪಟ್ಟಿವೆ. ಇದರಿಂದ ನಮ್ಮ ನಾಡಿನ ಪ್ರಾಚೀನ ಸಮುದಾಯಗಳ ಸಾಂಸ್ಕೃತಿಕ ಇಂತಹ ಗ್ರಾಮನಾಮಗಳು ಪೂರಕ ಮಾಹಿತಿಯನ್ನು ನೀಡುತ್ತವೆ. ಈ ಪ್ರದೇಶದಲ್ಲಿ ಕಂಡು ಬರುವ ನಾಗರಬೆಟ್ಟ, ನಾಗುರು, ಸಿರೊಳ, ಸರೂರು, ಕೋಳುರು, ಕನ್ನೂಳಿ, ಕೋರವಾರ, ಗೋಲಗೇರಿ, ನಾಗಬಿ, ಬಿ.ಕೆ., ಶಿರಸಗಿ, ಮನಗೋಳಿ, ಡೋಣುರು ಎಂಬಂತಹ ಜನಾಂಗಗಳ ಈ ಭಾಗದಲ್ಲಿ ಪ್ರಾಚೀನ ಕಾಲದಲ್ಲಿ ನೆಲೆಸಿರಬೇಕು. ಎಂಬಂತಹ ಸುಳಿವುಗಳನ್ನು ಈ ಹೆಸರುಗಳು ನೀಡುತ್ತವೆ. ಜನಾಂಗೀಯ ಅಧ್ಯಯನದಲ್ಲಿ ಇಂತಹ ಸ್ಥಳನಾಮಗಳು ದಿಕ್ಸೂಚಿಯಾಗಲಿವೆ.

"ಇತಿಹಾಸವನ್ನು ಅರಿಯದವನು ಇತಿಹಾಸವನ್ನು ಸೃಷ್ಟಿಸಲಾರ" ಎಂಬ ಮಾತೊಂದಿದೆ. ಅಂತೆಯೇ ಸ್ಥಳನಾಮಗಳ ಅಭ್ಯಾಸಿ ಅಧ್ಯಯನಕಾಂಕ್ಷಿಯಾದವರು ಈ ಕ್ಷೇತ್ರದಲ್ಲಾಗಿರುವ ಕೃಷಿಯನ್ನು ಅರಿಯುವ ತವಕ ಹೊಂದಿರುವುದು ಸಹಜ ಹಾಗಾಗಿ ರೂಪಿತಗೊಂಡ ಅಧ್ಯಯನವೇ ಮುಂದಿನದಾಗಿದೆ. ಸ್ಥಳನಾಮಗಳ ಬಗೆಗೆ ಪಾಶ್ಚಿಮಾತ್ಯರಲ್ಲಿ ಮನೆಮಾಡಿಕೊಂಡಿರುವ ಕಾಳಜಿ ಕಳಕಳಿ. ಅಧ್ಯಯನಕಾಂಕ್ಷಿಗಳನ್ನು ಈ ಅಧ್ಯಯನದಲ್ಲಿ ವಿವರಿಸಿರುವುದಲ್ಲದೇ. ಈ ವಿಷಯಲ್ಲಿ ಭರತಖಂಡ ಮತ್ತು ಕರ್ನಾಟಕವನ್ನು ಆವರಿಸಿದ್ದ ಒಂದು ರೀತಿಯ ಅಸಡ್ಡೆ, ಅವಜ್ಞತೆಗಳನ್ನು ಗುರುತಿಸಲಾಗಿದೆ. ಈ ಬಗೆಯ ಅಧ್ಯಯನಕ್ಕೆ ಭದ್ರ ಬುನಾದಿಯನ್ನು ಹಾಕಿಕೊಟ್ಟ ವಿವಿಧ ವಿದ್ವಾಂಸರ ಕೊಡುಗೆಯನ್ನು ಸ್ಮರಿಸಲಾಗಿದೆ. ಅವರು ಹಚ್ಚಿಟ್ಟ ಕೈ ದೀವಿಗೆಯ ಬೆಳಕಿನಲ್ಲಿ ನಡೆಯಬೇಕಾದ ಕಾರ್ಯ ಅಪಾರವಾದುದೆಂಬುದನ್ನು ಸ್ಮರಿಸಲಾಗಿದೆ.

ಸ್ಥಳನಾಮಗಳ ಅಧ್ಯಯನವನ್ನು ಗಂಭೀರವಾಗಿ ತೆಗೆದುಕೊಂಡು ಅಧ್ಯಯನ ಮಾಡಿದ ಬಹುತೇಕ ವಿದ್ವಾಂಸರು ಸ್ಥಳನಾಮಗಳನ್ನು ಹಲವು ವರ್ಗಗಳಲ್ಲಿ ಗುರುತಿಸುತ್ತಾರೆ. ಈ ಪ್ರಚಲಿತ ವರ್ಗೀಕರಣವು ಯಾವುದೋ ಒಂದು ಪ್ರದೇಶಕ್ಕೆ ಮಾತ್ರ ಅನ್ವಯಿಸುವಂತೆ ಸೀಮಿತವಾಗಿರದೇ ಜಗತ್ತಿನ ಯಾವುದೇ ಪ್ರದೇಶದ ಸ್ಥಳನಾಮಗಳಿಗೂ ಅನ್ವಯವಾಗುವ ಮಾಹಿತಿಯನ್ನು ಪಡೆದಿರುತ್ತದೆ. ಸ್ಥಳನಾಮಗಳ ಪ್ರಚಲಿತ ವರ್ಗೀಕರಣವನ್ನು ಅಧ್ಯಯನ ಮಾಡುವ ಸಲುವಾಗಿ ಮೀಸಲಾದ ಎರಡನೇ ಅಧ್ಯಾಯ. ಈ ಅಧ್ಯಾಯದ ಬಲದಿಂದ ಸ್ಥಳನಾಮಗಳು ಯಾವ ಯಾವ ಮೂಲದಿಂದ

ಹುಟ್ಟಲು ಸಾಧ್ಯವೆಂಬ ಸ್ಥೂಲ ಚಿತ್ರಣ ದೊರಕಿದಂತಾಗಿದೆ. ಮೂರನೇ ಅಧ್ಯಾಯದಲ್ಲಿ ವಿದ್ವಾಂಸರ ವರ್ಗೀಕರಣಕ್ಕೆ ಅನುಗುಣವಾಗಿ ಶಾಸನೋಕ್ತ ಸ್ಥಳನಾಮಗಳ ವರ್ಗೀಕರಣ ವಿಭಜನೆ ಮಾಡಿ ವಿಸ್ತರಣೆಯನ್ನು ನೀಡಲಾಗಿದೆ. ನಾಲ್ಕನೇಯ ಅಧ್ಯಾಯದಲ್ಲಿ ಭಾಷಿಕ ವಿಶ್ಲೇಷಣೆಯಲ್ಲಿ ವ್ಯಾಕರಣಾತ್ಮಕ ವಿಚಾರಗಳಾದ ಸಂಧಿ, ಸಮಾಸ, ಸಂಬಂಧಕಾರಕ ಮತ್ತು ಭಾಷಾ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಆದಿಸ್ವರಲೋಪ, ಪದಮಧ್ಯಲೋಪ, ಸದೃಶಾಕ್ಷರ ಲೋಪ, ಸೌಲಭ್ಯಕಾಂಕ್ಷೆ, ತಾಲವೀಕರಣ, ಸಂಸ್ಕೃತೀಕರಣ ಮುಂತಾದವುಗಳು ಸ್ಥಳನಾಮಗಳಲ್ಲಿ ಕಾಣಬರುವುದನ್ನು ಉದಾಹರಣೆಗಳ ಮೂಲಕ ದಾಖಲಿಸಲಾಗಿದೆ. ಶಾಸನಗಳಲ್ಲಿ ಭಾಷೆಯ ಯಾವ ನೆಲೆಯಲ್ಲಿ ಬೆಳೆದುಕೊಂಡು ಬಂದಿದೆಂಬುದನ್ನು ಗುರುತಿಸುವಲ್ಲಿ ಈ ಅಧ್ಯಯನವು ಸಹಾಯಕವಾಗಿದೆ.

ಸ್ಥಳನಾಮಗಳನ್ನು ಭಾಷಿಕ ಘಟಕಗಳೆಂದೂ ಅಧ್ಯಯನ ಮಾಡುವುದು ಮುಖ್ಯವಾಗಿದೆ. ಸ್ಥಳನಾಮಗಳಿಂದ ಅನೇಕ ಭಾಷಿಕ ಚಹರೆಗಳು ತಿಳಿಯುತ್ತವೆ. ಭಾಷೆ ಒಂದು ಸಂಸ್ಕೃತಿಯ ಮಹತ್ವದ ವಾಹಕ. ಇಂತಹ ಅಂಶಗಳಿಂದ ಸಮಾಜದ ಮತ್ತು ಭೌಗೋಳಿಕ ಅಧ್ಯಯನ ಮಾಡಲು ಸಾಧ್ಯ. ಶಂಬಾಜೋಷಿಯವರು ಸ್ಥಳನಾಮಗಳ ಭಾಷಿಕ ಅಂಶಗಳಿಂದಲೇ ಕನ್ನಡ ನಾಡಿನ ಭೌಗೋಳಿಕ ಮೇರೆಗಳನ್ನು ಭಾರತದಾದ್ಯಂತ ಅನ್ವೇಷಿಸುತ್ತಾರೆ. ಆ ಮೂಲಕ ಕನ್ನಡ ಸಂಸ್ಕೃತಿಯ ಹುಡುಕಾಟವನ್ನು ಎಡೆಗಳ ಮುಖಾಂತರ ವಿವರಿಸುತ್ತಾರೆ. ಈ ಸ್ಥಳನಾಮಗಳ ಅಧ್ಯಯನದಲ್ಲಿ ವಿಜಯಪುರ ತಾಲ್ಲೂಕಿನ ಸಾಂಸ್ಕೃತಿಕ ಪರಿಸರವನ್ನು ಕಟ್ಟಿಕೊಡಲಾಗಿದೆ.

"ವಿಜಯಪುರ ಪ್ರದೇಶದ ಶಾಸನೋಕ್ತ ಸ್ಥಳನಾಮ ಅಧ್ಯಯನ ಈ ಅಧ್ಯಾಯದಿಂದ ಕಂಡುಕೊಂಡ ಅಧ್ಯಯನದ ಸಂದರ್ಭದಲ್ಲಿ ಕಂಡುಕೊಂಡ ಫಲಿತಾಂಶಗಳು ಅಧ್ಯಯನಗಳು ಬಹುತೇಕ ಭಾಷಾಶಾಸ್ತ್ರದ ಹಿನ್ನಲೆಯ ಮಾದರಿಯಲ್ಲಿ ಸಿದ್ದಪಡಿಸಲಾಗಿದೆ. ಅಂದರೆ ಸ್ಥಳನಾಮಗಳ ಸಾಮಾಜಿಕ ನೆಲೆ, ಚಾರಿತ್ರಿಕ ನೆಲೆಗಳ ಹಿನ್ನೆಯಲ್ಲಿ ಹೊಸ ಹೊಸ ಅಂಶಗಳನ್ನು ಪ್ರಸ್ತುತಪಡಿಸಲಾಗಿದೆ.

ಸ್ಥಳನಾಮಗಳನ್ನು ವರ್ಗೀಕರಿಸುವ ಮೂಲಕ ಭೌಗೋಳಿಕ ಚಹರೆಯನ್ನು ಅಲ್ಲಿನ ಮೂಲ ಸ್ವರೂಪವನ್ನು ವಿಂಗಡಿಸಿ ಜಲವಾಚಿ, ಶಿಲಾವಾಚಿ, ಸಸ್ಯವಾಚಿ, ವ್ಯಕ್ತಿವಾಚಿ, ಜನಾಂಗವಾಚಿ ಮುಂತಾದ ಮೂಲ ಸ್ಥಳನಾಮಗಳೊಂದಿಗೆ ಜಾತಿ, ವರ್ಗ, ವೃತ್ತಿ, ದೈವ, ವ್ಯಕ್ತಿ, ಪ್ರಾಣಿ ಮುಂತಾದ ಸಾಂಸ್ಕೃತಿಕ ಅಂಶಗಳನ್ನು ಪ್ರತಿನಿಧಿಸುವ ಸ್ಥಳನಾಮಗಳಿರುವುದನ್ನು ಗುರುತಿಸಲಾಗಿದೆ. ವಿಜಾಪುರ ಪರಿಸರದಲ್ಲಿ ವರ್ಣಮಾಲೆ ವಿಷಯಕ್ಕೆ ಸಂಬಂಧಿಸಿದಂತೆ ಮತ್ತು ವ್ಯಂಜನಗುಚ್ಚಗಳು ಸಂಧಿ ಸ್ಥಾನದಲ್ಲಿ ಕಾಣಿಸಿಕೊಳ್ಳುತ್ತವೆ.

ಉದಾ: ಅರ್ಜುನಗಿ, ಅರ್ಜುಣಗಿ ಇದು ರಾಮಾಯಣ ಮಹಾಭಾರತದ ಪುರಾಣ ದೃಷ್ಟಿಯಿಂದ ಪಾಂಡವರಲ್ಲಿ ಸ್ಪುರದ್ರೂಪಿಯಾದವನು. ಚತುರನು. ಧೀರಶಾಲಿಯಾದವನು. ಯುದ್ಧದಲ್ಲಿ ವೀರಾವೇಷದಿಂದ ಹೋರಾಡುವ ಚಾಣಕ್ಯನ ವಿವರಣೆಯನ್ನು ನೀಡಲಾಗಿದೆ.

ಈ ಪ್ರದೇಶದ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಮಹತ್ವದ ಸ್ಥಾನಪಡೆದ ಇಂಗಳೇಶ್ವರ, ಬಬಲೇಶ್ವರ. ಹೀಗೆ ತಾಲ್ಲೂಕಿನ ಸಾಂಸ್ಕೃತಿಕ ಅಂಶಗಳನ್ನು ಸಾಂದರ್ಭಿಕವಾಗಿ ಚರ್ಚಿಸಿ ಪರಿಚಯಿಸಲಾಗಿದೆ.

ಸ್ಥಳನಾಮಗಳನ್ನು ವಿಶಿಷ್ಟ ಐತಿಹಾಸಿಕ ಆಕಾರಗಳೆಂದು ವರ್ಣಿಸಲಾಗಿದೆ. ಚಾರಿತ್ರಿಕ ಸಂಗತಿಗಳಿಂದ ಹೆಸರುಗಳು ವಿವಿಧ ಆಯಾಮಗಳಿಂದ ತಿಳಿದು ಬಂದಿವೆ. ಪ್ರಾಚೀನ ಕಾಲದಿಂದಲೂ ಆಳಿ ರಾಜಮನೆತನ, ರಾಜ ಪರಿವಾರ ಸ್ಥಳಗಳು ಹಾಗೂ ಕೆಲವು ಹಳೇ ಗ್ರಾಮಗಳಿಗೆ ಪ್ರತಿ ನಾಮಕರಣ ಮಾಡಲಾಗಿದೆ. ಶಾಸನೋಕ್ತ ಸ್ಥಳನಾಮಗಳ ಮೂಲಕ ಭಾಷೆಯ ಹಾಗೂ ಚಾರಿತ್ರಿಕ ಮತ್ತು ದಾನದತ್ತಿಗಳನ್ನು ನೀಡಿದ ವಿವರಗಳನ್ನು ಕುರಿತು ಚರ್ಚಿಸಲಾಗಿದೆ.

ಚರಿತ್ರೆ ಮತ್ತು ಸ್ಥಳನಾಮಗಳ ಮೂಲಕ ಸಂಸ್ಕೃತಿ ಭಾಷೆಯ ತಾಂತ್ರಿಕ ಬೆಳವಣಿಗೆಯನ್ನು ಅಧ್ಯಯನದಲ್ಲಿ ಅಭ್ಯಾಸಿಸಿದೆ.

ಸಾಮಾಜಿಕ ಅಧ್ಯಯನದಿಂದ ವೃತ್ತಿ ಜಾತಿಯಾಧಾರಿತ ಸ್ಥಳನಾಮಗಳ ಕುರಿತು ಬಹುಮುಖ್ಯವಾಗಿ ಚರ್ಚಿಸಲಾಗಿದೆ.

ಹೀಗೆ ಸಮಕಾಲೀನ ರಾಜಕಾರಣದ ವ್ಯಕ್ತಿನಾಮಗಳು ಸ್ಥಳನಾಮಗಳಿಗೆ ನಿರ್ದೇಶನಗೊಳ್ಳುತ್ತಿರುವುದು ಇತ್ತೀಚೆಗೆ ಕಂಡು ಬರುತ್ತದೆ. ಆಧುನಿಕತೆಯ ಪ್ರಭಾವದಿಂದ ಸ್ಥಳಗಳಿಗೆ ಇಡುವ ಹೆಸರುಗಳು ಇತ್ತೀಚೆಗೆ ಬದಲಾಗುತ್ತಿವೆ. ಇವು ಅಧ್ಯಯನದ ಮುಖ್ಯ ಫಲಿತಗಳಾಗಿವೆ.

ಶಾಸನೋಕ್ತ ಸ್ಥಳನಾಮಗಳು ಪ್ರತಿನಾಮಕರಣಗೊಂಡ ನಾಮಗಳು. ಅಧ್ಯಯನದಲ್ಲಿ ತೀವ್ರವಾಗಿ ತೊಡಗಿಸಿಕೊಂಡಾಗ ಹೊಸ ಹೊಸ ಮುಖಗಳು ದಾರಿಗಳು ಪರಿಚಯವಾಗುತ್ತಾ ಹೋಗುತ್ತವೆ. ಅಂತಹ ಪರಿಸರದ ಅನುಭವ ಪ್ರಸ್ತುತ ಅಧ್ಯಾಯದಲ್ಲಿ ಕಾಣಲಾಗಿದೆ.

ಸ್ಥಳನಾಮಗಳ ಅಧ್ಯಯನವನ್ನು ಗಂಭೀರವಾಗಿ ತೆಗೆದುಕೊಂಡು ಅಧ್ಯಯನ ಮಾಡಿದ ಬಹುತೇಕ ವಿದ್ವಾಂಸರು ಸ್ಥಳನಾಮಗಳನ್ನು ಹಲವು ವರ್ಗಗಳಲ್ಲಿ ಗುರುತಿಸುತ್ತಾರೆ. ಈ ಪ್ರಚಲಿತ ವರ್ಗೀಕರಣವು ಯಾವುದೇ ಒಂದು ಪ್ರದೇಶಕ್ಕೆ ಮಾತ್ರ ಅನ್ವಯಿಸುವಂತಿರದೇ ಸೀಮಿತವಾಗಿರದೇ ಸ್ಥಳನಾಮಗಳಿಗೂ ಅನ್ವಯವಾಗುವ ಮಾನ್ಯತೆಯನ್ನು ಪಡೆದಿರುತ್ತದೆ.

ಆಧುನಿಕರಣದ ಹೆಸರಿನಲ್ಲಿ ಮನುಷ್ಯ ಮತ್ತು ಪ್ರಕೃತಿ ಸಂಬಂದಗಳನ್ನು ಛಿದ್ರಗೊಳಿಸಲಾಗುತ್ತದೆ. ಇಂತಹ ಕಲುಷಿತ ವಾತಾವರಣದಲ್ಲಿಯೂ ಮನುಷ್ಯ- ಮನುಷ್ಯರೊಂದಿಗಿನ ಪ್ರೀತಿಯಿಂದ ಬೆರೆಯುವ ಮಾತನಾಡುವ ಆಯಾ ಸಾಂಸ್ಕೃತಿಕ ಪರಿಸರದ ಚಹರೆಗಳನ್ನು ಅರಿಯುವ ಅಪರೂಪದ ಅವಕಾಶವನ್ನು ಈ ಅಧ್ಯಯನ ಕಲ್ಪಿಸಿಕೊಟ್ಟಿತು. ಈ ಪ್ರದೇಶದ ಸ್ಥಳನಾಮ ಅಧ್ಯಯನದಿಂದ ಆ ಪ್ರದೇಶದ ಚರಿತ್ರೆ ಜನರ ಅಧ್ಯಯನಕ್ಕೆ ಈ ಅಧ್ಯಯನ ಆಕಾರವಾಗುತ್ತದೆ. ಈ ಅಧ್ಯಯನದ ಸಂದರ್ಭದಲ್ಲಿ ಭಾಷಾ ಶಾಸ್ತ್ರದ ಅಧ್ಯಯನದ ವಿಭಾಗಗಳನ್ನು ಅಳವಡಿಸಿಕೊಳ್ಳಲಾಗಿದೆ.

ಸ್ಥಳನಾಮ ಅಧ್ಯಯನ ಕ್ಷೇತ್ರವು ಸೀಮಿತ ವ್ಯಾಪ್ತಿಯನ್ನು ಹೊಂದಿಲ್ಲ ಅದರ ವ್ಯಾಪ್ತಿ ವಿಶಾಲವಾದುದು. ಲಭ್ಯವಿರುವ ಎಲ್ಲಾ ನೆಲೆಗಳಲ್ಲಿ ಸ್ಥಳನಾಮಗಳನ್ನು ಪರಿಶೀಲಿಸುವ, ವಿಮರ್ಶಿಸುವ, ವ್ಯಾಖ್ಯಾನಿಸುವ ಕಾರ್ಯ ವೈಖರಿಯನ್ನು ಕೈಗೊಂಡರೆ ಸ್ಥಳನಾಮ ಅಧ್ಯಯನವು ವಿವಿಧ ಕ್ಷೇತ್ರಗಳ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ.

ಒಟ್ಟಾರೆಯಾಗಿ ವಿಜಯಪುರ ಜಿಲ್ಲೆಯು ಪ್ರಸಿದ್ಧವಾದ ಕಟ್ಟಡಗಳ ಆಗರವಾಗಿದೆ. ಒಂದೊಂದು ಕಟ್ಟಡವು ಒಂದೊಂದು ಐತಿಹಾಸಿಕ ಪರಂಪರೆಯನ್ನು ಅದರ ಇತಿಹಾಸವನ್ನು ಸೃಷ್ಟಿಸಿಕೊಳ್ಳುತ್ತವೆ. ಈ ಇತಿಹಾಸದ ಹಿನ್ನಲೆಯಲ್ಲಿ ಪ್ರಾಚೀನ ಮತ್ತು ಪ್ರಸ್ತುತತೆಯ ಅರಿವನ್ನು ತಿಳಿಸಿಕೊಡುತ್ತವೆ. ಹಾಗೆಯೇ ಸ್ಥಳನಾಮಗಳಲ್ಲಿಯೇ ವಿಭಿನ್ನವಾದ, ಸ್ವಾರಸ್ಯಕರವಾದ ಹುಟ್ಟಿನ ಮೂಲ ಮತ್ತು ದೇಶಿ ಮತ್ತು ಪಾಶ್ಚತ್ಯ ವಿದ್ವಾಂಸರುಗಳ ಅಧ್ಯಯನದಿಂದ ನಾಮಗಳ ಬೆಳವಣಿಗೆ, ಅದರ ಪ್ರಸ್ತುತ ವರ್ಗೀಕರಣಗಳು ಮತ್ತು ಬಹುಮುಖ್ಯವಾಗಿ ಭಾಷಿಕ ವಿಶ್ಲೇಷಣೆ ಪ್ರಮುಖವಾದುದ್ದು.

೧. ಆಕರ ಗ್ರಂಥಗಳು

೨. ಪ್ರಕಟಿತ ಮತ್ತು ಅಪ್ರಕಟಿತ ಶಾಸನಗಳ ಪಟ್ಟಿ

ಆಕರ ಗ್ರಂಥಗಳು

೧. ಕಲಬುರ್ಗಿ ಎಂ.ಎಂ.; ಮಾರ್ಗ, ಸಂ-೨, ೧೯೯೮, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು.

೨. ಕಲಬುರ್ಗಿ ಎಂ.ಎಂ.; ವಿಜಾಪುರ ಜಿಲ್ಲೆಯ ಶಾಸನ ಸೂಚಿ, (೧೯೭೬) ಕನ್ನಡ ಅಧ್ಯಯನ ಪೀಠ ಪ್ರಸಾರಾಂಗ ಧಾರವಾಡ.

೩. ಕಲಬುರ್ಗಿ ಎಂ.ಎಂ.; ಸಮಾಧಿಬಲಿದಾನ ವೀರಮರಣ ಸ್ಮಾರಕಗಳು (೧೯೮೦) ಬೆಂಗಳೂರು.

೪. ಕೊಪ್ಪಾ. ಎಸ್.ಕೆ.; ತರ್ದವಾಡಿ ನಾಡು ಒಂದು ಅಧ್ಯಯನ (೧೯೯೦) ಪ್ರತಿಭಾ ಪ್ರಕಾಶನ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೫. ಗೋಪಾಲಕೃಷ್ಣ ವಿ.; ಸ್ಥಳನಾಮ ಅಧ್ಯಯನಗಳು, ೧೯೮೭, ವಿದ್ಯಾಗಿರಿ ಪ್ರಕಾಶನ, ಕೋಲಾರ.

೬. ಜವರೇಗೌಡ ದೇ.; ಸ್ಥಳನಾಮ ವ್ಯಾಸಾಂಗ, ೧೯೯೦, ಸಹ್ಯಾದ್ರಿ ಪ್ರಕಾಶನ, ಮೈಸೂರು.

೭. ದೇವರಕೊಂಡ ರೆಡ್ಡಿ; ಮುಳುಗಡೆ ಗ್ರಾಮಗಳಲ್ಲಿನ ಶಾಸನಗಳ ಅಧ್ಯಯನ, ೨೦೦೫,

೮. ದೇವೇಂದ್ರಪ್ಪ ಜೆ.; ಆಂದ್ರ-ಕರ್ನಾಟಕ ಗಡಿಪ್ರದೇಶದ ಸ್ಥಳನಾಮಗಳು, ೨೦೦೪, ವಿಕಾಸ ಪ್ರಕಾಶನ, ಹೊಸಪೇಟೆ.

೯. ನಾಗಾಚಾರಿ ಎಸ್.; ನಾಮಸಂಪದ, ೨೦೦೯, ಸೋನಾ ಪ್ರಕಾಶನ, ಬೋಗಾಧಿ, ಮೈಸೂರು.

೧೦. ನಾರಾಯಣ ಕೆ.ವಿ. (ಸಂ); ಸ್ಥಳನಾಮಗಳ ಪರಿವರ್ತನೆ ಮತ್ತು ಪ್ರಭಾವ, ೧೯೯೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧. ನಾರಾಯಣ ಕೆ.ವಿ.; ವ್ಯಕ್ತಿನಾಮಗಳು ಸ್ವರೂಪ ಮತ್ತು ವಿಶ್ಲೇಷಣೆ, ೨೦೦೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨. ಭಟ್ಟ ಕೆ.ರ.; ಸ್ಥಳನಾಮ ನಿರ್ದೇಶನ, ೧೯೭೭, ಭವ್ಯವಾಣಿ ಪ್ರಕಾಶನ.

೧೩. ರಘುಪತಿಭಟ್ಟ ಕೆಮ್ತೂರು; ತುಳುನಾಡಿನ ಸ್ಥಳನಾಮಗಳು, ೧೯೮೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೪. ವಿಶ್ವನಾಥಯ್ಯ ಶಿ.ಎಂ.; ಕಡೂರು ತಾಲ್ಲೂಕಿನ ಸ್ಥಳನಾಮಗಳು, ೨೦೦೪, ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

೧೫. ವಿಶ್ವನಾಥ್; ಸಕಲೇಶಪುರ ಪರಿಸರದ ಸ್ಥಳನಾಮಗಳು, ೧೯೯೬, ದೇವಿ ಪ್ರಕಾಶನ, ಮೈಸೂರು.

೧೬. ವಿಶ್ವನಾಥ; ಸ್ಥಳನಾಮಗಳು, ೧೯೯೫, ಸಂವಹನ ಪ್ರಕಾಶನ, ಮೈಸೂರು.

೧೭. ಶಂಭಾ ಜೋಷಿ; ಎಡೆಗಳು ಹೇಳುವ ಕಂನಾಡಕಥೆ, ೧೯೪೭, ಮಾದವ ಬಲ್ಲಾಳ ಬಂಧುಗಳು, ಧಾರವಾಡ.

ಇತಿಹಾಸ ದರ್ಶನ ಸಂಪುಟಗಳು

* ನಾಗರಾಜ್ ಎಂ.ಜಿ. ಇತಿಹಾಸ ದರ್ಶನ ಸಂಪುಟ– ೧೭ (೨೦೦೨) ಕರ್ನಾಟಕ ಇತಿಹಾಸ ಅಕಾಡಮಿ(ರಿ) ಬೆಂಗಳೂರು

* ಕೃಷ್ಣಾ ಕೊಲ್ಹಾರ ಕುಲಕರ್ಣಿ; ವಿಜಾಪುರ ಅದಿಲ್‌ಶಾಹಿ ಕಾಲದ ಹಿಂದೂ–ಮುಸ್ಲಿಂ ಸಂಬಂಧ ಆಕರಗಳು ಮತ್ತು ಅಧ್ಯಯನ, ಸಂ–೯, ೧೪೮೯.

* ಸುಬಾಸ ರಾ. ಚಿಂಚೋಳಿ, ಮೇಲಕಾರ ಎಸ್.ಕೆ.; ಸಿಂದಗಿ ತಾಲೂಕು ಜೈನ ವಾಸ್ತುಶಿಲ್ಪ ಸಮೀಕ್ಷೆ, ಸಂ–೧೭, ೨೦೦೨.

* ಆದಪ್ಪ ಪಾಸೋಡಿ; ಇಂಡಿ ತಾಲೂಕಿನ ಅಪ್ರಕಟಿತ ಶಾಸನಗಳು, ಸಂ–೧೬, ೨೦೦೧.

* ಸೌತ್‌ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್; ಸಂಪುಟ–೨೦, ಕ್ರಿ.ಶ. (೧೨೪೪) ಕಲಕೇರಿ ಸಿಂದಗಿ ತಾಲ್ಲೂಕು.

* ಮುನಿಸ್ವಾಮಿ ಆರ್. ಬಿಜಾಪುರ ಜಿಲ್ಲೆಯ ಗ್ಯಾಸೆಟಿಯರ್, (೧೯೯೯), ಅಭಿಮಾನಿ ಪ್ರಕಾಶನ.

* ಬಸವಾರಾಧ್ಯ ಎಂ.ಎ.; ಸಂಕ್ಷಿಪ್ತ ಕನ್ನಡ ನಿಘಂಟು– (೧೯೭೫) ಕನ್ನಡ ಸಾಹಿತ್ಯ ಪರಿಷತ್ತು.

ವಿಜಯಪುರ ಜಿಲ್ಲೆಯ ತಾಲೂಕುವಾರು ಪ್ರಕಟಿತ ಮತ್ತು ಅಪ್ರಕಟಿತ ಶಾಸನಗಳ ಪಟ್ಟಿ

• ಬಿಜಾಪುರ ತಾಲೂಕು:

* ಶಾಸನವಿದ್ದ ಗ್ರಾಮಗಳ ಸಂಖ್ಯೆ-೨೦
* ತಾಲೂಕಿನ ಒಟ್ಟು ಶಾಸನಗಳ ಸಂಖ್ಯೆ-೧೨೦
* ತಾಲೂಕಿನ ಪ್ರಕಟಿತ ಶಾಸನಗಳ ಸಂಖ್ಯೆ-೮೪
* ತಾಲೂಕಿನ ಅಪ್ರಕಟಿತ ಶಾಸನಗಳ ಸಂಖ್ಯೆ-೭

• ಇಂಡಿ ತಾಲೂಕು:

* ಶಾಸನವಿದ್ದ ಗ್ರಾಮಗಳ ಸಂಖ್ಯೆ-೩೬
* ತಾಲ್ಲೂಕಿನ ಒಟ್ಟು ಶಾಸನಗಳ ಸಂಖ್ಯೆ-೮೬
* ತಾಲ್ಲೂಕಿನ ಒಟ್ಟು ಶಾಸನಗಳ ಸಂಖ್ಯೆ-೭೬
* ತಾಲ್ಲೂಕಿನ ಅಪ್ರಕಟಿತ ಶಾಸನಗಳ ಸಂಖ್ಯೆ-೧೦

• ಸಿಂದಗಿ ತಾಲೂಕು:

* ಶಾಸನವಿದ್ದ ಒಟ್ಟು ಗ್ರಾಮಗಳ ಸಂಖ್ಯೆ-೩೦
* ತಾಲ್ಲೂಕಿನ ಒಟ್ಟು ಶಾಸನಗಳ ಸಂಖ್ಯೆ-೯೭
* ತಾಲ್ಲೂಕಿನ ಪ್ರಕಟಿತ ಶಾಸನಗಳ ಸಂಖ್ಯೆ-೯೨
* ತಾಲ್ಲೂಕಿನ ಅಪ್ರಕಟಿತ ಶಾಸನಗಳ ಸಂಖ್ಯೆ-೫

• ಬಸವನ ಬಾಗೇವಾಡಿ:

* ಶಾಸನವಿದ್ದ ಒಟ್ಟು ಗ್ರಾಮಗಳ ಸಂಖ್ಯೆ -೨೭
* ತಾಲ್ಲೂಕಿನ ಒಟ್ಟು ಶಾಸನಗಳ ಸಂಖ್ಯೆ-೮೧
* ತಾಲ್ಲೂಕಿನ ಪ್ರಕಟಿತ ಶಾಸನಗಳ ಸಂಖ್ಯೆ-೭೮
* ತಾಲ್ಲೂಕಿನ ಅಪ್ರಕಟಿತ ಶಾಸನಗಳ ಸಂಖ್ಯೆ-೩

• **ಮುದ್ದೇಬಿಹಾಳ ತಾಲೂಕು:**

* ಶಾಸನವಿದ್ದ ಒಟ್ಟು ಗ್ರಾಮಗಳ ಸಂಖ್ಯೆ-೩೯

* ತಾಲ್ಲೂಕಿನ ಒಟ್ಟು ಶಾಸನಗಳ ಸಂಖ್ಯೆ-೭೩

* ತಾಲ್ಲೂಕಿನ ಪ್ರಕಟಿತ ಶಾಸನಗಳ ಸಂಖ್ಯೆ-೭೧

* ತಾಲ್ಲೂಕಿನ ಅಪ್ರಕಟಿತ ಶಾಸನಗಳ ಸಂಖ್ಯೆ-೨

ಶಾಸನಶಾಸ್ತ್ರ ವಿಭಾಗ